ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 18

ಸೆಪ್ಟೆಂಬರ್ 30, 2007

ಕನ್ನಡ ವಾರಪತ್ರಿಕೆ

ರೂ. 5/-



ಪರಮಾಣು ಒಪ್ಪಂದದ ಹಿಂದಿನ ಆಟಗಳು



ಪೇಜ್ 6

ಸೇತುಸಮುದ್ರಂ : ನಂಬಿಕೆ - ದುರ್ಬಳಕೆ



ಪುರಸಭೆ, ನಗರಸಭೆಗಳ ಇಂದಿನ ಸ್ವರೂಪ

ಕೊಂದವರ ರಕ್ಷಣೆಗೆ ಕೆಡಿಎಫ್ ಸರ್ಕಾರ



ಸಿನಿಮಾಗಳಲ್ಲಿ ನಾಯಕಿಯರ ಕಲ್ಪನೆ

ನಡುನೀರಿನಲ್ಲಿ ನಿಲ್ಲಿಸಿದ ನೆರೆಹಾವಳಿ

ಕವಿ ಶಿವೇಶ್ವರ ದೊಡ್ಡಮನಿ ನೆನಪು

ಮಾನ್ಯ ಸಂಪಾದಕರೇ,

'ಜನಶಕ್ತಿ' ವಾರಪತ್ರಿಕೆಯು ನಾಡಿನ ಶೋಷಿತ ಜನತೆಯ ಪಕ್ಷಪಾತಿಯಾಗಿ, ಹೊಸ ವಿನ್ಯಾಸ, ಹೊಸ ಸ್ವರೂಪವನ್ನು ಧರಿಸಿಕೊಂಡು ವಾರ ವಾರ ಪ್ರಕಟವಾಗುತ್ತಿರುವುದು ಹೆಮ್ಮೆಯ ವಿಷಯ. ಅರವತ್ತು ವರ್ಷಗಳ ಹಿಂದೆ ನಿರಂಜನರು ಹುಬ್ಬಳ್ಳಿಯಿಂದ ಪ್ರಕಟಿಸುತ್ತಿದ್ದ 'ಜನಶಕ್ತಿ' ವಾರಪತ್ರಿಕೆಯ ಅಭಿಮಾನಿಗಳಲ್ಲಿ ನಾನೂ ಒಬ್ಬ. ನಿರಂಜನರ ಆಪ್ತ ಸ್ನೇಹಿತರೂ ಪತ್ರಿಕೆಯ ಉಪಸಂಪಾದಕರೂ, ಪ್ರಕಾಶಕರೂ ಆಗಿದ್ದ ಕವಿ ಶಿವೇಶ್ವರ ದೊಡ್ಡಮನಿ ಅವರ ಕುರಿತು ಈ ಕೆಲವು ಸಾಲುಗಳನ್ನು 'ಪತ್ರಿಕೆ'ಯಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ.

ಶಿವೇಶ್ವರರು ಧಾರವಾಡ ಸಮೀಪದ ನವಿಲೂರು ಗ್ರಾಮದವರು. 7.5.1925ರಂದು ಒಂದು ನೇಕಾರರ ಕುಟುಂಬದಲ್ಲಿ ಇವರ ಜನನವಾಯಿತು. ಆರು ತಿಂಗಳ ಕೂಸಾಗಿದ್ದಾಗಲೇ ಅವರ ತಂದೆ ಈಶ್ವರಪ್ಪ ಕಾಲವಾದರು. ತಾಯಿ ಚನ್ನವೀರಮ್ಮ ಮಗನನ್ನು ಸಾಕಿ ದೊಡ್ಡವನನ್ನಾಗಿ ಮಾಡಿದರು. ಮ್ಯಾಟ್ರಿಕ್ ಮುಗಿಸಿದ ಶಿವೇಶ್ವರರಿಗೆ ಹೆಚ್ಚು ಖರ್ಚಿನ ಕಾಲೇಜ್ ಶಿಕ್ಷಣವನ್ನು ದೊರಕಿಸಿಕೊಳ್ಳಲಾಗಲಿಲ್ಲ. ಮುಂದೆ ಎರಡು ಮೂರು ವರ್ಷ ಅವರು ಕಾರಕೂನರಾಗಿ ಕೆಲಸ ಮಾಡಿದರು. ತಾಯಿಯ ಅಪೇಕ್ಷೆಯಂತೆ ಅವರು ಈರಮ್ಮನನ್ನು ಮದುವೆಯಾದರು. ಮುಂದೆ ಅವರಿಗೆ ಕಾವ್ಯಾಕ್ಷಿ (ಬಸಮ್ಮ), ರವಿ ಮತ್ತು ಪೂರ್ಣಿಮಾ ಎಂಬ ಮೂವರು ಮಕ್ಕಳಾದರು. ಕವಿ ಚನ್ನವೀರ ಕಣವಿ ಅವರ ಸೂಚನೆಯ ಮೇರೆಗೆ ಕಾವ್ಯಾಕ್ಷಿಯನ್ನು ಶಾಲೆಗೆ ದಾಖಲು ಮಾಡಲು ನಾನು ಹೋಗಿದ್ದೆ.

ಹೈಸ್ಕೂಲ್‌ನಲ್ಲಿದ್ದಾಗಲೇ ಸಾಹಿತ್ಯದ ಕಡೆ ಅವರ ಒಲವು ಹರಿದಿತ್ತು. ಜನಪದ ಗೀತೆಗಳನ್ನು ಸಂಗ್ರಹಿಸುತ್ತಾ, ಜತೆಯಲ್ಲೆ ಸ್ವತಂತ್ರವಾಗಿ ಕವಿತೆಗಳನ್ನು ರಚಿಸುತ್ತಾ ಶಿವೇಶ್ವರ ಕವಿಯಾದರು. ಕಾವ್ಯ ಸಾಲದೆನಿಸಿದಾಗ ಅವರು ಗದ್ಯ ರೂಪದಲ್ಲೂ ಬರೆಯತೊಡಗಿದರು. ಸುತ್ತಲಿನ ಸಮಾಜದ ಬಗ್ಗೆ, ದುಡಿಯುವ ಜನರು ಅನುಭವಿಸುವ ಸಂಕಟಗಳ ಬಗ್ಗೆ ದೊಡ್ಡಮನಿ ಅವರು ಪ್ರತಿಕ್ರಿಯೆ ವ್ಯಕ್ತಪಡಿಸತೊಡಗಿದಾಗ ಅವರ ಕಾವ್ಯಶಕ್ತಿ ಬಲಿಯಿತು. ಉತ್ತರಕರ್ನಾಟಕದಲ್ಲಿ ಅದೇ ಹೊಸತಾಗಿ ಆರಂಭವಾಗಿ ಬೆಳೆಯಲಾರಂಭಿಸಿದ್ದ ರೈತರ ಚಳುವಳಿ, ಕೂಲಿಕಾರರ ಹೋರಾಟಗಳು ಅವರನ್ನು ಆಕರ್ಷಿಸಿದವು.

1847ರ ಮೇ ದಿನದಂದು ಹುಬ್ಬಳ್ಳಿಯಲ್ಲಿ 'ಜನಶಕ್ತಿ' ಎದ್ದುಬಂದಾಗ, ತಮ್ಮ ಮುಂದಿದ್ದದ್ದು 'ನಷ್ಟ ನೋವು' ಎಂಬುದು ಗೊತ್ತಿದ್ದೂ ಶಿವೇಶ್ವರರು ಇದ್ದ ನೌಕರಿಯನ್ನು ಬಿಟ್ಟು ಪತ್ರಿಕೆಯ ಪ್ರಕಾಶಕರಾಗಿ, ಉಪ ಸಂಪಾದಕರಾಗಿ ಕೆಲಸ ಮಾಡಲು ಆರಂಭಿಸಿದರು.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಿಕ್ಕುಂಬಿ ಗ್ರಾಮ ನನ್ನ ಹುಟ್ಟೂರು. ಶಿವೇಶ್ವರರ ಹಿರಿಯರೂ ಚಿಕ್ಕುಂಬಿಯವರೇ. ಆಗಾಗ ಅವರು ಚಿಕ್ಕುಂಬಿಗೆ ಬರುತ್ತಿದ್ದುದನ್ನು, ಅವರ ಪಾಂಡಿತ್ಯಪೂರ್ಣ ಮಾತುಗಳನ್ನು ಆಲಿಸಿದವರು ಇಂದಿಗೂ ಅವರನ್ನು ಸ್ಮರಿಸುತ್ತಾರೆ. ಖ್ಯಾತ ಸಾಹಿತಿಗಳಾದ ಬಸವರಾಜ ಕಟ್ಟಿಮನಿ, ಚನ್ನವೀರ ಕಣವಿ, ಪಾಟೀಲ್ ಪುಟ್ಟಪ್ಪ ಅವರುಗಳ ಸಖ್ಯತೆಯಲ್ಲಿ ಅವರು ಬೆಳೆದಿದ್ದರು.

ಬೆಳಿಗ್ಗೆ ಬುತ್ತಿಕಟ್ಟಿಕೊಂಡು ನವಿಲೂರಿನಿಂದ ಅವರು ಹುಬ್ಬಳ್ಳಿಯ 'ಜನಶಕ್ತಿ' ಕಾರ್ಯಾಲಯಕ್ಕೆ ಬರುತ್ತಿದ್ದರು. ಅಲ್ಲಿ ನಿರಂಜನರ ಜತೆಯಾಗಿ ಆ ವಾರದ ಸಂಚಿಕೆಗೋಸ್ಕರ ದುಡಿಯುತ್ತಿದ್ದರು. 'ಜನಶಕ್ತಿ' ಕಾರ್ಯಾಲಯದಿಂದ ಹೊರಬಿದ್ದ ಮೇಲೆ ಅವರು ಧಾರವಾಡ ಸೇರಿ ಕಣವಿಯವರ ಜೊತೆಯಲ್ಲಿ ಕಾಲ ಕಳೆಯುತ್ತಿದ್ದರು.

ಮೊದಲಿನಿಂದಲೂ ಕ್ಷೀಣ ಪ್ರಕೃತಿಯವರಾದ ಶಿವೇಶ್ವರರನ್ನು ಅನಾರೋಗ್ಯ ಆಗಾಗ ಕಾಡಿಸುತ್ತಿತ್ತು. ಕಣ್ಣು ಬೇನೆಯೊಂದು ಕೊನೆಯವರೆಗೂ ಅವರನ್ನು ಅಂಟಿಕೊಂಡಿತ್ತು. ಅರೆಕುರುಡು ಸ್ಥಿತಿಯಲ್ಲಿಯೂ ಅವರು ಓದುವ ಹವ್ಯಾಸವನ್ನು ಬಿಟ್ಟಿರಲಿಲ್ಲ. 'ಚಿಮಣಿ ದೀಪ ಉರಿಸಿಕೊಂಡು ಮಾರ್ಕ್ಸ್ ಏಂಗೆಲ್ಸರ ಘೋಷಣೆಯನ್ನು ಅವರು ಓದುತ್ತಿರುವುದನ್ನು ನಾನು ನೊಡಿದ್ದೆ' ಎಂದು ನಿರಂಜನರು ಶಿವೇಶ್ವರರನ್ನು ಕುರಿತು ಬರೆಯುತ್ತಾ ಹೇಳಿದ್ದಾರೆ.

ದಿನದಿಂದ ದಿನಕ್ಕೆ ಅವರ ಆರೋಗ್ಯ ಕೆಡುತ್ತಾ ಹೋಯಿತು. ಆರೈಕೆಯನ್ನು ಅವರು ಕಡೆಗಣಿಸಿದರು. ವಿಷಮ ಜ್ವರಕ್ಕೆ ತುತ್ತಾಗಿ ಶಿವೇಶ್ವರರು 26.3.1950ರಂದು ಕೊನೆಯ ಉಸಿರೆಳೆದರು. 'ನವಿಲೂರ ಮನೆಯಿಂದ'. ಎಂಬ ಅವರ ಒಂದು ಕವನ ಸಂಕಲನ ಪ್ರಕಟವಾಗುವುದನ್ನು ಕಂಡು ಸಾಯಬೇಕೆಂಬ ಅವರ ಆಸೆ ಈಡೇರಲಿಲ್ಲ. ನಿರಂಜನರು "ನಮ್ಮ ನಡುವಿನ ಗೋಡೆ" ಎಂಬ ಕಥಾ ಸಂಗ್ರಹವೊಂದನ್ನು ಪ್ರಕಟಿಸಿ "ಸಂಗಾತಿ ಶಿವೇಶ್ವರನ ಚಿರಸ್ಮರಣೆಗೆ" ಅದನ್ನು ಅರ್ಪಿಸಿದರು. ಸಾಹಿತಿ ಶ್ರೀ ಶ್ಯಾಮಸುಂದರ ಬಿದರಕುಂದಿಯವರು ಸಂಪಾದಿಸಿದ 'ಶಿವೇಶ್ವರ ದೊಡ್ಡಮನಿ-ಜೀವನ ಹಾಗೂ ಸಾಹಿತ್ಯ' ಎಂಬ ಗ್ರಂಥವನ್ನು ಕನ್ನಡ ಪುಸ್ತಕ ಪ್ರಾಧಿಕಾರ 16.11.2000ರಂದು ಧಾರವಾಡದಲ್ಲಿ ಬಿಡುಗಡೆ ಮಾಡಿದಾಗ ನಾನೂ ಆ ಸಮಾರಮಭದಲ್ಲಿ ಭಾಗವಹಿಸಿ ಕವಿ ಶಿವೇಶ್ವರರಿಗೆ ನನ್ನ ಶ್ರದ್ಧಾಂಜಲಿ ಸಲ್ಲಿಸಿದೆನು.

- ಜಿ.ಬಿ.ತೊರಗಲ್
ಸವದತ್ತಿ, ಬೆಳಗಾವಿ

ಹ್ವಾ...ಹ್ವಾ...ಹ್ವಾ...

ಮುನ್ಸೂಚನೆ

ನಗರದಿಂದ ಬಹಳ ದೂರದಲ್ಲಿ ಕಾಡಿನ ನಡುವೆ ಇದ್ದ ಕುಗ್ರಾಮವೊಂದಕ್ಕೆ ನಗರದ ಯುವಕರ ತಂಡ ಭೇಟಿ ನೀಡಿತ್ತು. ಗ್ರಾಮೀಣ ಭಾಗದ ಹಳ್ಳಿಗರ ಜನ ಜೀವನದ ಬಗೆಗೆ ತಿಳಿದುಕೊಳ್ಳಲು ಆ ತಂಡ ಅಲ್ಲಿಗೆ ಭೇಟಿ ನೀಡಿತ್ತು.

ಒಂದು ಬೆಳಿಗ್ಗೆ ಆ ಗ್ರಾಮದ ಹಣ್ಣು ಹಣ್ಣು ಮುದುಕರೊಬ್ಬರನ್ನು ಯುವಕರು ಭೇಟಿ ಮಾಡಿದಾಗ, ಆ ಅಜ್ಜ ಯುವಕರಿಗೆ ಇಂದು ಯಾರೂ ಹೊರಗೆ ಸುತ್ತಬೇಡಿರೆಂದೂ, ಬಿರುಗಾಳಿ ಸಹಿತ ಮಳೆ ಬರುತ್ತದೆಂದೂ ಎಚ್ಚರಿಕೆ ನೀಡಿದರು. ಅಜ್ಜ ಹೇಳಿದಂತೆ ಅಂದು ಬಿರುಗಾಳಿಸಹಿತ ಭಾರಿ ಮಳೆ ಬಂತು. ಯುವಕರಿಗೆ ಆಶ್ಚರ್ಯ. ಕುಗ್ರಾಮದ ಈ ಅಜ್ಜನಿಗೆ ಎಷ್ಟೊಂದು ಜ್ಞಾನ! ಎಷ್ಟು ಕರಾರುವಾಕ್ಕಾಗಿ ಹೇಳಿದರು ಎಂದು. ಹೋಗಿ ಅಜ್ಜನನ್ನು ಕೇಳಿಯೇಬಿಟ್ಟರು. ಬಿರುಗಾಳಿ ಮಳೆಯನ್ನು ಊಹಿಸಿದ್ದು ಹೇಗೆ ಅಂತ.

ಅಜ್ಜ ಮೆಲ್ಲಗೆ ತಾನು ಹೊದ್ದುಕೊಂಡಿದ್ದ ಕಂಬಳಿಯೊಳಗಿಂದ ರೇಡಿಯೋ ಟ್ರಾನ್ಸಿಸ್ಟರ್ ತೆಗೆದು ತೋರಿಸಿ, ಆಕಾಶವಾಣಿಯ ಹವಾಮಾನ ವರದಿ ಕೇಳಿ ಹಾಗೆ ಹೇಳಿದೆ ಎಂದರು.

ಎಲ್ಲ ಬಿಟ್ಟವರು

ಎಲ್ಲ ಬಿಟ್ಟವರು ತಾವು ಎಂಬುವರು ಇಂದೆ
ಒಂದು ಪಕ್ಷದ ಬಾಲ ಆದುದನು ಕಂಡೆ
ಎಚ್ಚರಿಕೆ ಅಮಾನುಷ ಆ ಚಾತುರ್ವರ್ಣ
ಮತ್ತೊಮ್ಮೆ ತರುವುದೇ ಈ ಇದರ ಹೂರ್ಣ

- ವಿಡಂಬಾರಿ

ಚುಚ್ಚುಮದ್ದು

'ಸೇತು ಸಮುದ್ರಂ' : ಪರಿಸರಕ್ಕೆ ಧಕ್ಕೆ !?

"ಸೇತು ಸಮುದ್ರಂ ಯೋಜನೆಯ ವಿಷಯದಲ್ಲಿ ಕಾರಣವೂ ಮುಖ್ಯವಲ್ಲ. ನಂಬಿಕೆಯೂ ಮುಖ್ಯವಲ್ಲ ಎರಡನ್ನೂ ಮೀರಿ ಪರಿಸರದ ಹಿತದೃಷ್ಟಿಯಿಂದ ಯೋಜನೆಯನ್ನು ವಿರೋಧಿಸುವ ಅಗತ್ಯವಿದೆ"

ಬೆಂಗಳೂರಿನ ವಿಚಾರಸಂಕಿರಣದಲ್ಲಿ 'ಮೂಡಿಸಲಾದ' ಅಭಿಪ್ರಾಯ

★

"ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವು ಯೋಜನೆಗಳು ರಾಜಕೀಯ ಲಾಬಿಗಾಗಿ ಸೃಷ್ಟಿಯಾಗಿವೆ. ಬೆಂಗಳೂರು ಮೆಟ್ರೋರೈಲು ಯೋಜನೆ ಕೂಡಾ ಈ ಸಾಲಿನಲ್ಲಿ ಇದೆ"

ಇದೇ ವಿಚಾರಸಂಕಿರಣದಲ್ಲಿ ನಿವೃತ್ತ ಐಎಎಸ್ ಅಧಿಕಾರಿ **ಚಿರಂಜೀವಿ ಸಿಂಗ್**

➤ ನಾವೆಲ್ಲ ಉಸಿರಾಡಿದರೂ ಅದರಿಂದ ಪರಿಸರ ಹಾನಿ ಆಗುತ್ತೆ ಅಂತ ಇಲ್ಲಿ ಯಾರೋ ಹೇಳ್ತಾ ಇದ್ದಾರಲ್ಲ!! ಏನ್ಮಾಡ್ತೀರಿ ಮತ್ತೆ.

★

ಇದ್ದದ್ದು ಇದ್ಹಾಂಗ

ಮಹಿಳೆಗೂ ಹಕ್ಕಿದೆ

"1994ಕ್ಕಿಂತ ಮೊದಲು ವಿವಾಹವಾದ ಮಹಿಳೆ ಕೂಡ ಪಿತ್ರಾರ್ಜಿತ ಆಸ್ತಿಯಲ್ಲಿ ಪುರುಷನಷ್ಟೇ ಸಮಪಾಲುದಾರಳು"

ಆಸ್ತಿಹಕ್ಕಿನ ಕುರಿತ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ.

ಆತ್ಮೀಯರೇ,

ದೇಶ-ಕರ್ನಾಟಕದ ಜನತೆಯ ಎದುರು ಹಲವು ಜ್ವಲಂತ ಪ್ರಶ್ನೆಗಳು ತೆರೆದುಕೊಂಡಿವೆ. ಅಮೆರಿಕಾ - ಭಾರತ ಅಣು ಒಪ್ಪಂದವೇ ಇರಲಿ, ರಾಮಸೇತುವಿನ ವಿಷಯವೇ ಆಗಲಿ... ನಿತ್ಯವೂ ಸಂಕಟಗಳಲ್ಲಿ ನರಳುವ ಬದುಕು.... ಇದರ ನಡುವೆಯೇ ಪುರಸಭೆ, ನಗರಸಭೆಗಳಿಗೆ ಮಹತ್ವದ ಚುನಾವಣೆ ಬಂದಿದೆ. ಪ್ರಜಾಸತ್ತಾತ್ಮಕವಾಗಿ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳಲು ಇದು ಸಂದರ್ಭ. ಈ ಹಿನ್ನೆಲೆಯಲ್ಲಿ ಹಲವು ವರದಿಗಳನ್ನು ಜನಶಕ್ತಿ ಈ ಸಂಚಿಕೆಯಲ್ಲಿ ಪ್ರಕಟಿಸಿದೆ. ಗಮನಿಸಿ.

ಸಂ.

ಓದುಗರು ಮತ್ತು ಚಂದಾದಾರರು ಹಾಗೂ ಏಜೆನ್ಸಿದಾರರ ಗಮನಕ್ಕೆ

ಅಂಚೆ ಮೂಲಕ ಕಳಿಸಲಾಗುತ್ತಿರುವ ಪತ್ರಿಕೆಗಳು ತಲುಪುತ್ತಿಲ್ಲವೆಂಬ ದೂರುಗಳು ವ್ಯಾಪಕವಾಗಿ ಕೇಳಿ ಬರುತ್ತಿದೆ. ಇಂತಹ ದೂರುಗಳಿದ್ದವರು ದಯಮಾಡಿ ಪತ್ರಿಕೆಯ ಕಾರ್ಯಾಲಯಕ್ಕೆ ಲಿಖಿತವಾಗಿ ಬರೆದು ತಿಳಿಸಿ. ಮತ್ತು ಈ ಕೆಳಕಂಡ ಸೂಚನೆಗಳನ್ನು ಪಾಲಿಸಿ.

ಸೂಚನೆಗಳು

1. ವಿಳಾಸ ನೀಡುವಾಗ ದಯಮಾಡಿ ಪೂರ್ಣವಾದ ವಿಳಾಸ ನೀಡಿ.
2. ಪಿನ್ ಕೋಡ್ ಸಂಖ್ಯೆ ಹಾಕುವುದು ಮರೆಯಬೇಡಿ.
3. ಕನ್ನಡದಲ್ಲೇ ವಿಳಾಸ ನೀಡಿ.
4. ಅಕ್ಷರಗಳನ್ನು ಸ್ಪಷ್ಟವಾಗಿ ಬಿಡಿಸಿ ಬರೆಯಿರಿ.
5. ತಮ್ಮ ಚಂದಾ ಅವಧಿ ಮುಗಿಯುವ ಮೊದಲೆ ನವೀಕರಿಸಿ.
6. ತಮಗೆ ಬರುವ ಪತ್ರಿಕೆಯಲ್ಲೆ ಚಂದಾ ಅವಧಿ ನಮೂದಾಗಿರುತ್ತದೆ. ಗಮನಿಸಿ.
7. ವಿಳಾಸ ಬದಲಾವಣೆ ಆದಲ್ಲಿ ತಕ್ಷಣ ತಿಳಿಸಿ.

ಬಾಕಿ ವಿವರ, ಹಣ ಪಾವತಿ, ಲೆಕ್ಕಪತ್ರ, ಪ್ರತಿ ಹೆಚ್ಚಳ ಇತ್ಯಾದಿಗಳ ಸಂಬಂಧ ಈ ವಿಷಯವಾಗಿ ತಮ್ಮದೇನೇ ವಿಚಾರಣೆ, ವ್ಯವಹಾರಗಳಿದ್ದಲ್ಲಿ ನೇರವಾಗಿ ಈ ಪ್ರಶ್ನೆಗಳನ್ನು ನಿರ್ವಹಿಸುತ್ತಿರುವ ಸಂಗಾತಿ ವೀರಣ್ಣ ಕಲ್ಮನಿಯವರನ್ನು ಸಂಪರ್ಕಿಸಿ.

ದೂರವಾಣಿ ಸಂಖ್ಯೆ:
ಜನಶಕ್ತಿ ಕಾರ್ಯಾಲಯ - 080-22236462
ಮೊಬೈಲ್ : ವೀರಣ್ಣ ಕಲ್ಮನಿ -9480430594

ಸಂಪಾದಕೀಯ

ನೆರೆ - ಪರಿಹಾರವೆಲ್ಲಿ ?

ಈ ವಾರದಲ್ಲೆಲ್ಲಾ ಸುರಿದ ಮಳೆಯಿಂದಾಗಿ ನೆರೆಹಾವಳಿಗೆ ಬೆಂಗಳೂರು ಒಳಗೊಂಡು ಉತ್ತರಕರ್ನಾಟಕದ ಬಹಳಷ್ಟು ಜಿಲ್ಲೆಗಳ ಜನ ತತ್ತರಿಸಿದ್ದಾರೆ. ಅಪಾರ ಆಸ್ತಿಹಾನಿ-ಜೀವ ಸಾವು ಸಂಭವಿಸಿವೆ. ವಾರಾಂತ್ಯದಲ್ಲಿ ಸುರಿದ ಮಳೆಯ ರಭಸ ಕಡಿಮೆಯಾಗಿ, ನಿಂತಿದ್ದರೂ ಹಾವಳಿ ಅನಾಹುತಗಳ ದವಡೆಗೆ ಸಿಕ್ಕ ಜನ ಅಪಾಯದ ಅಂಚಿನಿಂದ ಹೊರಬಂದಿಲ್ಲ. ಆಹಾರ, ಕುಡಿವ ನೀರಿಗೂ ತತ್ವಾರ ಅನುಭವಿಸುತ್ತಾ, ಮಕ್ಕಳು, ವೃದ್ಧರು ಚಿಂತಾಜನಕ ಕ್ಷಣಗಳನ್ನು ದೂಡುತ್ತಿದ್ದಾರೆ. ಇಂತಹ, ಇದ್ದಕ್ಕಿಂತಲೂ ನೈಸರ್ಗಿಕ ಪ್ರಕೋಪದ ಭೀಕರ ದುರಂತಗಳು ಮತ್ತು ಅದರ ನಿರ್ವಹಣೆ ಬಗ್ಗೆ ಸಾಕಷ್ಟು ಪರಿಣಿತ ಅನುಭವ ಇದ್ದರೂ ವಾರಗಟ್ಟಲೆ ಆತಂಕದಲ್ಲೇ ಕೊಳೆಯುವಂತಾಗುತ್ತಿರುವುದು ಅತ್ಯಂತ ಶೋಚನೀಯ.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳ ವೈಮಾನಿಕ ಸಮೀಕ್ಷೆಯೆಂಬುದು ಕೇವಲ ತೋರಿಕೆಯ ಮೇಲಾಟವಾಗಿ, ತಲುಪಬೇಕಾದ ಪರಿಹಾರ ಕಾರ್ಯ ಆಕಾಶದಲ್ಲೇ ಗಿರಕಿ ಹೊಡೆಯುತ್ತಾ ನಿಂತಿರುವುದು ವಿಪರ್ಯಾಸ. ಇಂತಹ ತುರ್ತು ಸ್ಥಿತಿಯಲ್ಲಿ ಸಮರೋಪಾದಿಯಲ್ಲಿ ಕೆಲಸಗಳು ನಡೆಯದೇ ಕೇವಲ ಟಿ.ವಿ, ಪೇಪರ್‌ಗಳ ಸುದ್ದಿಗಳಾಗಿಬಿಟ್ಟು ಮೂಲೆ ಸೇರುತ್ತಿರುವುದರಲ್ಲಿ ಸರ್ಕಾರದ ನಿಷ್ಕಾಳಜಿಯೇ ಎದ್ದುಕಾಣುತ್ತದೆ.


ಇಂತಹ ಅತಿವೃಷ್ಟಿಯ ಅನಾಹುತ ಸಂಭವಿಸುತ್ತಿರುವುದು ಋತು ಆರಂಭದಲ್ಲಿ ಎರಡನೇ ಬಾರಿ. ಇಂತಹ ವಿಪರೀತ ಮಳೆಗಾಳಿಗೆ ಜನ, ಜಾನುವಾರು, ಪ್ರದೇಶಗಳು ಸಿಕ್ಕಿಬೀಳಲಿವೆ ಎಂಬುದು ಈ ವರ್ಷಾರಂಭದಲ್ಲಿಯೇ ಹಲವಾರು ಸಮೀಕ್ಷೆಗಳು ಎಚ್ಚರಿಸಿದ್ದವು. ಆರ್ಥಿಕ ಹಾನಿಯನ್ನು ಅಂದಾಜಿಸಿದ್ದವು. ಆದರೆ ಈ ಮಾಹಿತಿಗಳನ್ನು ಒಂದು ಗಂಭೀರವಾದ ಎಚ್ಚರಿಕೆಯಾಗಿ ಕೇಂದ್ರ-ರಾಜ್ಯ ಸರ್ಕಾರಗಳು ತೆಗೆದುಕೊಂಡು ಅದನ್ನು ಎದುರಿಸಲು ಅಗತ್ಯವಾದ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕಿತ್ತು. ಆದರೆ ದುರಂತವೆಂದರೆ ಇಂತಹ ಯಾವುದೇ ಕ್ರಮಗಳನ್ನು ಅನುಸರಿಸಲಿಲ್ಲ. ಬದಲಾಗಿ ನೆರೆ, ಬರಗಳ ಲಾಭ ಹೊಡೆಯಲು ಕಾದಿದ್ದರೇನೋ ಎಂಬಂತೆ ಇಂದಿನ ವಿದ್ಯಮಾನಗಳು ಗೋಚರವಾಗುತ್ತವೆ. ಇಲ್ಲವಾದಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಈ ಸರ್ಕಾರ ಮತ್ತು ವಿರೋಧ ಪಕ್ಷಗಳ ನಾಯಕರುಗಳ ಒಣ ಕಾಳಜಿಗಳು, ಪರಸ್ಪರ ದೂಷಣೆಯ ಬೀದಿ ರಾಜಕೀಯದ ಸ್ಪರ್ಧೆಯಾಗಿ ಮಾರ್ಪಾಡಾಗುತ್ತಿರಲಿಲ್ಲ. ಇವುಗಳನ್ನು ಬದಿಗೊತ್ತಿ ಸಮರೋಪಾದಿಯಲ್ಲಿ ಜನರ ನೆರವಿಗೆ, ಪರಿಹಾರಕ್ಕೆ ಕೇಂದ್ರ ರಾಜ್ಯ ಸರ್ಕಾರಗಳು ದುಮುಕಬೇಕಿದೆ. ಕೇಂದ್ರ ಸರ್ಕಾರದ ನೆರವಿನ ನಿರೀಕ್ಷೆಯಲ್ಲೇ ಕಾಲತಳ್ಳುವ ಬದಲು ರಾಜ್ಯ ಸರ್ಕಾರವೇ ತನ್ನ ಸಂಪನ್ಮೂಲ ಕ್ರೋಢೀಕರಿಸಿ ಪರಿಹಾರಕ್ಕೆ ಇಳಿಯಬೇಕು. ಮೀನಮೇಷ ಎಣಿಸದೇ ಹಣ ಬಿಡುಗಡೆ ಮಾಡಬೇಕು.

ರಾಜ್ಯದ ಇತರೆಡೆ ಈ ಸನ್ನಿವೇಶವಿದ್ದರೆ ಬೆಂಗಳೂರು ನಗರದ ಸಮಸ್ಯೆಯೇ ವಿಶೇಷವಾಗಿದ್ದು ಅಲ್ಪ ಮಳೆ ಸುರಿದರೂ ಜನ-ಮನೆಗಳು ಜಲಾವೃತಗೊಳ್ಳುವುದು ಸಾಮಾನ್ಯವಾಗುತ್ತಿದೆ. ಕಳೆದ ವರುಷವೂ ಬೊಮ್ಮನಹಳ್ಳಿ ಕೈಗಾರಿಕಾ ಪ್ರದೇಶದ ಸುತ್ತಮುತ್ತ, ಹೆಚ್‌ಎಸ್‌ಆರ್ ಕಾಲೋನಿ ಮುಂತಾದೆಡೆ ಮನೆಗೆ ನೀರುನುಗ್ಗಿ ಅಪಾರ ಹಾನಿಗೆ ಇಡಾಗಿದ್ದರು. ಆಗ ಬೆಂಕಿ ಹತ್ತಿದಾಗ ಬಾವಿ ತೋಡುವವರಂತೆ ಮಹಾನಗರ ಪಾಲಿಕೆ ಅವಸರಕ್ಕೆ ಎಂತಹುದೋ ಪರಿಹಾರ ಕ್ರಮ ಕೈಗೊಂಡಿತ್ತು. ಆದರೆ ಬೆಂಗಳೂರು ನಗರದಲ್ಲಿ ಸರಾಗವಾಗಿ ನೀರು ಹರಿಯುವ ಚರಂಡಿ ವ್ಯವಸ್ಥೆ ಕುಸಿದುಹೋಗಿದೆ. ನೀರು ಸಂಗ್ರಹವಾಗುತ್ತಿದ್ದ ಕೆರೆಗಳನ್ನು ಭೂಗಳ್ಳರು ಕಬಳಿಸಿಬಿಟ್ಟಿದ್ದಾರೆ. ಅಥವಾ ಹೊಸ ಕಟ್ಟಡಗಳು ನಿರ್ಮಾಣಗೊಂಡಿವೆ. ನೀರು ಹರಿವ ರಾಜಕಾಲುವೆಯಂತಹ ಮುಖ್ಯ ಚರಂಡಿಗಳೇ ಒತ್ತುವರಿಯಾಗಿಬಿಟ್ಟಿವೆ. ಇಂತಹವನ್ನು ಕೆಡವಿ ವಶಪಡಿಸಿಕೊಳ್ಳುವುದಾಗಿ ಕಾರ್ಯಾಚರಣೆಗೆ ಇಳಿದಿದ್ದ ಪಾಲಿಕೆ ಕ್ರಮ ಕೇವಲ ಆರಂಭಶೂರತನದ್ದಾಗಿತ್ತು. ಆದರೆ ನಂತರ ಅದು ಮುಂದುವರಿಯಲಿಲ್ಲ. ಈಗಲೂ ತೆರವುಗೊಳಿಸುವ ಕಾರ್ಯ ಭರದಿಂದ, ನಿಷ್ಠುರತೆಯಿಂದ ಸಾಗಬೇಕಿದೆ.

ಈ ತೆರವಿನ ಕಾರ್ಯದಲ್ಲಿಯೂ ತಾರತಮ್ಯಗಳೂ ಇವೆ. ಬಲಾಢ್ಯರ ಕಟ್ಟಡಗಳನ್ನು ಮುಟ್ಟದೇ ಸಾಮಾನ್ಯವಾದವುಗಳನ್ನು ಮಾತ್ರ ಕೆಡವಲಾಗಿದೆಯೆಂಬ ಆರೋಪಗಳೂ ಇವೆ. ಇದು ಕೂಡದು, ಅಕ್ರಮ ಕಟ್ಟಡಗಳನ್ನು ನೆಲಸಮ ಮಾಡಿ ನೀರು ಹರಿಯಲು ಪೂರ್ಣಾವಕಾಶ ಕಲ್ಪಿಸಬೇಕು. ಬೆಂಗಳೂರು ನಗರ ಬೃಹತ್ತಾಗಿ ಬೆಳೆಯುತ್ತಿದ್ದು, ಭೂಮಿಗೆ ವಿಪರೀತ ಬೆಲೆ ಇರುವ ಹಿನ್ನೆಲೆಯಲ್ಲಿಯೂ ಇಂತಹ ಅತಿಕ್ರಮಗಳು ಹೆಚ್ಚುತ್ತಿವೆ. ಭೂ ಮಾಫಿಯಾಗಳೇ ಸೃಷ್ಟಿಗೊಂಡು ಇದರಲ್ಲಿ ತೊಡಗಿವೆ. ಇಂತಹುದೇ ಕೃತ್ಯಗಳಿಂದ ಬಾಂಬೆಯಂತಹ ಮಹಾನಗರವೂ ಮಳೆಗೆ ತತ್ತರಗೊಂಡು ನಡು ನೀರಿನಲ್ಲೇ ವಾರಗಟ್ಟಲೆ ನಿಂತಿದ್ದರಿಂದಲೂ ಪಾಠ ಕಲಿಯಲಿಲ್ಲ.

ಇಂದು ಬೇಕಾಗಿರುವುದು ಸಮಸ್ಯೆಬಂದಾಗ ನಾಲ್ಕು ಅವಸರದ ಭರವಸೆ ಮಾತುಗಳಲ್ಲ, ಬದಲಾಗಿ ದೀರ್ಘಕಾಲೀನ ಯೋಜನೆ ರೂಪುಗೊಳಿಸಿ ತಕ್ಷಣವೇ ಕಾರ್ಯರೂಪಕ್ಕೆ ತರುವುದು ಅತೀ ಜರೂರಾಗಿದೆ. ಕುರ್ಚಿಯ ಸುತ್ತಲೇ ಸುತ್ತುತ್ತಿರುವವರಿಗೆ ಇದು ಕಂಡಿತೇ?

ಸಜೀವ ದಹನ : ಹತ್ಯೆಗೈದವರ ರಕ್ಷಣೆಯಲ್ಲಿ ಸರ್ಕಾರ



ಆ್ಯಡಮ್ ಬ್ರಿಡ್ಜ್ ಅಥವಾ ರಾಮಸೇತುವಿನ ಸುತ್ತ ವಿವಾದದ ಹೊಗೆಯೆಬ್ಬಿಸಿದೆ. ವಿಷಯವನ್ನು ವಿವೇಚನೆ ಮತ್ತು ವೈಜ್ಞಾನಿಕ ಪರಿಶೀಲನೆಗಿಂತ 'ನಂಬಿಕೆ'ಯನ್ನೇ ಆಧರಿಸಿ ನಾವು ಹೇಳುವುದೇ ಸತ್ಯವೆಂದು ನಂಬಿಸಲು ಈ ಪರಿವಾರ ಹವಣಿಸುತ್ತಿದೆ. ಎತ್ತಿರುವ ವಿವಾದ ಪರಿಶೀಲಿಸುವುದಕ್ಕಿಂತ ಇದರಿಂದ ರಾಜಕೀಯ ದುರ್ಲಾಭ ಹೊಡೆಯುವ ಲೆಕ್ಕಾಚಾರದತ್ತಲೇ ಎಲ್ಲಾ ವಿದ್ಯಮಾನಗಳನ್ನು ಕೊಂಡೊಯ್ಯಲು ಬಯಸುತ್ತಿದೆ. ಅಷ್ಟು ಮಾತ್ರವಲ್ಲ ವಿಧ್ವಂಸಕ ಕೃತ್ಯಕ್ಕೂ ತಾನು ಸಿದ್ಧವೆಂದು ಸಾರಿದೆ.

ದಿಕ್ಕುತಪ್ಪಿಸುವ ಯತ್ನ

ಇಂದು ದೇಶ ಅಮೆರಿಕಾದೊಂದಿಗಿನ ಅಣು ಒಪ್ಪಂದ ಹಾಗೂ ಸಾಮರಿಕ ಸಂಬಂಧಗಳ ಬಗ್ಗೆ ಗಂಭೀರವಾದ ಚರ್ಚೆಯಲ್ಲಿದೆ. ಸಾಮ್ರಾಜ್ಯಶಾಹಿಯ ದುಷ್ಟ ತಂತ್ರಗಳ ಬಗ್ಗೆ ಇಡೀ ದೇಶದ ಜನರನ್ನು ಜಾಗ್ರತಗೊಳಿಸಿ ದಾಳಿಗಳನ್ನು ಹಿಮ್ಮೆಟ್ಟಿಸಬೇಕಾಗಿದೆ. ಇದರೊಟ್ಟಿಗೆ ಜನರ ಗಂಭೀರ ಜೀವನದ ಪ್ರಶ್ನೆಗಳಿವೆ. ಆದರೆ ಖಾವಿಪಡೆಗೆ ಇದು ಬೇಕಿಲ್ಲ. ಜನರ ಗಮನ ಈ ಪ್ರಶ್ನೆಗಳಿಂದ ದೂರ ಸರಿದರೆ ಸಾಕೆಂದು ಭಾವಿಸಿದೆ. ಕಾಂಗ್ರೆಸ್‌ಗೂ ಇದರ ಲಾಭ ದಕ್ಕದಿದ್ದೀತೆ?

ಬೆದರಿಕೆ

ಚಾರಿತ್ರಿಕವಾಗಿ ರಾಮ ಇದ್ದ ಬಗ್ಗೆಯಾಗಲಿ, ರಾಮಾಯಣ ನಡೆದ ಬಗ್ಗೆಯಾಗಲೀ ಯಾವುದೇ ಅಧಿಕೃತ ದಾಖಲೆಗಳು ಇಲ್ಲದಿರುವಾಗಲೇ ಆ ಸೇತುವೆಯನ್ನು ರಾಮನೇ ಕಟ್ಟಿದ್ದು ಎಂದೂ ಅದನ್ನು ನಂಬುವಂತೆ ಪ್ರತಿಪಾದಿಸುವ ಚಿಡ್ಡಿಗಳು, ಅದು ಸತ್ಯವಲ್ಲ ಎಂಬುದನ್ನು ಕೇಳಲು ಸಿದ್ಧರಿಲ್ಲ. ಇಂತಹ ಅಸಹನೆಯಿಂದ ಟೀಕಿಸಿದವರ ಮೇಲೆ ಧಾಳಿ ಮಾಡಿ ಬೆದರಿಕೆ ಒಡ್ಡಿದೆ.



ಸಂಘ ಪರಿವಾರದ ಕಾಗಕ್ಕ ಗುಬ್ಬಕ್ಕನ ಕಥೆಗಳನ್ನು ತೀವ್ರವಾಗಿ ಟೀಕಿಸಿದ ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿಯವರು ಇಂತಹ ಒಂದು ಕಾಲುವೆ ನಿರ್ಮಾಣದಿಂದ ಆರ್ಥಿಕ ಅಭಿವೃದ್ಧಿಗೆ ಎಷ್ಟೆಲ್ಲಾ ಕೊಡುಗೆ ನೀಡಲಿದೆ ಎಂಬುದನ್ನು ವಿವರಿಸಿದ್ದನ್ನೇ ಮಹಾ ಅಪರಾಧವೆಂದು ತೀರ್ಮಾನಿಸಿ 'ಶಿಕ್ಷೆ' ವಿಧಿಸಲು ಮುಂದಾಗಿದ್ದಾರೆ. ಅಸಹನೆ, ದ್ವೇಷವೇ ಜೀವಾಳವಾಗಿಸಿಕೊಂಡಿರುವ ಆರ್‌ಎಸ್‌ಎಸ್‌ನ ಪರಿವಾರ ಬೆಂಗಳೂರಿನಲ್ಲಿ ಕರುಣಾನಿಧಿಯಪುತ್ರಿಯ ಮನೆ ಮೇಲೆ ಧಾಳಿ ನಡೆಸಿದ್ದಲ್ಲದೆ, ತಮಿಳುನಾಡಿನತ್ತ ಹೊರಟಿದ್ದ ಬಸ್‌ಗೆ ಬೆಂಕಿಹಚ್ಚಿ ಇಬ್ಬರನ್ನು ಸುಟ್ಟುಹಾಕಿದ್ದು ಅತ್ಯಂತ ಅಮಾನವೀಯ, ಉಗ್ರ ಖಂಡನೀಯ.

ಈಗಾಗಲೇ ಕುಖ್ಯಾತವಾಗಿರುವ ಬಜರಂಗದಳ, ವಿಶ್ವಹಿಂದೂ ಪರಿಷತ್‌ಗಳೇ ಈ ಕೃತ್ಯಗಳಲ್ಲಿವೆ. ಒರಿಸ್ಸಾದ ಪಾದ್ರಿ ಗ್ರಾಹಂ ಸ್ಟೇನ್ ಮತ್ತು ಮಗುವನ್ನು ಸಜೀವವಾಗಿ ದಹಿಸಿದ್ದು, ಗುಜರಾತಿನ ಅಲ್ಪಸಂಖ್ಯಾತರ ನರಮೇಧದಂತಹ ಬರ್ಭರ ಹತ್ಯಾಕಾಂಡ ಮಾಡಿದ್ದೇ ಇವರು. ಬಿಜೆಪಿಗೆ ಅಧಿಕಾರ ವರ್ಗಾವಣೆ ಮಾಡುವ ಗಡುವಿನ ಸಂದರ್ಭ ಹತ್ತಿರವಾಗುತ್ತಿರುವಾಗಲೇ ಅದೇ ಶಕ್ತಿಗಳು ಈಗ ತಲೆಯೆತ್ತಿ ಮುಂದಿನ ಹಾದಿ ಏನೆಂದು ಘೋಷಿಸಿವೆ. ಇದರಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಬೆಂಗಳೂರು ಜಿಲ್ಲಾ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷನೊಬ್ಬ ಕರುಣಾನಿಧಿ ತಲೆ ತೆಗೆದರೆ ಒಂದು ಕೋಟಿ ರೂಪಾಯಿ ನೀಡುವುದಾಗಿ ಪ್ರಕಟಿಸಿದ್ದಾನೆ. ತಾಲಿಬಾನ್‌ಗಳಿಗೂ ಇವರಿಗೂ ಏನು ವ್ಯತ್ಯಾಸವಿದೆ? ಹೀಗೆ ಬಹಿರಂಗ ಬೆದರಿಕೆ ಹಾಕಿದ್ದರೂ ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ.

ಕ್ರಿಮಿನಲ್ ರಕ್ಷಣೆಗೆ ವರಸೆಗಳು

ಇಲ್ಲಿ ವಿಚಿತ್ರವೊಂದಿದೆ. ಘಟನೆ ನಡೆದು ನಾಲ್ಕು ದಿನಗಳಾದರೂ ಕೃತ್ಯದಲ್ಲಿ ಭಾಗವಹಿಸಿದವರನ್ನು ಪೊಲೀಸರು ಬಂಧಿಸಲೇ ಇಲ್ಲ. ಸಾರ್ವಜನಿಕ ಒತ್ತಡ ಹೆಚ್ಚಿದಾಗ ಅಲ್ಲಲ್ಲಿ ಹುಡುಕಾಡಿ 12 ಜನರನ್ನು ಬಂಧಿಸಿದ್ದಾರೆ. ಇವರು ಬಸ್‌ಗೆ ಬೆಂಕಿ ಇಟ್ಟವರು ಎಂದು ಪೊಲೀಸರು ಹೇಳುತ್ತಾರೆ. ಇವರು ಬಜರಂಗದಳ ವಿಶ್ವ ಹಿಂದು ಪರಿಷತ್ ಸಂಘಟನೆಗಳಿಗೆ ಸೇರಿದವರು ಎಂಬುದು ಜಗಜ್ಜಾಹೀರಾದರೂ ಪೊಲೀಸರು ಅದನ್ನು ಹೇಳಲು ಸಿದ್ಧರಿಲ್ಲ. ತನಿಖೆ ನಡೆಯುತ್ತಿರುವುದರಿಂದ ಈಗೇನು ಹೇಳಲಾಗದು ಎಂಬುದು ಕೇವಲ ನೆಪವಷ್ಟೆ. ಅಲ್ಲದೇ ಕರುಣಾನಿಧಿಯವರ ಮಗಳ ಮನೆ ಮೇಲೆ ಧಾಳಿ ಮಾಡಿದವರನ್ನು ಇನ್ನೂ ಪತ್ತೆ ಮಾಡೇ ಇಲ್ಲ.!

ಹಿಂದುತ್ವವಾದಿ ಫ್ಯಾಸಿಸ್ಟರು

ಇಲ್ಲಿ ಈ ಧಾಳಿ ಅಮಾನವೀಯ, ಹತ್ಯೆಯ ಪ್ರಕರಣಲ್ಲಿ ಭಾಗಿಯಾದವರು ನಿಸ್ಸಂಶಯವಾಗಿ 'ಹಿಂದುತ್ವದ' ಸಂಘಟನೆಗೆ ಸೇರಿದವರೇ. ಈ ಸಂಘಟನೆಗಳ ಹೆಸರು ಹೇಳದಂತೆ (ಆರೋಪಿಗಳ ಹೆಸರೂ ಸಹ) ಪೊಲೀಸರ ಮೇಲೆ ಸತತವಾದ ಬಲವಾದ ಒತ್ತಡ ಹೇರಲಾಗುತ್ತಿದೆ. ಇದರ ಹಿಂದೆ ಪ್ರಭಾವಿ ರಾಜಕೀಯ ಮುಖಂಡರ ಕೈವಾಡವಿದೆ ಎಂದು ಮತ್ತೆ ಮತ್ತೆ ಪ್ರಸ್ತಾಪಿಸಲಾಗುತ್ತಿದೆ. ಪೊಲೀಸ್ ಕಮಿಷನರ್ ಸಹ ತುಟಿ ಬಿಚ್ಚುತ್ತಿಲ್ಲ. ಗೃಹಸಚಿವರೂ ಬೇಜವಾಬ್ದಾರಿ ಹೇಳಿಕೆ ನೀಡುತ್ತಿದ್ದಾರೆ. ಹಿಂದುತ್ವದ ಸಂಘಟನೆಗಳ ಕೈವಾಡವಿಲ್ಲ. ಅದಕ್ಕೆ ಸೇರಿದವರು ಅವರಲ್ಲ ಎಂದು ಉಪಮುಖ್ಯಮಂತ್ರಿ ಯಡಿಯೂರಪ್ಪ ಹೇಳುತ್ತಾರೆ. ಪೊಲೀಸರಿಗೆ ತನಿಖೆಯಾಗುತ್ತಿದೆ ಎಂದರೆ, ಯಡಿಯೂರಪ್ಪ ಆಗಲೇ ಎಲ್ಲಾ ಮುಗಿಸಿದವರಂತೆ ಮಾತನಾಡುವುದರ ಗುಟ್ಟೇನು? ಉದ್ದೇಶವೇನು? ಉನ್ನತ ಹುದ್ದೆಯಲ್ಲಿರುವವರೇ ಹೀಗೆ ಮಾತನಾಡುವುದು, ಮರೆಮಾಡಿರುವ ಸತ್ಯವನ್ನು ಬಯಲುಗೊಳಿಸುತ್ತದೆ. ತನಿಖೆಗೆ ಮೊದಲೇ ಹನೀಫ್ ಅಪರಾಧಿ ಎಂದು ಹೇಳೀಕೆ ನೀಡಿದ್ದ ಗೃಹಸಚಿವ ಎಂ.ಪಿ.ಪ್ರಕಾಶ್ ಇಲ್ಲೇಕೆ ಮೌನ? ಅಧಿಕಾರದಲ್ಲಿರುವ ಕೋಮುವಾದಿಗಳ ದಬಾವಣೆಯೇ?

ಎಲ್ಲಿ ಎದೆಗಾರಿಕೆ?

ಈ ದುಷ್ಕೃತ್ಯಗಳಲ್ಲಿ ಭಾಗಿಯಾದ, ಈಗಲೂ ಬೆದರಿಕೆ ಒಡ್ಡುವ ಸಂಘಟನೆ, ನಾಯಕರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು, ಸಂಘಟನೆಗಳ ಹೆಸರುಗಳನ್ನು ಬಹಿರಂಗಪಡಿಸಬೇಕು. ಕೇವಲ ಮುನ್ಸಿಪಾಲಿಟಿ, ಪಾಲಿಕೆ ಚುನಾವಣೆಯಲ್ಲಿ ಮಾತ್ರ ಬಿಜೆಪಿಯನ್ನು ರಾಜಕಾರಣವನ್ನು ಟೀಕಿಸಿದರಷ್ಟೇ ಸಾಲದು. ಇಂತಹ ಸಂದರ್ಭಗಳಲ್ಲಿಯೂ ಅದನ್ನು ಟೀಕಿಸುವ ಎದೆಗಾರಿಕೆ ಮುಖ್ಯ ಮಂತ್ರಿಗಳಿಗೆ ಇರಬೇಕು.


ಭ್ರಷ್ಟಾಚಾರ ತಡೆಗಟ್ಟಲಿ

ಕರ್ನಾಟಕ ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ನೀಡುವಲ್ಲಿ ರಾಜ್ಯ ಸರ್ಕಾರ ಒಂದು ಪ್ರಮುಖ ಹೆಜ್ಜೆ ಇರಿಸಿದೆ. ಅದರಂತೆ ಮುಖ್ಯ ಕಾರ್ಯದರ್ಶಿ ಒಳಗೊಂಡು ಐ.ಎ.ಎಸ್, ಐ.ಪಿ.ಎಸ್.ನಂತಹ ಅಧಿಕಾರಿಗಳನ್ನು ಲೋಕಾಯುಕ್ತ ತನಿಖೆಯ ವ್ಯಾಪ್ತಿಗೆ ಸೇರಿಸಲಾಗಿದೆ. ಇದು ಸ್ವಾಗತಾರ್ಹ.

ಆದರೆ ಇಷ್ಟರಿಂದಲೇ ಭ್ರಷ್ಟಾಚಾರವನ್ನು ತಡೆಯಲು ಸಾಧ್ಯವಿಲ್ಲ. ಪ್ರಮುಖವಾಗಿ ಸರ್ಕಾರ, ಅದರ ಚುಕ್ಕಾಣಿ ಹಿಡಿದ ನಾಯಕರು, ಆಡಳಿತಗಾರರು, ಭ್ರಷ್ಟಾಚಾರ ತಡೆಗೆ ದೃಢತೆಯಿಂದ ಮುಂದಾಗಬೇಕು. ಹಾಗೆ ಮಾಡಬೇಕಾದರೆ ಜನತೆಯ ಆಶೋತ್ತರ, ಹಿತಾಸಕ್ತಿಗಳಿಗೆ ಬದ್ಧರಾಗಿರಬೇಕು. ಇದನ್ನು ಕನಿಷ್ಟ ಇವರಿಂದ ನಿರೀಕ್ಷಿಸಲಾದೀತೆ?

ಈ ಜಗತ್ತಿನಲ್ಲಿ....

ನೀವು ಎಲ್ಲಿ ?



ಇಡೀ ಜಗತ್ತನ್ನು ನೂರು ನಿರಾಶ್ರಿತ ಗ್ರಾಮಗಳಂತೆ ವಿಭಾಗಿಸಿ, ಅಲ್ಲಿ ವಿಶ್ವದ ಎಲ್ಲಾ ಜನರು ಬದುಕುತ್ತಿದ್ದಾರೆಂದು ಎಣಿಸಿದರೆ ಅದರಲ್ಲಿ

ಐವತ್ತೇಳು ಜನ ಏಷ್ಯಾ ಖಂಡದವರು

ಇಪ್ಪತ್ತೊಂದು ಜನ ಯುರೋಪಿಯನ್ನರು


ಹದಿನಾಲ್ಕು ಜನ ಅಮೇರಿಕಾದವರು (ಉತ್ತರ, ಮದ್ಯ, ದಕ್ಷಿಣ ಅಮೇರಿಕಾ ಸೇರಿ)

ಎಂಟು ಜನ ಆಫ್ರಿಕನ್ನರಿರುತ್ತಾರೆ.

ಮತ್ತು ಐವತ್ತೆರೆಡು ಜನ ಮಹಿಳೆಯರು,

ನಲವತ್ತೆಂಟು ಜನ ಪುರುಷರೂ ಹಾಗೂ ಮೂವತ್ತು ಜನ ಬಿಳಿಯರು ಹಾಗೂ ಎಪ್ಪತ್ತು ಜನ ಇತರ ವರ್ಣದವರೂ ಇರುತ್ತಾರೆ.

ಅಲ್ಲಿಯ ನೂರು ಜನರ ಪೈಕಿ ಆರು ಜನ ಮಾತ್ರ ಪ್ರಪಂಚದ ಒಟ್ಟು ಬಂಡವಾಳದ ಶೇಖಡಾ 9ರಷ್ಟನ್ನು ಪಡೆದಿರುತ್ತಾರೆ. ಅವರು ಅಮೇರಿಕಾದವರಾಗಿರುತ್ತಾರೆ. ಎಂಭತ್ತು ಜನ ತುಂಬಾ ಅನಾನುಕೂಲ ಮನೆಗಳಲ್ಲಿ ವಾಸಿಸಿದರೆ, ಎಪ್ಪತ್ತು ಜನ ಅನಕ್ಷರಸ್ಥರಾಗಿರುತ್ತಾರೆ. ಒಬ್ಬ ಮಾತ್ರ ಕಂಪ್ಯೂಟರ್ ಹೊಂದಿ, ಮತ್ತೊಬ್ಬ ಯೂನಿವರ್ಸಿಟಿಯ ಪದವಿ ಪಡೆದವನಾಗಿರುತ್ತಾನೆ.



ವಿಶ್ವವಿಖ್ಯಾತ ಚಿಂತಕ ನೋಮ್ ಚೋಮ್‌ಸ್ಕಿ

ಈ ವಿವರಗಳನ್ನು ಓದಬಲ್ಲವರಾಗಿದ್ದರೆ, ಜಗತ್ತಿನ ಎರಡು ಬಿಲಿಯನ್ ಜನರಿಗಿಂತ ನೀವು ಭಿನ್ನವಾಗಿರುತ್ತೀರಿ. ಹಾಗೆಯೇ ನೀವು ಈ ದಿನ ಮುಂಜಾನೆ ನಿದ್ರೆಯಿಂದೆದ್ದರೆ, ಅದು, ಈ ಜಗತ್ತಿನಲ್ಲಿ ನಾಳೆಗಳನ್ನೇ ಕಾಣಲಾಗದ ಮಿಲಿಯನ್‌ಗಟ್ಟಲೆ ಜನರಿಗಿಂತ ಉತ್ತಮವೆಂದು ತಿಳಿಯಿರಿ.

ಜೊತೆಗೆ ನಿಮ್ಮ ಮನೆಯಲ್ಲಿನ ಫ್ರಿಜ್‌ನಲ್ಲಿ ಆಹಾರ, ಉಡಲು ಒಂದಷ್ಟು ಬಟ್ಟೆ, ಮಲಗಲು ಒಂದು ಸೂರು ಇದ್ದರೂ ಸಾಕು, ನೀವು ಪ್ರಪಂಚದ ಶೇಕಡಾ 75ರಷ್ಟು ನಿರಾಶ್ರಿತ ಜನರಿಗಿಂತ ಶ್ರೀಮಂತರಾಗಿದ್ದೀರಿ ಎಂದೇ ಅರ್ಥ. ಒಂದು ಪಕ್ಷ ನೀವು ಬ್ಯಾಂಕ್ ಅಕೌಂಟ್ ಹೊಂದಿದ್ದರೆ, ಖಜಾನೆಯಲ್ಲಿ ಒಂದಷ್ಟು ಹಣ, ಚಿಲ್ಲರೆ ನಾಣ್ಯಗಳಿದ್ದರೆ, ನೀವು ಪ್ರಪಂಚದ ಶೇ.8ರಷ್ಟಿರುವ ಅನುಕೂಲಸ್ಥರೆಂದು ತಿಳಿಯಬೇಕು.



ನೀವು ಸೆರೆಮನೆವಾಸ, ಏಕಾಂಗಿತನ, ಹಿಂಸೆಯ ಕರಾಳರೂಪ, ಹಸಿವಿನ ಹಾಹಾಕಾರ, ಯುದ್ಧ ಮುಂತಾದ ಭಯಗಳಿಂದ ದೂರದಲ್ಲಿದ್ದರೆ, ನೀವು ಈ ವಿಶ್ವದ ಐನೂರು ಬಿಲಿಯನ್ ಜನರಿಗಿಂತ ಉತ್ತಮ ಬದುಕನ್ನು ನಡೆಸುತ್ತಿದ್ದೀರಿ.

ಇಷ್ಟೆಲ್ಲಾ ಸತ್ಯ ಸಂಗತಿ ಗೊತ್ತಿದ್ದರೂ ನಾವು ಮಹತ್ತಿಗಾಗಿ, ಅಧಿಕಾರಕ್ಕಾಗಿ ಹಂಬಲಿಸುತ್ತಲೇ ಇರುತ್ತೇವೆ. ಪಕ್ಕದಲ್ಲಿ ಯುದ್ಧ ನಡೆಯುತ್ತಿದ್ದರೂ ನಮಗೆ ಏನೂ ಅನ್ನಿಸುವುದಿಲ್ಲ. ಈ ಪ್ರಪಂಚದ ಎಲ್ಲಾ ಕೆಡಕುಗಳು ದಾರಿದ್ರ್ಯಗಳು ಬಡವರ ಮತ್ತು ಅಸಹಾಯಕರ ಪಾಲಿಗೆ ಹಾಗೆ ಇಲ್ಲಿ ದೊರೆಯಬಹುದಾದ ಎಲ್ಲಾ ಸವಲತ್ತುಗಳು, ಐಷಾರಾಮಿತನ, ಅಧಿಕಾರ, ಅಹಂಕಾರ, ಕಾನೂನು, ನ್ಯಾಯ, ಕನಸು, ಅನುಕಂಪ, ಎಲ್ಲಾ ಎಲ್ಲವೂ ಶ್ರೀಮಂತರಿಗಾಗಿ ಮತ್ತು ಶ್ರೀಮಂತರಿಗಾಗಿ ಮಾತ್ರ.

- ನೋಮ್ ಚಾಮ್‌ಸ್ಕಿ

★

ಬದುಕು ಎಷ್ಟು ನಿರ್ದಯವಾಗಿಬಿಟ್ಟಿದೆ.

ಚಾಮ್‌ಸ್ಕಿ ಈ ಹೊತ್ತಿಗೆ ನಮಗೆ ಕಂಡಂತೆ ತುಂಬಾ ಮುಖ್ಯವಾಗುವುದು ಎರಡು ಅಂಶಗಳಿಗೆ, ಒಂದು ಆತ ಜಗತ್ತಿನ ಅತ್ಯಂತ ಸೂಕ್ಷ್ಮ ಭಾಷಾವಿಜ್ಞಾನಿಯಾಗಿರುವುದರ ಜೊತೆಗೆ, ರಾಜಕೀಯ ವಿಡಂಬನಾಕಾರನೂ ಆಗಿ ಎರಡೂ ಶಕ್ತಿಗಳನ್ನು ಬೆಸೆಯುವ ಕಾರಣಕ್ಕೆ,

ಎರಡು ಆತನ ಎಲ್ಲಾ ಚಿಂತನೆ ಅಧ್ಯಯನ, ಆಲೋಚನೆ, ಕೆಲಸಗಳ ಒತ್ತು ಮಾನವೀಯತೆಯ ಬಗೆಗಿರುವುದು.

ಅಭಿನವ ಚಾತುರ್ಮಾಸಿಕದಿಂದ
ಸಂಗ್ರಹ : **ಡಿ.ರವಿವರ್ಮ** ಹೊಸಪೇಟೆ

ಕುರ್ಚಿ

ಹಗಲಲ್ಲೇ ಮುಗಿಲು ಕಪ್ಪಾಗಿ
ಕತ್ತಲಾವರಿಸಿದ ಹಾಗೆ ಈ ಕುರ್ಚಿ
ಸಿಕ್ಕಿದವರಿಗೆ ಸೀರುಂಡೆಯಾದಾಗ
ಕುರ್ಚಿಯ ಕಣ್ಣಿಗೆ ಹುಣ್ಣುಹತ್ತಿ
ಜನರ ಮೇಲೆ ಝಳಪಿಸುವ
ಕುರುಡು ಕತ್ತಿ.

ಕೆಲವರು
ಸುಪ್ಪತ್ತಿಗೆಯ ಸುಕುಮಾರಸ್ವಾಮಿಗಳು
ಅಕ್ಷತೆಯೂ ಕಲ್ಲು, ಹೂವೆಂಬುದು ಹಾವು
ಕರುಳಲ್ಲಿ ಮುರಿದ ಮುಳ್ಳುಗಳ ನೋಡದ
ರಾಜ ಸುಖ ಆದೀತು ಹೇಗೆ
ನಿಜದ ಸುಖ?

ಇನ್ನು ಕೆಲವರು
ತೆಂಗಿನಕಾಯಿ ಧೂಪ ದೀಪ ಧುರೀಣರು
ದಕ್ಕದೆ ಹೋದಾಗ ಹುಳಿದ್ರಾಕ್ಷಿ ನರಿರಾಯರು
ಸರ್ವಸಂಗ ಪರಿತ್ಯಾಗಿಯ ಪೋಜಿನಲ್ಲೇ
ಹೊಟ್ಟೆಯೊಳಗಿನ ಉರಿ ಬಾಯಿಗೆ ತರುತ್ತಾರೆ;
ಸಿನಿಕ ಸಾಮ್ರಾಜ್ಯದ ಸಿಂಹಾಸನದಲ್ಲಿ ಕೂತು
ಕ್ಷಣಿಕ ತತ್ವದ ವಿರಾಗಿಯಾಗುತ್ತಾರೆ;

ಕುರ್ಚಿಯೆಂದರೆ ಕಿರೀಟವಲ್ಲ ಒಳತೋಟಿ
ಬಟ್ಟೆಗೆ ಬೇಕಾದ ನೂಲಿನ ರಾಟಿ
ಚಿಟ್ಟೆ ಚಿತ್ತಾರ ಬಿಡಿಸುವ ಬದಲು
ಹಾವಿನ ಬಾಯ ಕಪ್ಪೆಯಾದರೆ
ಹುಣ್ಣಿಮೆಯೇ ಅಮಾವಾಸ್ಯೆ.

ಕಾಣಬೇಕು ಕುರ್ಚಿಯ ಕಣ್ಣಿಗೆ
ರೆಕ್ಕೆಸುಟ್ಟ ಕನಸುಗಳಲ್ಲಿ
ಸೀದ ರೊಟ್ಟಿಯ ಬದುಕು;
ಹೂಬಿಟ್ಟ ಮೂಲೆಗಳಲ್ಲಿ ಧಗ್ಗನೆ
ಹಬ್ಬಿದ ಕಾಳ್ಗಿಚ್ಚು;
ಬೂದಿಯಲ್ಲಿ ಬಿದ್ದ ದಳಗಳು
ನಡುಗುತ್ತಿರುವ ನಾಳೆಗಳು.

ಆಗಬಾರದು ಕುರ್ಚಿಯಲ್ಲಿ ಕೂತವರು
ಕುರ್ಚಿಗಿಂತ ಕುಬ್ಜರು.
ಕೂತರೂ ಕೂರದಂತೆ
ಅತ್ತಿತ್ತ ಹಾರದಂತೆ
ತಳದ ತಳಮಳಕ್ಕೆ ತಣ್ಣೀರು ಎರಚದಂತೆ
ಕಣ್ಣೀರು ಒರೆಸುವ ಕರುಳಾದರೆ
ಕುರ್ಚಿಯಾಗುತ್ತದೆ ಹೃದಯ
ಪ್ರಜಾಪ್ರಭುತ್ವಕ್ಕೆ ಅಭಯ.

- ಬರಗೂರು ರಾಮಚಂದ್ರಪ್ಪ
('ಕಾಂಟೆಸ್ಸಾದಲ್ಲಿ ಕಾವ್ಯ'ದಿಂದ)

ಟಿಕ್-20, ಫೋರ್-20 ಕರ್ನಾಟಕ ಚಿಪ್ಪು

ದಿ. ಶ್ರೀನಿವಾಸ

"ಟ್ವೆಂಟಿ-20 ಕ್ರಿಕೆಟ್ ಮ್ಯಾಚ್ ನಡೀತಾ ಇದೆಯಲ್ಲ ಸಕತ್ತಾಗಿದೆ ಅಲ್ವೇನೋ ನಾಣಿ" ಎಂದ ವೆಂಕ. "ಹೌದು ಒಳ್ಳೆ ಇಂಟರೆಸ್ಟಿಂಗ್ ಆಗಿರುತ್ತೆ. ಅನಿರೀಕ್ಷಿತ ಫಲಿತಾಂಶಗಳು ಬರ್ತವೆ" ಎಂದ ನಾಣಿ. "ಫಸ್ಟ್ ಬ್ಯಾಟಿಂಗ್ ಆಡಿದ್ರೆ ಒಳ್ಳೆದಲ್ವ?" ಎಂದ ನಾಣಿ

"ಹೌದು ಆಮೇಲೆ ಬ್ಯಾಟಿಂಗ್ ಸಿಗುತ್ತೋ ಇಲ್ವೋ ಅಂತ ಟೆನ್‌ಷನ್ ಇರಲ್ಲ" ಎಂದ ವೆಂಕ.

" ಎಲ್ರೂ ಸಕತ್ತಾಗಿ ಸಿಕ್ಸರು ಫೋರು ಬಾರುಸ್ತಿರ್‍ತಾರೆ. ವಿಕೆಟ್ ಬೀಳೋ ಬಗ್ಗೆ ಗಮನಾನೇ ಇರೋಲ್ಲ ಯಾಕೆಂದ್ರೆ ವಿಕೆಟ್‌ಗಿಂತ ರನ್ ಬಹಳ ಮುಖ್ಯ ಅಲ್ವ?" ಎಂದ ನಾಣಿ.

"ಹೌದು ಹೌದು ರೈತ್ರು ಬಡವರು ಸತ್ರೂ ಪರವಾಗಿಲ್ಲ. ಅದೆಲ್ಲ ವಿಕೆಟ್ ಥರ ಲೆಕ್ಕಕ್ಕಿಲ್ಲ. ಅಧಿಕಾರ ಮುಖ್ಯ ಅದು ರನ್ ಇದ್ದ ಹಾಗೆ" ಎಂದ ವೆಂಕ.

"ಪಾಪ ಬೌಲರ್‌ಗಳು ಹಾಗೂ ಫೀಲ್ಡರ್‌ಗಳ ಪಾಡು ನಾಯಿಪಾಡು" ಎಂದ ನಾಣಿ.

"ಹೌದು ಹೌದು. ಹಿಗ್ಗಾಮುಗ್ಗಾ ಚಚ್ಚಿಸ್ಕೊಳ್ಳೋದಲ್ದೆ ಆಮೇಲೆ ಬ್ಯಾಟಿಂಗ್ ಸಿಗುತ್ತೋ ಇಲ್ವೋ ಅಂತ ಟೆನ್‌ಷನ್ ಬೇರೆ" ಎಂದ ವೆಂಕ.

"ಈಗ ಒಂದು ವೇಳೆ ಫಸ್ಟ್ ಬ್ಯಾಟಿಂಗ್ ಮುಗಿದ ಮೇಲೆ ಮಳೆ ಬಂದು ಇನ್ನೊಂದು ಟೀಂಗೆ ಬ್ಯಾಟಿಂಗ್ ಸಿಗದೆ ಇದ್ರೆ ಪರ್‌ವರ್ತ್ ಲೂಯಿಸ್ ನಿಯಮ ಇದಕ್ಕೂ ಅಪ್ಲೈ ಆಗುತ್ತಾ?" ಎಂದು ಕೇಳಿದ ನಾಣಿ.

ಅಲ್ಲ ಅಲ್ಲ. ಇಲ್ಲಿ ಗೌಡಾಸ್ ಅಂಡ್ ಸನ್ಸ್ ರೂಲೇ ಅಪ್ಲೈ ಆಗೋದು" ಎಂದ ವೆಂಕ.

"ಹೌದಾ ಅದ್ಯಾವುದು ಹೊಸ ರೂಲು. ನಂಗೆ ಗೊತ್ತೇ ಇಲ್ವಲ್ಲ?" ನಾಣಿ ಕೇಳಿದ.

"ಏನೋ ಹೀಗೆ ಹೇಳ್ತಿಯಾ ದಡ್ಡನ ಹಾಗೆ ಟ್ವೆಂಟಿ-20ಗೆ ಗೌಡಾಸ್ ಅಂಡ್ ಸನ್ಸ್ ರೂಲೇ ಅಪ್ಲೈ ಆಗೋದು ಅನ್ನೋದು ಹಳೇ ರೂಲು" ಎಂದ ವೆಂಕ.

"ವೆಂಕ ನೀನು ಯಾವ... ಬಗ್ಗೆ ಹೇಳ್ತಿದೀಯ ಕೇಳಿದ ನಾಣಿ."

"ನೀನು ಯಾವುದರ ಬಗ್ಗೆ ಹೇಳ್ತಿದೀಯ?" ಕೇಳಿದ ವೆಂಕ.

"ನಾನು ಟ್ವೆಂಟಿ-20 ಐ.ಸಿ.ಸಿ ವರ್ಲ್ಡ್ ಕಪ್ ಕ್ರಿಕೆಟ್ ದಕ್ಷಿಣ ಆಫ್ರಿಕಾದಲ್ಲಿ ನಡಿತಿದೆಯಲ್ಲ ಅದರ ಬಗ್ಗೆ ಹೇಳಿದ್ದು" ಎಂದ ನಾಣಿ.

"ಹೌದಾ ನಾನು ಟಿಕ್-20, ಫೋರ್-20 ಕರ್ನಾಟಕ ಚಿಪ್ ನಡಿತಿದೆಯಲ್ಲ ಅದರ ಬಗ್ಗೆ ಹೇಳಿದ್ದು" ಎಂದ ವೆಂಕ.

"ಅದೇನೋ ಅದು ಕರ್ನಾಟಕ ಚಿಪ್ಪು?" ಕೇಳಿದ ನಾಣೀ.

"ಅದೇ ಕರ್ನಾಟಕದಲ್ಲಿ ನಡೀತಿದೆಯಲ್ಲ ಕುಮಾರ್ಸ್ ಮತ್ತು ಯಡೂರ್ಸ್ ಟೀಂಗಳ ಮಧ್ಯೆ ಕರ್ನಾಟಕ ಚಿಪ್ಪು. ಅದರ ಬಗ್ಗೆ ಹೇಳ್ತಿರೋದು" ಎಂದ ವೆಂಕ.

"ಥತ್ ಆ ದರಿದ್ರ ರಾಜಕೀಯನ ಈ ಕ್ರಿಕೆಟ್‌ಗೆ ಹೋಲಿಸ್ತಿದೀಯ?" ಕೇಳಿದ ನಾಣೀ.

"ಯಾಕಪ್ಪ ಕ್ರಿಕೆಟ್‌ನಲ್ಲೇನು ರಾಜಕೀಯ; ಭ್ರಷ್ಟಾಚಾರ, ಮೋಸ ವಂಚನೆಗಳೇನು ಕಡಿಮೆ ಇದ್ಯಾ?" ಕೇಳಿದ ವೆಂಕ.

"ನೀನು ಹೇಳೋದು ಸರಿ ವೆಂಕ. ಈ ರಾಜಕೀಯ ಕ್ರಿಕೆಟ್ಟು ಭ್ರಷ್ಟಾಚಾರ, ಮೋಸ, ವಂಚನೆಗಳೆಲ್ಲ ಕಲಬೆರಕೆಯಾಗಿ ಯಾವುದು ಹೇಗೆ ಅಂತ ಅರ್ಥವೇ ಆಗಲ್ಲ ನೋಡು" ಎಂದ ನಾಣಿ.

"ಕರೆಕ್ಟಾಗಿ ಹೇಳಿದೆ ನಾಣಿ. ರಾಜಕೀಯದಲ್ಲಿ ಕ್ರಿಕೆಟ್ಟೂ ಕ್ರಿಕೆಟ್ಟಲ್ಲಿ ರಾಜಕೀಯವೂ ಸಮ್ಮಿಶ್ರ ಆಗಿರುವ ಹಾಗೆ ಟಿಕ್-20ಯಲ್ಲಿ ಫೋರ್-20ನೂ ಫೋರ್-20ಯಲ್ಲಿ ಟಿಕ್-20ಯೂ ಸೇರಿ ಯಾರು ಟಿಕ್-20 ಯಾರು ಫೋರ್-20 ಅಂತ ಗೊತ್ತಾಗೋದೆ ಇಲ್ಲ" ಎಂದ ವೆಂಕ.

"ಯಾರಾದ್ರು ಟಿಕ್-20 ಆಗ್ಲಿ ಯಾರಾದ್ರೂ ಫೋರ್-20 ಆಗ್ಲಿ. ಆದ್ರೆ ಎರಡೂ ಬಾಳ ಡೆಂಜರ್ರೇ ಅಲ್ವ?" ಎಂದ ನಾಣಿ.

ಇಲ್ಲಿಗೆ ವೆಂಕ ಮತ್ತು ನಾಣಿಯ ನಡುವಿನ ಟ್ವೆಂಟಿ-20 ಬಗೆಗಿನ ಮಾತುಕತೆ ಡ್ರಾನಲ್ಲಿ ಮುಕ್ತಾಯವಾಯಿತು.

ಸರಿಯಾದ ಪಾಠ

ಟಿಕ್-20, ಫೋರ್-20 ಕರ್ನಾಟಕ ಕಪ್ಪು,
ನೋಡಿ ನೋಡಿ ಜನ ಬೆರಗಾಗಿ ಬೆಪ್ಪು.
ಹೀಗೆ ಆಡುತ್ತೀರಿ ನೀವು ಅಧಿಕಾರದಾಟ
ಕಲಿಸದೇ ಬಿಡರು ಜನ ಸರಿಯಾದ ಪಾಠ.

ಬೆಂಗಳೂರು : ಮಳೆ ನೀರೆಲ್ಲಾ ಮನೆಗೆ ನುಗ್ಗಿದೆ

ಬೇಡವಾದ ಅತಿಥಿ ಬಂದುಬಿಟ್ಟನೋ ಮನೆಗೆ

ಪ್ರತೀ ಬಾರಿ ನೆರೆ ಬಂದಾಗ ವೈಮಾನಿಕ ಸಮೀಕ್ಷೆ ಎಂಬುದು ಒಂದು ಫ್ಯಾಷನ್ ಆಗಿ ರಾಜಕಾರಣಿಗಳಿಗೆ ಪಿಕ್‌ನಿಕ್ ಎಂಬಂತೆ ಆಗುತ್ತಿದೆ. ಪಿಕ್‌ನಿಕ್ ಮುಗಿಸಿದ ಮೇಲೆ ಈ ಬಗ್ಗೆ ಕಿಂಚಿತ್ತೂ ಗಮನ ಹೊರಳುವುದಿಲ್ಲ. ಪತ್ರಿಕಾಗೋಷ್ಠಿ ನಡೆಸಿ ಆಶ್ವಾಸನೆಗಳ ಮಹಾಪೂರ ಹರಿಸಿ ಹೋಗುವುದು ಸಾಮಾನ್ಯವಾಗಿದೆ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಕೋಮುವಾದಿ ಜಾತ್ಯಾತೀತ ಸರ್ಕಾರ ರಾಜ್ಯ ಹಾಗೂ ರಾಜಧಾನಿಯಲ್ಲಿ ಉಂಟಾಗಿರುವ ನೆರೆಹಾವಳಿ ನಿಭಾಯಿಸಲು ನಿಷ್ಠ ಪ್ರಾಮಾಣಿಕ ಪ್ರಯತ್ನ ನಡೆಸಿಲ್ಲ. ಪ್ರತಿ ಬಾರಿ ಮಳೆ ಬಂದಾಗಲು ಬೆಂಗಳೂರು ನೀರಲ್ಲಿ [illegible]ಳುಗೇಳುವುದು ಸಾಮಾನ್ಯವಾಗಿದೆ. ಬೆಂಗಳೂರು ಅಂಕೆಯಿಲ್ಲದೆ ಬೆಳೆಯಲು ಭ್ರಷ್ಟತೆಯ ಬೀಜ ಬಿತ್ತಿದ್ದು ರಾಜಕಾರಣಿಗಳು, ರಾಜ್ಯದ ಅಧಿಕಾರಿಗಳು. ಆದರೆ ಇದರ ಫಲ ಉಣ್ಣುವ ಪರಿಸ್ಥಿತಿ ಭಾಗ್ಯ ಬೆಂಗಳೂರಿನ ನಾಗರೀಕರಿಗೆ ಬಂದಿದೆ. ಕೆರೆ, ಕಾಲುವೆ, ಗೋಮಾಳ, ಚರಂಡಿಯೆನ್ನದೇ ಬಾಚಿ ಬಾಚಿ ದೋಚಿ ನಿವೇಶನ ಮಾಡಿ, ಮಾರಿ ಕೋಟ್ಯಾಧಿಪತಿಗಳಾಗಿದ್ದಾರೆ. ಬಿದ್ದ ಮಳೆ ನೀರು ದಾರಿ-ಕಾಣದೆ ಮನೆಗಳಿಗೆ ನುಗ್ಗಿ ಅಪಾರ ಪ್ರಮಾಣದ ಆಸ್ತಿಪಾಸ್ತಿ ನಷ್ಟವಾಗುತ್ತಿದೆ.

ಬೆಂಗಳೂರು ಹೊರವಲಯದ ಸುತ್ತ ಸರಣಿಯಂತೆ ಒಂದು ಕೆರೆಯಿಂದ ಮತ್ತೊಂದು ಕೆರೆಗೆ ರಾಜ ಕಾಲುವೆಗಳು ನಿರ್ಮಾಣವಾಗಿದ್ದವು. ಮಳೆನೀರು ಹಾಗು ಕೋಡಿ ತುಂಬಿದ ನೀರು ಈ ಕಾಲುವೆ ಮೂಲಕ ಮುಂದಿನ ಕೆರೆ ಸೇರುತ್ತಿತ್ತು. ಆದರಿಂದು ಕಾಲುವೆಗಳ ಜಾಗ ಶ್ರೀಮಂತರ ಮಹಲುಗಳ ಅಡಿಪಾಯವಾಗಿ ಮಾಯವಾಗಿವೆ. 33 ಅಡಿ ಅಗಲ (ಸರ್ಕಾರಿ ದಾಖಲೆ ಪ್ರಕಾರ) ರಾಜಕಾಲುವೆಗಳು ಕೆಲವು ಕಡೆ ಪೂರ್ತಿಯಾಗಿ ಇಲ್ಲವಾಗಿವೆ. ಇನ್ನೂ ಕೆಲವು ಕಡೆ 3 ಅಡಿ 4 ಅಡಿಗೆ ಬಂದು ನಿಂತಿವೆ. ಈ ರಾಜಕಾಲುವೆಗಳಲ್ಲಿ ಒತ್ತುವರಿ ಮಾಡಿರುವದರಿಂದಾಗಿಯೇ ಇಂದು ಪದೇ ಪದೇ ಬೆಂಗಳೂರು ನೆರೆಹಾವಳಿಗೆ ತುತ್ತಾಗುತ್ತಿವೆ.



ಬಿದ್ದ ಮಳೆಗೆ ಬಿದ್ದ ಮನೆಗಳು



ರಸ್ತೆ ತುಂಬಾ ನೀರಿನ ಅತಿಕ್ರಮಣ

ಉತ್ತರನ 'ಪೌರುಷ'

ಉತ್ತರನ ಪೌರುಷ ಒಲೆ ಮುಂದೆ ಅನ್ನುವ ಹಾಗೆ ಆ(ನಾ)ರೋಗ್ಯ ಸಚಿವ ಅಶೋಕ್ ರಾಜಕಾಲುವೆ ಒತ್ತುವರಿದಾರರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸುತ್ತೇವೆಂದು ಹೇಳಿ ಯಾರೋ ಕೆಲವು ಸಾಮಾನ್ಯರ ಮನೆಗಳನ್ನು ನೆಲಸಮ ಮಾಡಿದ್ದಾರೆಯೇ ವಿನಹ ದೊಡ್ಡ ದೊಡ್ಡ ತಿಮಿಂಗಿಲಗಳ ಅಪಾರ್ಟ್‌ಮೆಂಟ್ ಮಹಲುಗಳನ್ನು ಮುಟ್ಟುವ 'ಪೌರುಷ' ತೋರಿಸಿಲ್ಲ. ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಬರುವ ಪುಟ್ಟೇನಹಳ್ಳಿಯ ಕೆರೆ ಒತ್ತುವರಿಯಾಗಿದ್ದನ್ನು ಜೆ.ಸಿ.ಬಿ ಮೂಲಕ ತೆರವು ಕಾರ್ಯಾಚರಣೆ ನಡೆಸಿದ್ದಾರೆ. ಮಾಧ್ಯಮಗಳ ಮೂಲಕ ಭಾರಿ ದೊಡ್ಡ ಪ್ರಚಾರ ಗಿಟ್ಟಿಸಿದ್ದಾರೆ. ಅದರೆ ಇದೇ ಬೊಮ್ಮನಹಳ್ಳಿ ಬೇಗೂರು ಕೆರೆ ಹತ್ತಿರ ಬಿಜೆಪಿಯ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಇತರೆ ಬಿಜೆಪಿ ಮುಖಂಡರು ಒತ್ತುವರಿ ಮಾಡಿರುವುದು ಪತ್ತೆಯಾಗಿದ್ದರೂ ಕೂಡ ಭಾರಿ ಕಾರ್ಯಾಚರಣೆಯ ಪೌರುಷತನ ಇಲ್ಲಿ ಕಂಡುಬಂದಿಲ್ಲ. ಕಂಟ್ರೋಲ್ ರೂಂನಲ್ಲಿ ಫೋನ್ ಅಟೆಂಡ್ ಮಾಡೋದೆ ಮಹಾ ಸಾಧನೆ ಎಂಬಂತೆ ಬಿಟ್ಟಿ ಪ್ರಚಾರ ಗಿಟ್ಟಿಸುತ್ತಿರುವುದು ನಾಚಿಕೆಗೇಡಿತನದ ಸಂಗತಿ.

ಪರಿಹಾರದ ಮಾತೂ ಇಲ್ಲ

ಈ ಬಾರಿ ಬಿದ್ದ ಭಾರಿ ಮಳೆಯಿಂದಾಗಿ ಆಸ್ತಿಪಾಸ್ತಿ ನಷ್ಟವಾಗಿದೆ. ಆದರೆ ಕನಿಷ್ಠ ಪರಿಹಾರದ ಮಾತು ಸಚಿವರ ಬಾಯಿಂದ ಬಂದಿಲ್ಲ. ರಸ್ತೆ, ಚರಂಡಿಗಳು ಸಂಪೂರ್ಣವಾಗಿ ಹಾಳಾಗಿವೆ. ಸ್ಯಾನಿಟರಿ ಮ್ಯಾನ್ ಹೋಲ್‌ಗಳು ಒಡೆದು ಹೊಲಸು ನೀರು ರಸ್ತೆ, ಚರಂಡಿಯಲ್ಲಿ ನಿಂತು ಅನೇಕ ಸಾಂಕ್ರಾಮಿಕ ರೋಗಗಳಿಗೆ ಜನಸಾಮಾನ್ಯರು ತುತ್ತಾಗುತ್ತಿದ್ದಾರೆ. ಬಹಳಷ್ಟು ಪ್ರದೇಶಗಳಲ್ಲಿ ವಾಸ ಮಾಡಲು ಸಾಧ್ಯವಾಗದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ತಗ್ಗು ಪ್ರದೇಶವಿದ್ದ ಕೆಲವು ಕಡೆ ಸ್ಯಾನಿಟರಿ ನೀರು ಸೇರಿಕೊಂಡಂತೆ ಮಳೆ ನೀರು ನುಗ್ಗಿ ದುಬಾರಿ ನಗರವನ್ನು ಬಿಡಲೂ ಆಗದೆ, ಇರಲೂ ಆಗದೆ ಪರಿತಪಿಸುವಂತಾಗಿದೆ. ಭಾರಿ ದೊಡ್ಡ ಪ್ರಮಾಣದಲ್ಲಿ ಬೆಂಗಳೂರಿಗೆ ವಲಸೆ ಬಂದು ಕಟ್ಟಡ ಕೆಲಸ, ಇತರೆ ಸಣ್ಣಪುಟ್ಟ ಕೆಲಸ ಮಾಡುವ ಕಾರ್ಮಿಕರ ಪರಿಸ್ಥಿತಿಯಂತೂ ಹೇಳತೀರದಾಗಿದೆ. ಹಂದಿಗಳು ಕೂಡ ವಾಸ ಮಾಡಲಾಗದ ಜಾಗದಲ್ಲಿ ಇವರು ಬೇರೆ ದಾರಿಯಿಲ್ಲದೆ ವಾಸ ಮಾಡುವಂತಾಗಿದೆ. ಸಣ್ಣ ಸಣ್ಣ ಜೋಪಡಿಗಳಲ್ಲಿ ವಾಸ ಮಾಡುತ್ತಿದ್ದ ಇವರು ಭಾರಿ ಮಳೆಯಿಂದಾಗಿ ಜೋಪಡಿಗಳು ಕುಸಿದುಬಿದ್ದು ದೊಡ್ಡ ದೊಡ್ಡ ಪೈಪ್‌ಗಳು ಇವರ ಆಶ್ರಯ ತಾಣಗಳಾಗಿವೆ.

ಆದರೆ ಸರ್ಕಾರವಾಗಲೀ, ಅಧಿಕಾರಿಗಳೇ ಆಗಲೀ ಈ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಂಡಿಲ್ಲ. ಇಬ್ಬರೂ ಗಿಂಬಳ ಗಳಿಕೆಯ ಗುಂಗಿನ ಅಮಲಿನಲ್ಲಿದ್ದಾರೆ. ಭಾರಿ ದೊಡ್ಡ ಜನ ವಾಸ ಮಾಡುವ ಹೆಚ್.ಎಸ್.ಆರ್. ಲೇಔಟ್‌ಗೆ ಮಳೆ ನೀರು ನುಗ್ಗಿ ಇಡೀ ಆಡಳಿತ ಯಂತ್ರವೇ ಅಲ್ಲಿ ಹೋಗಿ ಸಮರೋಪಾದಿಯಲ್ಲಿ ಶಾಶ್ವತ ಪರಿಹಾರ ಕಾರ್ಯದಲ್ಲಿ ತೊಡಗಿತ್ತು. ಆದರೆ ಸಾಮಾನ್ಯರ ವಾಸ ಪ್ರದೇಶಗಳಿಗೆ ಕನಿಷ್ಠ ಕಾಳಜಿ ತೋರಿಸಿಲ್ಲ. ಇದು ರಾಜಕೀಯ ಪಕ್ಷಗಳು ಯಾರ ಪರ ಇವೆ ಎಂಬುದನ್ನು ಬೆತ್ತಲೆಗೊಳಿಸಿದೆ.


ಅಧಿಕಾರ ಹಸ್ತಾಂತರದ ಅಮಲಿನಿಂದ ಹೊರಬಂದು ಸಾಮಾನ್ಯ ಜನರ ಕಷ್ಟ ಕಾರ್ಪಣ್ಯದ ಕಡೆ ಕಣ್ಣು ಹಾಯಿಸುವಂತೆ ಆಗ್ರಹಿಸಿ ಹಲವು ಜನರ ಪ್ರತಿಭಟನೆಗಳು ವ್ಯಕ್ತವಾಗಿವೆ. ಇಂಥ ಹೋರಾಟ ಪ್ರತಿಭಟನೆಗಳಿಂದಲೇ ಬದಲಾವಣೆಗೆ ನಾಂದಿ ಹಾಡಬಹುದಾಗಿದೆ.

- ಲಿಂಗರಾಜು

ರೈತ ಹೋರಾಟಗಾರ ಜೀವಾಜಿ ಪುರುಷೋತ್ತಮ ನಾಯ್ಕ ನಿಧನ

ಉತ್ತರಕನ್ನಡ ಜಿಲ್ಲೆಯಲ್ಲಿನ ರೈತ ಹೋರಾಟದ ಇತಿಹಾಸ ಸ್ವಾತಂತ್ರ್ಯಪೂರ್ವದ್ದು. ಸ್ವಾತಂತ್ರ್ಯ ಚಳುವಳಿಯ ಒಟ್ಟೊಟ್ಟಿಗೆ ರೈತರ ಬದುಕಿನ ನೆಲೆಯನ್ನು ವಿಸ್ತರಿಸುವ ಕಾರಣಕ್ಕಾಗಿ ಹೋರಾಟ ನಡೆದವು. ಮೊದಲಬಾರಿಗೆ ಜಿಲ್ಲೆಯಲ್ಲಿ ಕೆಂಬಾವುಟ ರೈತರ ನಿಜ ಮುಂದಾಳತ್ವವಾಯಿತು. ರೈತ ಹೋರಾಟದ ತುರ್ತಿನಲ್ಲಿ ಗಣು ನಾಯ್ಕರಂತವರು ಪೊಲೀಸ್ ಗುಂಡಿಗೆ ಬಲಿಯಾಗಿ ಹುತಾತ್ಮರಾದರು.

ಇಂತಹ ಪರಂಪರೆಯ ಮುಂದುವರಿಕೆಯೇ ಜೀವಾಜಿ ನಾಯ್ಕ. ಇವರ ಇಡೀ ಕುಟುಂಬವೇ ರೈತರ ಹೋರಾಟಕ್ಕೆ ಅರ್ಪಿಸಿಕೊಂಡಿದೆ. ಇವರ ತಂದೆ ಪುರುಷೋತ್ತಮ ನಾಯ್ಕ ಜಿಲ್ಲಾಮಟ್ಟದಲ್ಲಿ ರೈತ ಹೋರಾಟಗಾರರಾಗಿ ಗುರುತಿಸಿಕೊಂಡವರು ಹೋರಾಟದ ಸಂದರ್ಭದಲ್ಲಿ ಅನೇಕ ಬಾರಿ ಗಡಿಪಾರುಗೊಂಡು ಶಿಕ್ಷೆಗೆ ಗುರಿ ಆದವರು. ತಂದೆಯವರೊಂದಿಗೆ ರೈತ ಹೊರಾಟದಲ್ಲಿ ತನ್ನನ್ನು ತೊಡಗಿಸಿಕೊಂಡರು. 87ನೇ ವರ್ಷದಲ್ಲಿ ನಿಧನರಾದ ಜೀವಾಜಿ ನಾಯ್ಕ ಅವರ ಮನೆಯ ಕಾಂಪೌಂಡನ್ನು ಪ್ರವೇಶಿಸುವಾಗಲೇ ಸಿಮೆಂಟಿನಿಂದ ಮಾಡಿದ ರೈತ ಸಂಘದ ಚಿಹ್ನೆ ಕುಡುಗೋಲು, ಸುತ್ತಿಗೆ ಬಂದವರನ್ನು ಸ್ವಾಗತಿಸುತ್ತದೆ. ಕೊನೆಯ ದಿನವರೆಗೂ ಜೀವಾಜಿಯವರು ಕಾರವಾರದಲ್ಲಿ ನಡೆಯುವ ರೈತ ಹೋರಾಟಕ್ಕೆ ಬಂದು ಭಾಗವಹಿಸುವ ಉತ್ಸಾಹ ತುಂಬಿಕೊಂಡವರು. ಸ್ವತ: ಹೋರಾಟಕ್ಕೆ ಅಗತ್ಯವಾದ ಹಾಡುಗಳನ್ನು ರಚಿಸಿ ಹಾಡಿ ಜನರನ್ನು ಜಾಗೃತಗೊಳಿಸಿದರು.



ಉತ್ತರಕನ್ನಡ ಜಿಲ್ಲೆಯ ರೈತ ಹೋರಾಟದಲ್ಲಿ ಪ್ರಮುಖ ಹೆಸರಾಗಿರುವ ಉಳಗಾ, ಹಳಗಾ (ಕಾರವಾರ ತಾಲೂಕು)ದಲ್ಲಿ ಹುಟ್ಟಿ ಬೆಳೆದ ಇವರು ಈ ಭಾಗದಲ್ಲಿ ಗೇಣಿ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು; ರೈತ ಪರಿಷತ್ತುಗಳಿಗೆ ಗೋದಾವರಿ ಪುರಳೇಕರ, ಎನ್.ಕೆ.ಉಪಾಧ್ಯಾಯ ಮುಂತಾದವರನ್ನು ಕರೆದು ಕಾರವಾರ ತಾಲ್ಲೂಕಿನಲ್ಲಿ ಕೆಂಬಾವುಟವನ್ನು ಹಾರಿಸುವಲ್ಲಿ ಯಶಸ್ವಿಯಾದವರು. ಅನಂತರ ಕಮ್ಯೂನಿಸ್ಟ ಪಕ್ಷದ ಸಂಪರ್ಕ ಬಂದು ಅದರ ಕಾರ್ಯಕರ್ತರಾಗಿ ಕೆಲಸ ಮಾಡಿದ್ದರು.

2003ರಲ್ಲಿ ಪ್ರಾಂತ ರೈತ ಸಂಘ ಜೊಯ್ಡಾ, ಕಾರವಾರ [illegible] (110 ಕಿ.ಮೀ) ಪಾದಯಾತ್ರೆ ಮತ್ತು [illegible]ತ್ತಿಗೆ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ [illegible] ಉಳಗಾದ ನೂರಾರು ರೈತರಲ್ಲಿ ಅವ[illegible] ಊರಾದ ಉಳಗಾಕ್ಕೆ ತೆರಳಿ ಅಲ್ಲಿ ಸಭೆ ನಡೆಸಿ ಜೀವಾಜಿಯವರನ್ನು ಸನ್ಮಾನಿಸಿ ಸ್ಫೂರ್ತಿ ಪಡೆದರು. ಇವರ ಅಧ್ಯಕ್ಷತೆಯಲ್ಲಿಯೇ ಉಳಗಾದಲ್ಲಿ ರೈತ ಭವನವೊಂದನ್ನು ನಿರ್ಮಿಸಲು ಅಡಿಗಲ್ಲು ಹಾಕಲಾಗಿದೆ.

ಹಿಂದಿನ ಹೋರಾಟವನ್ನು ನೆನೆಯುತ್ತಾ ರೈತ ಹೋರಾಟದಲ್ಲಿ ನನ್ನನ್ನು ತೊಡಗಿಸಿಕೊಳ್ಳುವ ಮೂಲಕ ನನ್ನ ಬದುಕನ್ನು ಸಾರ್ಥಕ ಮಾಡಿಕೊಂಡೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಅವರು ವೃದ್ಯಾಪ್ಯದಿಂದ 21.08.2007ರಂದು ಉಳಗಾದಲ್ಲಿ ನಿಧನರಾದರು.

- ಶಾಂತಾರಾಮ ಎಸ್. ನಾಯಕ್

ಮಂಗಳೂರು ಮಹಾನಗರ ಪಾಲಿಕೆ ಚುನಾವಣೆ 2007

ಬಂದರು ನಗರ ಮಂಗಳೂರಿನ ಸ್ಥಳೀಯ ಸಂಸ್ಥೆ ಚುನಾವಣಾ ಇತಿಹಾಸ ಏನು. ವರ್ತಮಾನದ ರಾಜಕೀಯ ತಿಕ್ಕಾಟಗಳೇನು. ಇದರಲ್ಲಿ ಅಡಗಿರುವ ಜನರ ಬದುಕಿನ ಪ್ರಶ್ನೆಗಳೇನು? ಒಂದು ಅವಲೋಕನ


ಭ್ರಷ್ಟಾಚಾರಿಗಳ ಬೆನ್ನೇರಿ ಬರುವುದೇ ಕೋಮುವಾದದ ವಿಷ ಸರ್ಪ?

ಬಿ.ಮಾಧವ

'ಮಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದು 23 ವರ್ಷಗಳಾಗಿವೆ. ಈಗಾಗಲೇ ನಾಲ್ಕು ಚುನಾವಣೆಗಳು ನಡೆದ ಪಾಲಿಕೆಗೆ ಇದೀಗ ಐದನೇ ಚುನಾವಣೆಯ ಪ್ರಕ್ರಿಯೆ ನಡೆಯುತ್ತಿದೆ. 23 ವರ್ಷಗಳಿಂದ ನಿರಂತರವಾಗಿ ಆಡಳಿತ ನಡೆಸಿದ ಪಕ್ಷ ತಾನೆಂಬ ಜಂಬ ಕೊಚ್ಚಿಕೊಳ್ಳುತ್ತಿರುವ ಕಾಂಗ್ರೆಸ್ ಒಂದೆಡೆಯಾದರೆ, ಹೆಸರಿಗೆ ವಿರೋಧ ಪಕ್ಷವಾಗಿದ್ದರೂ ವಾಸ್ತವದಲ್ಲಿ ಆಡಳಿತದಲ್ಲಿ ಕಿರಿಯ ಪಾಲುದಾರನಾಗಿ ಮುಂದುವರೆಯುತ್ತಿರುವ ಬಿಜೆಪಿ ಮತ್ತೊಂದೆಡೆ ಪ್ರಮುಖ ಸ್ಪರ್ಧಿಗಳು. ಇವರ ಪಕ್ಷಗಳ ರಾಜಕೀಯ ಸಿದ್ಧಾಂತಗಳು ವಿಭಿನ್ನ. ಆದರೆ ಭ್ರಷ್ಟಾಚಾರದಲ್ಲಿ, ಕಮಿಶನ್ ಪಡೆಯುವುದರಲ್ಲಿ ನಾಗರಿಕ ಸಮಸ್ಯೆಗಳ ಬಗ್ಗೆ ನಿಷ್ಕಾಳಜಿಯಲ್ಲಿ ಇವರು ಸಮಾನರು. ಆದುದರಿಂದಲೇ ಈ ಎರಡು ಪಕ್ಷಗಳ ನಡುವೆ ನೇರ ಸ್ಪರ್ಧೆ ನಡೆಯುವ ವಾರ್ಡುಗಳ ಮತದಾರರಿಗೆ ಅತ್ತ ಪುಲಿ, ಇತ್ತ ನರಿ ಎಂಬಂತಹ ಆಯ್ಕೆ ಎದುರಾಗಿದೆ.

ಬೆಂಕಿ ಹಚ್ಚುತ್ತಾರೆ

ಮಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದ ನಂತರದ ಇಡೀ ಅವಧಿಯಲ್ಲಿ ಮಂಗಳೂರು ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯವರು ಶಾಸಕರಾಗಿ ಆರಿಸಲ್ಪಟ್ಟಿದ್ದರೂ ಮಹಾ ನಗರಪಾಲಿಕೆಯ ಆಡಳಿತ ಕಾಂಗ್ರೆಸ್ಸಿನ ಕೈಯಲ್ಲಿ ಉಳಿದಿತ್ತು. ಕಳೆದ ಅವಧಿಯಲ್ಲಿ ವಿಶೇಷವಾಗಿ ಕಾಂಗ್ರೆಸ್ ಕಾರ್ಪೊರೇಟರುಗಳ ಭ್ರಷ್ಟಾಚಾರ ಮಿತಿಮೀರಿರುವುದನ್ನು ಗಮನಿಸಿದರೆ ಇವರು ಆಡಳಿತವನ್ನು ಕೋಮುವಾದಿಗಳಿಗೆ ಹಸ್ತಾಂತರಿಸುವ ದುರವಸ್ಥೆಯನ್ನು ತಂದುಕೊಳ್ಳುತ್ತಾರೋ ಎಂಬ ಸಂಶಯ ಮೂಡುತ್ತಿದೆ. ಅಂದಹಾಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಜೆಪಿಯ ಹಿಂದಿನ ಅವತಾರವಾದ



ಚುನಾವಣಾ ಪ್ರಚಾರದ ಒಂದು ದೃಶ್ಯ

ಜನಸಂಘಕ್ಕೆ ಆಡಳಿತದ ರುಚಿ ಉಣಿಸಿದವರು ಕಾಂಗ್ರೆಸ್ಸಿಗರು. 70ನೇ ದಶಕದ ಆರಂಭದಲ್ಲಿ ಉಡುಪಿ ನಗರಸಭೆಗೆ ಚುನಾವಣೆ ನಡೆದಾಗ ಗುಂಪುಗಾರಿಕೆಯಿಂದ ತತ್ತರಿಸಿದ್ದ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಸ್ಪರ್ಧಿಸದಿರಲು ತೀರ್ಮಾನಿಸಿತು. ಪರಿಣಾಮವಾಗಿ ಅಲ್ಲಿ ಜನಸಂಘ ಅಧಿಕಾರಕ್ಕೆ ಬಂತು. ಮಾತ್ರವಲ್ಲದೆ ಉಡುಪಿಯನ್ನು ತನ್ನ ಭದ್ರ ಕೋಟೆಯನ್ನಾಗಿ ಬೆಳೆಸಿತು. ಆದರೆ ಬಿಜೆಪಿಯ ಕೋಮುವಾದಿ ಚಟುವಟಿಕೆಗಳ ಉಗ್ರರೂಪವನ್ನು ಅನುಭವಿಸಿದ ಮಂಗಳೂರಿನ ನಾಗರಿಕರು ಯೋಚಿಸಬೇಕಾದದ್ದು ಬಹಳಷ್ಟಿದೆ. ಮಂಗಳೂರಿನ ಸಂಘಪರಿವಾರದವರಿಗೆ ಕೋಮು ಗಲಭೆ ಎಬ್ಬಿಸಲು ಅಯೋಧ್ಯೆ, ಬಾಬಾ ಬುಡನ್‌ಗಿರಿಯಂತಹ ದೊಡ್ಡ ಪ್ರಶ್ನೆಗಳೇ ಯಾವಾಗಲೂ ಬೇಕಾಗಿಲ್ಲ. ಊರಲ್ಲಿ ಯಾರೋ ಒಬ್ಬ ಅಲ್ಪಸಂಖ್ಯಾತ ವ್ಯಕ್ತಿ ಒಂದು ದನವನ್ನು ಸಾಗಾಟ... ಮಾಡಿದರೆ ಸಾಕು. ಊರಿಗೆಲ್ಲಾ ಬೆಂಕಿ ಹಚ್ಚುತ್ತಾರೆ. ಕೊಲೆ ಮಾಡುತ್ತಾರೆ. ದಿನಗಟ್ಟಲೆ ನಾಗರಿಕರನ್ನು ಭಯಭೀತಗೊಳಿಸುತ್ತಾರೆ. ದಿನಗಟ್ಟಲೆ ಕರ್ಫ್ಯೂ ಹೇರಿಕೆಯಿಂದಾಗಿ ರಸ್ತೆಗೆ ಕಾಲಿಟ್ಟರೆ ಪೋಲೀಸರ ಲಾಠಿಯ ಪೆಟ್ಟು, ದುಡಿಯುವ ಜನರಿಗೆ ದುಡಿಮೆ ಇಲ್ಲದೆ ಉಪವಾಸ.

ವಿರೋಧ ಪಕ್ಷ ಇದೆ ಆದರೆ?

ಮ.ನ.ಪಾ.ದ ಪ್ರತಿಯೊಬ್ಬ ಕಾರ್ಪೊರೇಟರ್‌ಗೆ ತನ್ನ ವಾರ್ಡಿನ ಅಭಿವೃದ್ಧಿ ಕೆಲಸಗಳಿಗಾಗಿ ಖರ್ಚು ಮಾಡಲು ವರ್ಷಕ್ಕೆ ಹತ್ತು ಲಕ್ಷ ರೂಪಾಯಿಗಳ ಅನುದಾನವಿದೆ. ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಒಂದೆರಡು ಮಂದಿ ಕಾರ್ಪೊರೇಟರುಗಳನ್ನು ಬಿಟ್ಟರೆ ಉಳಿದವರೆಲ್ಲರೂ ಈ ಮೊತ್ತದಲ್ಲಿ ಅರ್ಧಕ್ಕರ್ಧ ಕಮಿಶನ್ ಹೊಡೆಯುತ್ತಾರೆಂಬ ಆರೋಪ ಸರ್ವವ್ಯಾಪಿಯಾಗಿದೆ. ಕಾರ್ಪೊರೇಟರ್ ಇಂಜಿನಿಯರ್, ಕಂಟ್ರಾಕ್ಟರ್ ನಡುವಿನ ಅಪವಿತ್ರ ಮೈತ್ರಿಯಿಂದಾಗಿ ಎಲ್ಲಾ ಸ್ತರಗಳಲ್ಲೂ ಕಮಿಶನ್ ಹಂಚಿ ಕೊನೆಗೆ ವಾರ್ಡಿನ ಕಾಮಗಾರಿಗಳಿಗೆ ಉಳಿಯುವ ಹಣ ಅತ್ಯಲ್ಪ. ಕೊನೆಗೂ ಅಂತಹ ಕಾಮಗಾರಿಗಳನ್ನು ಎಲ್ಲಿ ಮಾಡಿಸುತ್ತಾರೆ? ಕಾರ್ಪೊರೇಟರ್‌ಗಾಗಿ ಚುನಾವಣೆಯಲ್ಲಿ ಬಹಿರಂಗವಾಗಿ ಕೆಲಸ ಮಾಡುವವರ ಅಥವಾ ತನಗೇ ಓಟು ಕೊಡುವವರೆಂಬ ಖಾತ್ರಿ ಇರುವವರ ಪ್ರದೇಶಗಳಲ್ಲಿ ಮಾತ್ರ ಕೆಲಸ ಮಾಡಿಸುತ್ತಾರೆ. ಮ.ನ.ಪಾ.ದಲ್ಲಿ ಕಟ್ಟಡ ನಿರ್ಮಾಣ ಲೈಸೆನ್ಸ್ ಪಡೆಯಬೇಕಾದರೆ ಅಥವಾ ಇತರ ಕಾಮಗಾರಿಗೆ ಅನುಮತಿ ಸಿಗಬೇಕಾದರೆ ಕೆಳಗಿನಿಂದ ಮೇಲಿನವರೆಗೆ ಭ್ರಷ್ಟಾಚಾರ ನಡೆಯುತ್ತದೆ. ಮಾಡದ ಕೆಲಸಗಳಿಗೆ ಬಿಲ್ ಪಾವತಿಸಿದ ಉದಾಹರಣೆಗಳೂ ಇತ್ತೀಚೆಗೆ ಬೆಳಕಿಗೆ ಬಂದಿವೆ. ವಿರೋಧಪಕ್ಷ ಎಂದು ಹೇಳಿಕೊಳ್ಳುತ್ತಿರುವ ಬಿಜೆಪಿಯ ಕಾರ್ಪೊರೇಟರುಗಳು ಈತನಕ ಮ.ನ.ಪಾ.ದ ಆಡಳಿತದ ಒಂದೇ ಒಂದು ಭ್ರಷ್ಟಾಚಾರ ಹಗರಣವನ್ನು ಬಯಲಿಗೆಳೆದ ಉದಾಹರಣೆ ಇಲ್ಲ.

ಸಂಪಾದನೆ ಎಷ್ಟಿರಬಹುದು?

ಆಡಳಿತ ನಡೆಸುವ ಚುನಾಯಿತ ಪ್ರತಿನಿಧಿಗಳೇ ಭ್ರಷ್ಟಾಚಾರಿಗಳಾಗಿರುವಾಗ ಆಡಳಿತ ಯಂತ್ರ ಹೇಗಿರಲು ಸಾಧ್ಯ? ಇತ್ತೀಚೆಗೆ ಕೆಲವರು ಲೋಕಾಯುಕ್ತ ಅಧಿಕಾರಿಗಳ ಸೋಗಿನಲ್ಲಿ ಮಹಾನಗರ ಪಾಲಿಕೆಯ ಇಬ್ಬರು ಅಧಿಕಾರಿಗಳ ಮನೆಗಳಿಗೆ ದಾಳಿ ನಡೆಸಿ ಅಪಾರ ಪ್ರಮಾಣದ ಅಕ್ರಮ ಸಂಪತ್ತು ಬಯಲಿಗೆಳೆದರು. ನಕಲು ಲೋಕಾಯುಕ್ತರಿಂದ ತಪ್ಪಿಸಿಕೊಳ್ಳಲು ಈ ಅಧಿಕಾರಿಗಳು ಅವರಿಗೆ ಐದು ಲಕ್ಷ ರೂಪಾಯಿಗಳನ್ನು ನೀಡಿದರು! ಇಷ್ಟರಲ್ಲಿ ಸುಳಿವು ದೊರೆತ ಅಸಲಿ ಲೋಕಾಯುಕ್ತ ಅಧಿಕಾರಿಗಳು ಮತ್ತೊಂದು ದಾಳಿ ನಡೆಸಿದರು. ಐದು ಲಕ್ಷ ರೂಪಾಯಿಗಳಷ್ಟು ಅಪಾರ ಮೊತ್ತದ ಲಂಚ ನೀಡಬಲ್ಲ ಈ ಅಧಿಕಾರಿಗಳ ನಿಜವಾದ ಸಂಪಾದನೆ ಎಷ್ಟಿರಬಹುದು? ಇಂತಹ ಇನ್ನೆಷ್ಟು ಅಧಿಕಾರಿಗಳು ಮ.ನ.ಪಾ. ಕಚೇರಿಯಲ್ಲಿದ್ದಾರೆ? ಈ ಪ್ರಶ್ನೆಗಳಿಗೆ ಉತ್ತರ ಸಿಗಲಾರದು.

ಮಹಾನಗರಪಾಲಿಕೆಯ ಅನೇಕ ಅಧಿಕಾರಿಗಳು ಭ್ರಷ್ಟಾಚಾರಿಗಳು ಮಾತ್ರವಲ್ಲ. ಅವರಲ್ಲಿ ಉಗ್ರ ಕೋಮುವಾದಿಗಳೂ ಇದ್ದಾರೆ. ಮ.ನ.ಪಾ. ಚುನಾವಣೆ ಘೋಷಣೆಯಾಗುವ ಕೆಲವೇ ದಿನಗಳ ಮೊದಲು ನಗರದ ರಸ್ತೆಬದಿಗಳಲ್ಲಿ ಪಾದಚಾರಿಗಳ ಸಂಚಾರ ಸುಗಮಗೊಳಿಸುವ ನೆಪದಲ್ಲಿ ನೂರಾರು ಬಡವರ ಗೂಡಂಗಡಿಗಳನ್ನು ಎತ್ತಂಗಡಿ ಮಾಡಲಾಯಿತು. ಇವುಗಳು ಬಹುತೇಕ ಅಲ್ಪಸಂಖ್ಯಾತ ಮುಸ್ಲಿಂ ಬಾಂಧವರಿಗೆ ಸೇರಿದವುಗಳು. ಈ ಬಡಪಾಯಿಗಳು ತಮ್ಮ ಜೀವನೋಪಾಯಕ್ಕಾಗಿ ಅನೇಕ ವರ್ಷಗಳಿಂದ ಈ ಗೂಡಂಗಡಿಗಳನ್ನು ನಡೆಸುತ್ತಿದ್ದರು. ಅಲ್ಪಸಂಖ್ಯಾತರೇ ಇರುವ ಬಂದರ ಪ್ರದೇಶದಲ್ಲಿ ಅನೇಕ ಅನಧಿಕೃತ ಕಟ್ಟಡಗಳನ್ನು ಕೆಡವಿ ಹಾಕಿದ ಮ.ನ.ಪಾ ಅಧಿಕಾರಿಗಳ ಕಣ್ಣುಗಳಿಗೆ ಬಿಜೆಪಿ ಬೆಂಬಲಿಗರ ಅನಧಿಕೃತ ಕಟ್ಟಡಗಳು ಕಾಣಿಸಲಿಲ್ಲ.

ಎಲ್ಲಾ ತಾತ್ಕಾಲಿಕ

ಮಂಗಳೂರು ಮಹಾನಗರಕ್ಕೆ ಒಂದು ಸುಸಜ್ಜಿತ ಮಾರುಕಟ್ಟೆ ಇಲ್ಲ. ಶಾಶ್ವತ ಬಸ್ ನಿಲ್ದಾಣವಿಲ್ಲ. ಎಲ್ಲವೂ ತಾತ್ಕಾಲಿಕ ವ್ಯವಸ್ಥೆಗಳಾಗಿಯೇ ಮುಂದುವರಿಯುತ್ತಿವೆ. ಕುಡಿಯುವ ನೀರಿನ ಸರಬರಾಜು ಸಮರ್ಪಕವಾಗಿಲ್ಲ. ರಸ್ತೆಗಳು ಕಳಪೆ ಕಾಮಗಾರಿ ಮತ್ತು ಭ್ರಷ್ಟಾಚಾರಕ್ಕೆ ಜೀವಂತ ಉದಾಹರಣೆಗಳಾಗಿದ್ದು, ನಗರದಲ್ಲಿ ಸಂಚಾರ ದುಸ್ತರವಾಗಿದೆ. ನಗರ ನೈರ್ಮಲ್ಯವನ್ನು ಪೂರ್ತಿ ನಿರ್ಲಕ್ಷಿಸಲಾಗಿದ್ದು ಅನೇಕ ರಸ್ತೆಗಳಲ್ಲಿ ಮೂಗು ಮುಚ್ಚಿಕೊಂಡೇ ಸಂಚರಿಸುವುದು ಅನಿವಾರ್ಯ. ಸೊಳ್ಳೆಗಳು ತುಂಬಿ ಮಲೇರಿಯಾ ರೋಗದ ಭೀತಿ ಪ್ರತಿಕ್ಷಣವೂ ನಾಗರೀಕರನ್ನು ಕಾಣುತ್ತಿದೆ.

ಎಡಿಬಿ ಸಾಲದ ಹೊರೆ

ನಾಲ್ಕು ದಶಕಗಳ ಹಿಂದೆ ಸಿಪಿಐ(ಎಂ) ನಾಯಕ ವಾಮನ್ ಕೊಡಿಯಾಲಬೈಲ್ ಅವರು ಮಂಗಳೂರಿನ ಅಂದಿನ ನಗರಸಭೆಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ನಗರಸಭಾ ವ್ಯಾಪ್ತಿಯೊಳಗೆ ಒಳಚರಂಡಿ ವ್ಯವಸ್ಥೆ ನಿರ್ಮಿಸಲಾಗಿತ್ತು. ಮಂಗಳೂರು ಮಹಾನಗರವಾಗಿ ಬೆಳೆದು ಜನಸಂಖ್ಯೆ ಹತ್ತುಪಟ್ಟು



ದಯಾನಂದಶೆಟ್ಟಿ




ಪ್ರಮಿಳಾ



ಜಯಂತಿ ಬಿ. ಶೆಟ್ಟಿ



ಯಾದವ ಶೆಟ್ಟಿ



ದಿನೇಶ್ ಅಂಚನ್

"ಮಂಗಳೂರು ಮಲೇರಿಯಾದ ತವರೂರು"

ಪ್ರತಿ ವರುಷ ಸಾವಿರಾರು ಸಂಖ್ಯೆಯಲ್ಲಿ ಜನ ಸಾಯುತ್ತಿದ್ದಾರೆ. ಹತ್ತಿಪ್ಪತ್ತು ಸಾವಿರ ಜನರಿಗೆ ಮಲೇರಿಯಾ ಬಂದು ತಿಂಗಳುಗಟ್ಟಲೆ ಅನಾರೋಗ್ಯದಿಂದ ಕೊಳೆಯುತ್ತಿದ್ದಾರೆ. 'ಕಾಲರ' ಕೂಡಾ ಮಂಗಳೂರಿನ ಅವಿಭಾಜ್ಯ ಅಂಗವಾಗಿದೆ. ಇಂತಹ "ಸಾವಿನ ಕರಾಳ ನೃತ್ಯ" ನಡೆಯುತ್ತಿರುವಾಗ ತ್ಯಾಜ್ಯ ನಿರ್ವಹಣೆ ವಿಫಲವಾಗಿರುವಾಗ ಆರೋಗ್ಯ ಇಲಾಖೆಗೆ ಸಂಬಧಿಸಿ ಪ್ರತಿಯೊಂದು ವಿಭಾಗವನ್ನು ಖಾಸಗೀಕರಿಸಿ ಕಂಟ್ರಾಕ್ಟ್ ಪದ್ಧತಿ ಜಾರಿಗೊಂಡಿದೆ. ಕಾಂಗ್ರೆಸ್ಸು ಮತ್ತು ಬಿಜೆಪಿ ಇದಕ್ಕೆ ನೇರ ಹೊಣೆ. ಇಷ್ಟು ಸಾಲದ್ದು ಎಂಬಂತೆ ಕಸವನ್ನು ವಿಲೇವಾರಿ ಮಾಡಬೇಕಾದರೆ ಮಂಗಳೂರಿನ ಜನ ಇನ್ನು ಮುಂದೆ ಪ್ರತಿ ತಿಂಗಳೂ ದರ ಪಾವತಿಸಬೇಕಾಗಿದೆ. ಇಂತಹ ಕರಾಳ ನೀತಿಯಿಂದ ಇನ್ನು ಜನ ಸಾಮಾನ್ಯರ ಬದುಕು ಮತ್ತು ಆರೋಗ್ಯ ಕಸದ ರೀತಿಯಲ್ಲಿ ಬೀದಿ ಪಾಲಾಗಲಿದೆ.

ದಲಿತ ಕುಟುಂಬಗಳ ಅಭಿವೃದ್ಧಿಗಾಗಿ ಮೀಸಲಾದ ಶೇ.8 ನಿಧಿ ದುರುಪಯೋಗ ವಾಗುತ್ತಿದೆ. ಖಾಸಗಿ ವ್ಯಕ್ತಿಗಳ ದಲಿತೋದ್ಧಾರಕ ಟ್ರಸ್ಟ್‌ಗಳನ್ನು ಇದಕ್ಕೆ ರೂಪಿಸಿ ಒಂದೆಡೆಯಲ್ಲಿ ಅದಕ್ಕೆ ತೊಡಗಿಸಿಕೊಂಡರೆ ಮತ್ತೊಂದೆಡೆಯಲ್ಲಿ ಇನ್ನಿತರೆ ಕೆಲಸಗಳಿಗೆ ಉಪಯೋಗಿಸಲಾಗು ತ್ತಿದೆ. ಪರಿಣಾಮವಾಗಿ ದಲಿತರ ಕುಟುಂಬಗಳ ಮನೆ ಮತ್ತು ಪರಿಸರ ಚಿಂತಾಜನಕವಾಗಿದೆ. ಒಳಚರಂಡಿಯ ಕಾಮಗಾರಿ 5 ವರ್ಷಗಳಿಂದ ಆಮೆ ವೇಗದಲ್ಲಿ ನಡೆಯುತ್ತಿದೆ. ಆರು ತಿಂಗಳು ಮಳೆ ಬಿದ್ದರೂ ಕುಡಿಯುವ ನೀರಿನ ಸಮಸ್ಯೆ ಕಾಡುತ್ತಿದೆ.

ಕೆ.ಕೆ.

ಸ್ವಲ್ಪ ಪಕ್ಕಕ್ಕಿರಿಸಲಾಗಿದ್ದ ಹಳೇ ರಾಮನ ಚಿತ್ರಪಟದ ಧೂಳು ಕೊಡವಿ ಮತ್ತೆ ಬೀದಿಗೆ ತರಲು ಸಂಘ ಪರಿವಾರ ಸೇತು ಸಮುದ್ರಂ ಪ್ರಶ್ನೆಯನ್ನು ಬಳಸಿಕೊಳ್ಳುತ್ತಿದೆ. ಜನರ ಧಾರ್ಮಿಕ ನಂಬಿಕೆಗಳನ್ನು ದುರುಪಯೋಗಮಾಡಿಕೊಳ್ಳುತ್ತಿದೆ.

ಜನರ ನಂಬಿಕೆ - ಭಾವನೆಗಳ ದುರ್ಬಳಕೆ

ಸೀತಾರಾಂ ಯೆಚೂರಿ



ರಾಮಾಯಣದಲ್ಲಿ ಸೀತೆಯನ್ನು ರಾವಣನಿಂದ ರಕ್ಷಿಸಲು 17 ಲಕ್ಷ ವರ್ಷಗಳ ಹಿಂದೆ ಶ್ರೀರಾಮ ಸೇತುವೆ ನಿರ್ಮಾಣ ಮಾಡಿದ ಎಂಬ ಅವೈಜ್ಞಾನಿಕ ವಾದವನ್ನು ಸಂಘಪರಿವಾರ ಮಂಡಿಸುತ್ತಿದೆ. ಉತ್ತರ ಭಾರತದಲ್ಲಿ ಅಧಿಕಾರ ಹಿಡಿಯಲು ರಾಮಜನ್ಮ ಭೂಮಿ ವಿವಾದವನ್ನು ಬಳಕೆ ಮಾಡಿಕೊಳ್ಳುತ್ತಿರುವ ಸಂಘ ಪರಿವಾರ, ತನ್ನ ಕೋಮುವಾದಿ ಅಜೆಂಡಾವನ್ನು ದಕ್ಷಿಣ ಭಾರತಕ್ಕೆ ವಿಸ್ತರಿಸಲು ಸೇತು ಸಮುದ್ರಂ ಯೋಜನೆ ಮೇಲೆ ತನ್ನ ವಕ್ರ ದೃಷ್ಟಿ ಹರಿಸಿದೆ. ಭಾರತ-ಶ್ರೀಲಂಕಾ ನಡುವೆ ರಾಮಸೇತು ಇತ್ತು ಎಂದು 1987ರಲ್ಲಿ ನಾಸಾ ಬಿಡುಗಡೆ ಮಾಡಿರುವ ಉಪಗ್ರಹ ಚಿತ್ರ ಅವೈಜ್ಞಾನಿಕ ಎಂದು ಈಗಾಗಲೇ ಸಾಬೀತಾಗಿದೆ. ಆದರೂ ಸಂಘ ಪರಿವಾರದ ಕುತಂತ್ರಕ್ಕೆ ಅಮೆರಿಕ ನಿರಂತರವಾಗಿ ಪೋಷಣೆ ನೀಡುತ್ತಿದೆ. ಭಾರತದೊಳಗೆ ಧರ್ಮಾಂಧ ಮೂಲಭೂತವಾದ ಸೃಷ್ಟಿಸಿ. ಆರ್ಥಿಕವಾಗಿ ದಿವಾಳಿ ಎಬ್ಬಿಸಿ ತನ್ನ ಅಡಿಯಾಳನ್ನಾಗಿ ಮಾಡಿಕೊಳ್ಳಬೇಕೆಂದು ಹವಣಿಸುತ್ತಿರುವ ಅಮೆರಿಕಾಗೆ ಸಂಘಪರಿವಾರ. ಬಹಿರಂಗವಾಗಿ ಸಾತ್ ನೀಡಿದೆ.

ನಿಸರ್ಗ ನಿರ್ಮಿತ

ಶ್ರೀಲಂಕಾದೊಂದಿಗೆ ಭೂ ಸಂಪರ್ಕ ಕಲ್ಪಿಸುವ ಈ ಆಡಂ ಬ್ರಿಡ್ಜ್. ಲಕ್ಷಾಂತರ ವರ್ಷಗಳ ಹಿಂದಿನ ನೈಸರ್ಗಿಕ ಪಾಲಿಯೋಗ್ರಾಫಿಕಲ್ (ವಿವಿಧ ವಸ್ತುಗಳ ಸಂಚಯನದ)ಪ್ರಕ್ರಿಯೆ ಮೂಲಕ ರಚನೆಯಾಗಿರುವುದಾಗಿದ್ದು, ಮಾನವ ನಿರ್ಮಿತ ಅಲ್ಲ ಎಂದು ಭಾರತೀಯ ಭೂ ಸರ್ವೇಕ್ಷಣಾ ಇಲಾಖೆ ಈಗಾಗಲೆ ದೃಢೀಕರಿಸಿದೆ. ಮತ್ತೊಂದು ವೈಜ್ಞಾನಿಕ ಸತ್ಯ ಎಂದರೆ ಈ ರಚನೆ ರೂಪುಗೊಂಡ ಸಂದರ್ಭದಲ್ಲಿ ಭೂಮಿ ಮೇಲೆ ಮನುಷ್ಯನ ಅಸ್ತಿತ್ವವೇ ಇರಲಿಲ್ಲ ಎಂಬುದು. ಸಂಘಪರಿವಾರದಲ್ಲಿನ ಬುದ್ದಿಜೀವಿಗಳಿಗೆ ಇದೆಲ್ಲ ಗೊತ್ತಿದ್ದರೂ ಜನತೆಯನ್ನು ವಂಚಿಸಿ ಅಧಿಕಾರ ಹಿಡಿಯುವ ತನ್ನ ಸಾಂಪ್ರದಾಯಿಕ ಕಾರ್ಯತಂತ್ರವನ್ನು ಮುಂದುವರೆಸಿದ್ದಾರೆ. ಜನತೆಯ ಸರ್ವತೋಮುಖ ಅಭಿವೃದ್ದಿಗಾಗಿ ಯಾವುದೇ ನಿರ್ದಿಷ್ಟ ಕಾರ್ಯಕ್ರಮಗಳಿಲ್ಲದ ಬಿಜೆಪಿ, ಜನರ ಭಾವನೆಗಳನ್ನು ಉದ್ರೇಕಿಸಿ ಜೇಬು ತುಂಬಿಸಿಕೊಳ್ಳಲು ಹವಣಿಸುತ್ತಿದೆ. ಮತ್ತೊಂದು ವಿಪರ್ಯಾಸ ಎಂದರೆ ಸೇತುಸಮುದ್ರಂ ಯೋಜನೆ ಸಾಧ್ಯಸಾಧ್ಯತೆಗಳ ಕುರಿತು ಯೋಜನಾ ವರದಿ ಸಿದ್ಧಪಡಿಸಿ ಕೊಡಲು ಭಾರತೀಯ ಭೂಸರ್ವೇಕ್ಷಣಾ ಇಲಾಖೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ 2000-2001ರ ಬಜೆಟ್‌ನಲ್ಲಿ ಐದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುವುದು. ಬಿಜೆಪಿ ಇಲ್ಲಿ ದ್ವಿಮುಖ ನೀತಿಯನ್ನು ಅನುಸರಿಸುತ್ತಿದೆ ಎಂಬುದು ಸ್ಪಟಿಕದಷ್ಟು ಸ್ಪಷ್ಟವಾಗಿದೆ.

ಗ್ರಹಗಳ ರಚನಾಶಾಸ್ತ್ರ (ಟೆಕ್ಟೋನಿಕ್ಸ್) ಅಧ್ಯಯನದ ಮೂಲಕ ಭೂಮಿಯ ಮೇಲಿನ ಭೂಚಲನೆಯನ್ನು ನಿರ್ದಿಷ್ಟವಾಗಿ ಅಳೆಯಲು ಸಾಧ್ಯವಿದೆ ಎಂದು ತುಲಿಕ ಪಬ್ಲಿಷರ್ಸ್ ಹೊರತಂದಿರುವ 'ಪ್ರೀ ಹಿಸ್ಟರಿ' ಸರಣಿಯ ಮೊದಲ ಸಂಪುಟದಲ್ಲಿ ಪ್ರೊಫೆಸರ್ ಇರ್ಫಾನ್ ಹಬೀಬ್ ಸಾಧಿಸಿ ತೋರಿಸಿದ್ದಾರೆ. ಇಂತಹ ವೈಜ್ಞಾನಿಕ ಅಧ್ಯಯನಗಳಿಂದ ಗ್ರಹಗಳ ರಚನೆ, ಕಾಲ ಮತ್ತು ಜೀವಿಯ ಹುಟ್ಟನ್ನು ನಿಖರವಾಗಿ ತಿಳಿಯಬಹುದು. 400 ಕೋಟಿ ವರ್ಷಗಳ ಹಿಂದಿನ ಅವಧಿಯನ್ನು ವಿವಿಧ ರೀತಿಯ, ಯುಗಗಳಾಗಿ ವಿಂಗಡಿಸಲಾಗಿದೆ. ಆ ಸಂದರ್ಭದಲ್ಲಿ ಸಂಭವಿಸಿರುವ ಭೂಮಿಯ ವಿವಿಧ ರೀತಿಯ ರಚನೆಗಳನ್ನೂ ಸಹ ಸ್ಪಷ್ಟವಾಗಿ ವಿವರಿಸಲಾಗಿದೆ. ವೈಜ್ಞಾನಿಕವಾಗಿ ಸಾಬೀತಾದ ಮೇಲೂ ಮಾನವ ನಿರ್ಮಿತ ಸೇತುವೆ ಎಂದು ವಾದಿಸುತ್ತಾ ಜನತೆಯ ಮನಸ್ಸಿನಲ್ಲಿ ಮತಾಂಧತೆ ಸೃಷ್ಟಿಸುತ್ತಿರುವುದು ವಿಕೃತ ಮನಸ್ಸಿನ ಹೇಯ ಕೃತ್ಯವಾಗಿದೆ.

ಕೋಟ್ಯಾಂತರ ವರ್ಷಗಳ ಹಿಂದೆ ಅಪಾರ ಪ್ರಮಾಣದ ನೀರು ಮಂಜಿನ ಪದರುಗಳಾಗಿ



'ಅಯೋಧ್ಯೆ ರಾಮ'ನ ಫೋಟೋ ಧೂಳು ಜಾಡಿಸಿ ಮತ್ತೆ ಹೊರತೆಗೆದಿರುವ ಸಂಘ ಪರಿವಾರ

ಮಾರ್ಪಟ್ಟು ನೈರುತ್ಯ ಯೂರೋಪ್ ಮತ್ತು ಉತ್ತರ ಅಮೆರಿಕ ಮೇಲ್ಭಾಗದಲ್ಲಿ ಕೇಂದ್ರೀಕೃತವಾಗಿದ್ದವು. ಈ ಹಿಮಗಡ್ಡೆಗಳು ಕರಗಿ ನೀರಾಗಿ ಭೂಮಿಯನ್ನೆಲ್ಲಾ ವ್ಯಾಪಿಸುತ್ತಾ ಬಂತು. ಕೊನೆಯ ಹಿಮಯುಗದ ಅವಧಿಯಲ್ಲಿ(18 ಕೋಟಿಯಿಂದ 10 ಸಾವಿರ ವರ್ಷಗಳ ಹಿಂದೆ) ಸಮುದ್ರದ ನೀರಿನ ಮಟ್ಟ ಈಗಿರುವುದಕ್ಕಿಂತಲೂ 100-150 ಮೀಟರ್ ಆಳದಲ್ಲಿತ್ತು. ಆ ಸಂದರ್ಭದಲ್ಲಿ ಈಗಿನ ಕಚ್ ಮತ್ತು ಕ್ಯಾಂಬೇ ಕೊಲ್ಲಿಗಳು ಮರುಭೂಮಿಗಳಾಗಿದ್ದವು. ಶ್ರೀಲಂಕಾ ಸಹ ಭಾರತದ ದಕ್ಷಿಣ ಭಾಗಕ್ಕೆ ಅಂಟಿಕೊಂಡಿತ್ತು. ಉತ್ತರ ಭೂಭಾಗದಲ್ಲಿರುವ ಹಿಮಪದರಗಳು ಕರಗಿ ನೀರಾಗಿ ಹರಿಯುತ್ತಿದ್ದಂತೆ ಸಮುದ್ರ ಮಟ್ಟ ಹೆಚ್ಚಾಗಿ ಅಂಡಮಾನ್, ನಿಕೋಬಾರ್, ಮತ್ತು ಶ್ರೀಲಂಕಾ ಭಾಗಗಳು ದ್ವೀಪ ರಾಷ್ಟ್ರಗಳಾಗಿ ಮಾರ್ಪಟ್ಟವು.

ಇಂತಹ ವೈಜ್ಞಾನಿಕ ಅಂಶಗಳನ್ನು ಬಿಜೆಪಿ ಮರೆಮಾಚಿ ಪುರಾಣಗಳು, ನಂಬಿಕೆಗಳೆಂದು ವಾದಿಸುತ್ತಾ ರಾಜಕೀಯ ಲಾಭ ಪಡೆಯಲು ಮುಂದಾಗಿದೆ. ಜನರಲ್ಲಿರುವ ವೈಯಕ್ತಿಕ ನಂಬಿಕೆ, ವಿಶ್ವಾಸವನ್ನು ಪ್ರಜಾಪ್ರಭುತ್ವ ಸದಾ ರಕ್ಷಿಸುತ್ತದೆ. ಅದನ್ನು ನಾವು ಸಹ ಗೌರವಿಸುತ್ತೇವೆ. ಇಲ್ಲಿ ನಾವು ಚರ್ಚಿಸುತ್ತಿರುವುದು ಜನರಲ್ಲಿರುವ ನಂಬಿಕೆ, ವಿಶ್ವಾಸಗಳಿಗೆ ಸಂಬಂಧಿಸಿದ್ದಲ್ಲ. ಭಾರತದ ಸಂವಿಧಾನ ವೈಯಕ್ತಿಕ ನಂಬಿಕೆಯನ್ನು ರಕ್ಷಿಸುವುದರೊಂದಿಗೆ ವೈಜ್ಞಾನಿಕ ಸಂಶೋಧನೆ ಮತ್ತು ವಿಶ್ಲೇಷಣೆಗಳನ್ನು ಸಹ ಉತ್ತೇಜಿಸುತ್ತದೆ ಎಂಬುದನ್ನು ಯಾರೂ ಮರೆಯಬಾರದು.

ಪುರಾಣಗಳ ವಿಶ್ಲೇಷಣೆ

ಈ ರೀತಿ ವೈಜ್ಞಾನಿಕವಾಗಿ ವಿಶ್ಲೇಷಿಸುವುದಾದರೆ ಭಾರತದ ಪುರಾಣಗಳಲ್ಲಿ ಕಂಡುಬಂದಿರುವ ಅವತಾರಗಳನ್ನು ವೈಜ್ಞಾನಿಕವಾಗಿ ವ್ಯಾಖ್ಯಾನಿಸ ಬಹುದಾಗಿದೆ. ಭೂಮಿ ಮೇಲಿನ ಅಧರ್ಮವನ್ನು ನಾಶ ಮಾಡಿ, ಧರ್ಮವನ್ನು ರಕ್ಷಿಸಲು ದೇವರು ಅವತಾರಗಳನ್ನು ತಾಳಿ ಬರುತ್ತಾನೆಂದು ಮಹಾಭಾರತದಲ್ಲಿ ಬೋಧಿಸಲಾಗುತ್ತದೆ. ಪ್ರಸಕ್ತ ಯುಗದ ಅಂತ್ಯದ ವೇಳೆಗೆ ಧರ್ಮ ರಕ್ಷಣೆಗೆ ದೇವರು ಕಲ್ಕಿ ಅವತಾರ ಎತ್ತಿ ಬರಲಿದ್ದಾರೆಂತಲೂ ಹೇಳಲಾಗಿದೆ. ವೈಜ್ಞಾನಿಕ ವಿಶ್ಲೇಷಣೆ ಪ್ರಕಾರ ದೇವರ ಮೊದಲ ಅವತಾರ ಮತ್ಸ್ಯಾವತಾರವಾಗಿದೆ. ಅಂದರೆ ಜೀವಿ ಮೊದಲು ನೀರಿನಲ್ಲಿ ಸೃಷ್ಟಿಯಾಗಿದ್ದನ್ನು ಇದು ತೋರಿಸುತ್ತದೆ. ಎರಡನೆಯದು ಕೂರ್ಮ(ಆಮೆ) ಅವತಾರವಾಗಿದೆ. ಇಲ್ಲಿ ಆಮೆ ನೀರಿನಲ್ಲಿಯೂ ಮತ್ತು ಭೂಮಿ ಮೇಲೆಯೂ ಜೀವಿಸುವ ಉಭಯವಾಸಿಯಾಗಿದೆ. ಮೂರನೆಯದು ವಾರಾಹಿ(ಹಂದಿ) ಅವತಾರ. ಇದು ಸಂಪೂರ್ಣವಾಗಿ ಭೂಮಿ ಮೇಲೆ ವಾಸಿಸುತ್ತದೆ. ಅಂದರೆ ಜೀವಿ ಹಂತಹಂತವಾಗಿ ಭೂಮಿ ಮೇಲೆ ನೆಲೆಸಲು ಆರಂಭಿಸುತ್ತಿದೆ ಎಂಬುದನ್ನು ಈ ರೂಪಾಂತರಗಳು ವಿವರಿಸುತ್ತಿವೆ. ನಾಲ್ಕನೆ ಅವತಾರ ನರಸಿಂಹಾವತಾರವಾಗಿದೆ. ಇಲ್ಲಿ ಜೀವಿಯು ಸಂಪೂರ್ಣವಾಗಿ ಭೂಮಿ ಮೇಲೆ ನೆಲೆಸಿದ್ದು, ಪ್ರಾಣಿ ಮನುಷ್ಯನಾಗಿ ರೂಪಾಂತರವಾಗುವುದನ್ನು ವಿವರಿಸುತ್ತದೆ. ಐದನೆಯದು ವಾಮನ ಅವತಾರ. ಇಲ್ಲಿ ಪ್ರಾಣಿಯು ಕುಬ್ಜ ಮಾನವನಾಗಿ ರೂಪಾಂತರಗೊಂಡಿದೆ. ಇದರ ನಂತರ ಪರಶುರಾಮ ಆರನೆ ಅವತಾರವಾಗಿದ್ದಾನೆ. ಇಲ್ಲಿ ಮನುಷ್ಯನು ಭೂಮಿ ಮೇಲೆ ಜೀವಿಸಲು ಪರಶುವಿನ ಅಂದರೆ ಕೊಡಲಿ ನೆರವಿನಿಂದ ಕಾಡನ್ನು ಕಡಿಯಲು ಮುಂದಾಗುವುದನ್ನು ತೋರಿಸುತ್ತದೆ. ಏಳನೆ ಅವತಾರ ರಾಮನ ಅವತಾರವಾಗಿದೆ. ಪ್ರಾಣಿಗಳು ಮತ್ತು ವೈರಿಗಳನ್ನು ದೂರದಿಂದಲೇ ನಾಶ ಮಾಡಲು ರಾಮನು ಬಿಲ್ಲು ಬಾಣಗಳನ್ನು ಬಳಕೆ ಮಾಡುತ್ತಾನೆ. ಬಲರಾಮನದು ಏಳನೆ ಅವತಾರವಾಗಿದ್ದು, ಮನುಷ್ಯ ನೇಗಿಲನ್ನು ಹಿಡಿದುಕೊಂಡು ಕೃಷಿ ಆರ್ಥಿಕತೆಗೆ ರೂಪಾಂತರಗೊಳ್ಳುತ್ತಾನೆ. ನಂತರದ ಅವತಾರ ಕೃಷ್ಣಾವತಾರ. ಮನುಷ್ಯ ತನ್ನನ್ನು ಪಶುಪಾಲನೆಯಲ್ಲಿ ತೊಡಗಿಸಿಕೊಳ್ಳುತ್ತಾನೆ. ಮನುಷ್ಯ ಒಂದೆಡೆ ನೆಲೆಸುವುದರೊಂದಿಗೆ ಜೀವನ ಇನ್ನಷ್ಟು ಅಭಿವೃದ್ಧಿಗೊಳ್ಳುವ ಘಟ್ಟವಾಗಿದ್ದು, ಹೈನುಗಾರಿಕೆ ಆರ್ಥಿಕತೆಗೆ ಮುಂದಾಗುತ್ತಾನೆ. ಕಲ್ಕಿ ಇನ್ನಷ್ಟೆ ಬರಬೇಕಾಗಿದೆ. ಕಲ್ಕಿ ಕುದುರೆ ಮೇಲೆ ಬರುತ್ತಾನೆಂದು ಹೇಳಲಾಗಿದ್ದು, ಕುದುರೆ ಸಾಕುವ ಯುಗಕ್ಕೆ ಪ್ರವೇಶಿಸುವುದನ್ನು ತೋರಿಸುತ್ತದೆ. ಹೀಗೆ ಮನುಷ್ಯನು ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಯಾವರೀತಿ ವಿಕಾಸವಾದ ಎಂಬುದರ ವೈಜ್ಞಾನಿಕ ವಿಶ್ಲೇಷಣೆಯನ್ನು ನೀಡಲಾಗಿದೆ.

ಇಂತಹ ವೈಜ್ಞಾನಿಕ ವಿಶ್ಲೇಷಣೆಗೆ ಬಿಜೆಪಿ ಸಿದ್ಧವಿಲ್ಲ. ಕೇಂದ್ರ ಸರ್ಕಾರ ನ್ಯಾಯಾಲಯದಲ್ಲಿ ಸಲ್ಲಿಸಿದ ಅಫಿಡವಿಟ್ ವಿರುದ್ಧ ಇಡೀ ದೇಶಾದ್ಯಂತ ಗಲಭೆಗಳನ್ನು ಆರಂಭಿಸಿತು. ಈ ಹಂತದಲ್ಲಿ ಅಫಿಡವಿಟ್‌ನಲ್ಲಿರುವ ಕೆಲವು ಪ್ಯಾರಾಗಳನ್ನು ಹಿಂಪಡೆಯಲು ಯುಪಿಎ ಸರ್ಕಾರ ನಿರ್ಧರಿಸಿದ್ದು ಆಗುತ್ತಿದ್ದ ಅನಾಹುತವನ್ನು ತಪ್ಪಿಸಿದೆ. ○

'ಅಮೆರಿಕಾ ಇರಾಕನ್ನು ಅತಿಕ್ರಮಿಸಿದ್ದು ತೈಲಕ್ಕಾಗಿ' - ಅಲನ್ ಗ್ರೀನ್ಸ್ ಪಾನ್

ಈ ಅಲನ್ ಗ್ರೀನ್ಸ್ ಪಾನ್ ಯಾರು ಗೊತ್ತೆ? ಅಮೆರಿಕಾದ ಸೆಂಟ್ರಲ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ. ಈ ಸೆಂಟ್ರಲ್ ಬ್ಯಾಂಕ್ ಎಂದರೆ ಅಮೆರಿಕದ ರಿಜರ್ವ್ ಬ್ಯಾಂಕ್.

ಎಷ್ಟು ವರ್ಷ ಇಲ್ಲಿದ್ದರು? ಬರೋಬ್ಬರಿ ಆರು ಜನ ಅಮೆರಿಕದ ಅಧ್ಯಕ್ಷರ ಅವಧಿಗೆ ಅವರು ಈ ಹುದ್ದೆಯಲ್ಲಿದ್ದದ್ದು. ಅಮೆರಿಕದ ಆರ್ಥಿಕತೆಯನ್ನು ಉತ್ತಮ ಪಡಿಸುವುದರಲ್ಲಿ ರಿಜರ್ವ್ ಬ್ಯಾಂಕ್ ಅಧ್ಯಕ್ಷರಾಗಿ ದೊಡ್ಡ ಪಾತ್ರ ವಹಿಸಿದರೆಂದು ಇವರು ಹೆಸರುಗಳಿಸಿದ್ದಾರೆ.

ಐದಾರು ತಿಂಗಳ ಹಿಂದೆ ಅವರು ನಿವೃತ್ತರಾದರು. ಇದೀಗ ಅವರ ಆತ್ಮ ಹೊರಬಿದ್ದಿದೆ. ಕ್ಷಮಿಸಿ ಆತ್ಮಚರಿತ್ರೆ ಹೊರಬಿದ್ದಿದೆ.

ಅದರಲ್ಲಿ - ಅಮೆರಿಕ ಇರಾಕನ್ನು ಅತಿಕ್ರಮಿಸಿದ್ದು ತೈಲಕ್ಕಾಗಿ - ಅಂತ ಸ್ಪಷ್ಟವಾಗಿ ಹೇಳಿದ್ದಾರೆ.


'ಸಮೂಹ ನಾಶಕ ಅಸ್ತ್ರಗಳ ಪ್ರಶ್ನೆ ಒಂದು ನೆಪವಾಗಿತ್ತು. ಅದೊಂದು ಪ್ರಮುಖವಾದ ಪ್ರಶ್ನೆಯೇ ಆಗಿರಲಿಲ್ಲ ? ಅಂತಲೂ ಆತ್ಮಚರಿತ್ರೆಯಲ್ಲಿ ಅಲಾನ್ ಹೇಳಿದ್ದಾರೆ.

'ಇರಾಕ್ ಯುದ್ಧ ನಡೆದದ್ದು ತೈಲಕ್ಕಾಗಿ' ಎನ್ನುವ - ಎಲ್ಲರಿಗೂ ಗೊತ್ತಿರುವ ಸತ್ಯವನ್ನು ಹೇಳಿದರೆ ಇರಿಸು ಮುರುಸು ಉಂಟಾಗುತ್ತದೆ ಎನ್ನುವುದು ನನಗೆ ಬೇಸರ ತರಿಸುತ್ತದೆ' ಎನ್ನುತ್ತಾರೆ ಅಲಾನ್.

ಇವರೇನು ಇರಾಕಿಯಲ್ಲ, ಅಥವಾ ಇರಾನ್, ಉತ್ತರ ಕೊರಿಯ, ವಿಯೆಟ್ನಾಂ ದೇಶದವರಲ್ಲ. ಯುದ್ಧ ವಿರೋಧಿ ಚಳುವಳಿಕಾರರೂ ಅಲ್ಲ. ಕಮ್ಯುನಿಸ್ಟ್ ಅಂತೂ ಅಲ್ಲವೇ ಅಲ್ಲ. ವಾಷಿಂಗ್‌ಟನ್ ಅರಮನೆ - ಶ್ವೇತ ಭವನದ ಅತಿ ನಿಕಟವರ್ತಿ.

ಇವರು ಹೇಳಿದ್ದರಲ್ಲಿ ಭಾರಿ ಹೊಸತು ಏನು ಇಲ್ಲ ಅಂತೀರ ?

ಅದು ನಿಜ. ಆದರೆ ಅಮೆರಿಕ ಇರಾಕ್ ಮೇಲೆ ದಾಳಿ ಮಾಡಿದ್ದು, ಇರಾಕಿ ಜನರನ್ನು ಸದ್ದಾಂ ಹುಸೇನ್‌ನಿಂದ ಕಾಪಾಡೋದಕ್ಕೆ , ಪ್ರಜಾಪ್ರಭುತ್ವವನ್ನು ರಕ್ಷಿಸೋದಕ್ಕೆ ಅಂತಾ ಈಗಲೂ ಹಲವಾರು ಜನ ನಂಬ್ಕೊಂಡಿದ್ದಾರಲ್ಲ ! ಅಂತಹವರಿಗಾಗಿ ಆತ್ಮ ಚರಿತ್ರೆಯ ಈ ಸಾಲುಗಳನ್ನು ಹೆಕ್ಕಿ ಕೊಡಲಾಗಿದೆ ಅಷ್ಟೆ.



ನಮ್ಮಲ್ಲಿ ಕೆಲವರು ಅಮೆರಿಕ ತಮ್ಮ ಹೆಗಲ ಮೇಲೆ ಕೈ ಹಾಕಿದೆ ಅಂತ ಸಂತೋಷ ಪಡುತ್ತಿದ್ದಾರಲ್ಲ ಅಮೆರಿಕ ನಮ್ಮ ಹೆಗಲ ಮೇಲೆ ಹಾಕಿರುವುದು ಕೈ ಅಲ್ಲ, ಬಂದೂಕನ್ನು ಇಟ್ಟಿದೆ. ಅದು ತನಗೆ ಬೇಕಾದವರನ್ನು ಉಡಾಯಿಸೋದಕ್ಕೆ ಅಂತ ಅವರಿಗೆ ಅರ್ಥ ಆದರೆ ಸಾಕು. ○

ಜನಶಕ್ತಿ ಕನ್ನಡ ವಾರಪತ್ರಿಕೆ

ಸೆಪ್ಟೆಂಬರ್ 30,

ಪುರಸಭಾ ಚುನಾವಣೆಗಳು

ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಹತ್ತಿರವಾಗಿವೆ. ಇವುಗಳ ಮಹತ್ವವೇನು? ಇವುಗಳನ್ನು ಬಲಗೊಳಿಸುವ ಬಗೆ ಹೇಗೆ? ಒಂದು ನೋಟ

ಪ್ರಜಾಸತ್ತಾತ್ಮಕ ಚಳುವಳಿ ಬಲಗೊಳ್ಳಬೇಕಾಗಿದೆ

ಜಿ.ಎನ್.ನಾಗರಾಜ್

ಕರ್ನಾಟಕದಲ್ಲಿ ಕೆಲವೇ ನಗರಗಳ ಹೊರತಾಗಿ ಎಲ್ಲೆಡೆ ಪುರಸಭಾ ಚುನಾವಣೆಗಳ ಬಿರುಸು. ಪ್ರಣಾಳಿಕೆಗಳ ಬಿಡುಗಡೆಯ ಸುರಿಮಳೆ. ಆದರೆ ಅದೇ ಸಂದರ್ಭದಲ್ಲಿ ನಿಜವಾದ ಸುರಿಮಳೆ ಸದ್ಯಕ್ಕೆ ಚುನಾವಣೆಯಿಲ್ಲದ ಬೆಂಗಳೂರು ನಗರವೂ ಸೇರಿದಂತೆ ಅನೇಕ ನಗರಪಟ್ಟಣಗಳ ನಾಗರಿಕ ಸೌಲಭ್ಯಗಳನ್ನು ಅಗ್ನಿ ಪರೀಕ್ಷೆಗೆ ಒಡ್ಡಿದೆ.

ಸುಮ್ಮಸುಮ್ಮನೆ ಕೊಚ್ಚಿಕೊಳ್ಳುವುದು

ಈ ಪುರಸಭಾ, ನಗರಸಭಾ ಚುನಾವಣೆಗಳನ್ನಾಗಲೀ, ಪಂಚಾಯತ್ ಚುನಾವಣೆಗಳನ್ನಾಗಲೀ ನಡೆಸುವುದೆಂದರೆ ರಾಜ್ಯ ಸರ್ಕಾರದ ಆಡಳಿತದ ಚುಕ್ಕಾಣಿ ಹಿಡಿದಿರುವ ಪಕ್ಷಗಳಿಗೆ ಇರುಸುಮುರುಸು. ಅವುಗಳನ್ನು ದಶಕಗಟ್ಟಲೆ ನಡೆಸದೆ ಮುಂದು ಹಾಕಿರುವುದೂ ಉಂಟು, ನಮ್ಮ ರಾಜ್ಯದಲ್ಲಿ ಕೂಡ. ಈ ಸ್ಥಳೀಯ ಆಡಳಿತದ ಸಂಸ್ಥೆಗಳಿಗೆ ಕಾಲಕಾಲಕ್ಕೆ ಸರಿಯಾಗಿ ಚುನಾವಣೆಗಳನ್ನು ನಡೆಸಬೇಕು ಮತ್ತು ಅವುಗಳನ್ನು ಬಲಪಡಿಸಬೇಕು ಎಂಬುದನ್ನು ತಮ್ಮ ಪಕ್ಷದ ದೃಢ ನೀತಿಯನ್ನಾಗಿ ಮಾಡಿ ರಾಜ್ಯ ಘಟಕಗಳೆಲ್ಲ ಅದನ್ನು ಪರಿಪಾಲಿಸುವಂತೆ ಮಾಡಲಾಗದ ಕಾಂಗ್ರೆಸ್ ಪಕ್ಷ ಇಂತಹ ಆಡಳಿತ ವಿಕೇಂದ್ರೀಕರಣದ ಆದರ್ಶ ಮಾದರಿ ಪಶ್ಚಿಮ ಬಂಗಾಳದಲ್ಲಿ ಯಶಸ್ವಿಯಾಗಿದ್ದನ್ನು ನೋಡಿದ ಮೇಲೆ ಅಂತಹ ಸಂವಿಧಾನ ತಿದ್ದುಪಡಿಯನ್ನು ತರುವ ಅನಿವಾರ್ಯತೆಗೆ ಒಳಗಾಯಿತು. ಹೀಗೆ ಪುರಸಭೆ ಮೊದಲಾದವುಗಳ ಆಡಳಿತವನ್ನು ಹಾಳುಮಾಡಿದ ಕಾಂಗ್ರೆಸ್ ಪಕ್ಷವೇ ಇಂದು ನಾವೇ ಸಂವಿಧಾನ ತಿದ್ದುಪಡಿ ತಂದಿದ್ದು ಎಂದು ನಾಚಿಕೆಯಿಲ್ಲದೆ ಕೊಚ್ಚಿಕೊಳ್ಳುತ್ತದೆ.

ಮುಂದೂಡಿಕೆ ಯತ್ನ ವಿಫಲ

ಈ ಭಾರಿಯ ಪುರಸಭಾ ಚುನಾವಣೆಗಳನ್ನು ಮುಂದೂಡಲು ಜೆಡಿ(ಎಸ್) ಬಿಜೆಪಿ ಸರ್ಕಾರವೂ ಹಲವು ಬಾರಿ ಪ್ರಯತ್ನಿಸಿ, ನ್ಯಾಯಾಲಯದ ನೆರವನ್ನು ಪಡೆದು ಮುಂದೂಡಿ ಮತ್ತೆ ಸುಪ್ರಿಂ ಕೋರ್ಟ್‌ನ ಆದೇಶದ ಮೇರೆಗೆ ಈಗ ಚುನಾವಣೆ ನಡೆಯುತ್ತಿದೆ. ಸರ್ಕಾರದ ಆಡಳಿತಾಧಿಕಾರಿಗಳ ದರ್ಬಾರ್‌ನ್ನು ಕೊನೆಗಾಣಿಸಲಾಗುತ್ತಿದೆ. ಈಗ ಈ ಮೂರು ಪಕ್ಷಗಳು ಆಶ್ವಾಸನೆಗಳ ಮಹಾಪೂರವನ್ನೇ ಹರಿಸಿದ್ದಾರೆ.

ಕಸ ಗುಡಿಸಿತು ಚರಂಡಿ ಮಾಡಿಸುವ... ಮಾತ್ರವಲ್ಲ

ಈ ಸಂದರ್ಭದಲ್ಲಿ ಪುರಸಭೆ, ನಗರಸಭೆಗಳೆಂದರೆ ಅವು ಕೇವಲ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಎಂಬ ಕಲ್ಪನೆ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಅವರ ಪ್ರಣಾಳಿಕೆಗಳಲ್ಲಿಯೂ ಎದ್ದುಕಾಣುತ್ತಿದೆ. ಅಂದರೆ ಕಸ ಗುಡಿಸು, ಚರಂಡಿ ಮಾಡಿಸು, ರಸ್ತೆ ಮಾಡಿಸು, ಬೀದಿ ದೀಪ ಇದೆಯೇ ನೋಡು ಇವಷ್ಟೇ ಈ ಸಭೆಗಳ ಕೆಲಸ ಎಂಬುದು ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಪಕ್ಷಗಳ, ಇತರೆ ಬಂಡವಾಳಶಾಹಿ ಪಕ್ಷಗಳ ತಿಳುವಳಿಕೆ. ಅಷ್ಟಕ್ಕಾಗಿ ಮಾತ್ರ ನಾಗರೀಕರ ಮತದಾನ. ಸಿಪಿಐ(ಎಂ) ಪಕ್ಷ ನಗರ, ಪಟ್ಟಣಗಳ ಎಲ್ಲಾ ಆಡಳಿತವೂ ಪುರಸಭೆ ನಗರಸಭೆಗಳಿಗೆ ಅಧೀನವಾಗಿರಬೇಕೆಂದು ಬಯಸುತ್ತದೆ. ಆದರೆ



ಬಂಡವಾಳಶಾಹಿ ಪಕ್ಷಗಳು ನಾಗರೀಕ ಸೌಲಭ್ಯಗಳು, ಮನೆ ಖಾತೆ ವಿಷಯದ ಹೊರತಾಗಿ ಎಲ್ಲವೂ ತಮ್ಮ ಮುಷ್ಟಿಯಲ್ಲಿರುವ ರಾಜ್ಯ ಸರ್ಕಾರದ ಕೈಯಲ್ಲಿಯೇ ಇರಬೇಕೆಂದು ಬಯಸುತ್ತವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಆಡಳಿತ ವಿಕೇಂದ್ರೀಕರಣ ಅಧಿಕಾರದ ಹಾಗೂ ಆಡಳಿತದ ಹಲವು ಇಲಾಖೆಗಳ ವರ್ಗಾವಣೆಯನ್ನೇ ಮಾಡಬೇಕೆಂಬ ಮಾತು ಕೆಲವೊಮ್ಮೆ ಕೆಲವು ಕ್ರಮಗಳು ಕಾಣಬರುತ್ತವೆ. ಆದರೆ ನಗರ ಪಟ್ಟಣಗಳ ವಿಷಯದಲ್ಲಿ ಆಡಳಿತ ವಿಕೇಂದ್ರೀಕರಣ ಎಂಬ ಮಾತು ಎಲ್ಲೂ ಕೇಳಬರುವುದಿಲ್ಲ. ಇದು ಬಂಡವಾಳಶಾಹಿ,



ಭೂಮಾಲಕವರ್ಗದ ಪಕ್ಷಗಳು ಎಲ್ಲಾ ಆಡಳಿತವನ್ನು ರಾಜ್ಯಮಟ್ಟದಲ್ಲಿ ತಮ್ಮ ಮುಷ್ಟಿಯಲ್ಲಿಯೇ ಹಿಡಿದುಕೊಳ್ಳಬೇಕೆನ್ನುವ ಅಧಿಕಾರದಾಹಕ್ಕೆ ಉದಾಹರಣೆ. ನಗರ, ಪಟ್ಟಣಗಳ ಅಧಿಕಾರವನ್ನು ಅಲ್ಲಿಯ ಪುರಸಭೆ, ನಗರಸಭೆಗಳಿಗೆ ವಹಿಸಿಕೊಟ್ಟರೆ ತಮಗೇನು ಕೆಲಸ? ತಮ್ಮ ಆದಾಯದ ಮೂಲವೇನು? ಎಂಬುದು ಅವರ ಹಪಹಪಿ.

ನಗರಾಡಳಿತ ಸಂಸ್ಥೆಗಳ ದೈನೇಸಿ ಸ್ಥಿತಿ

ಪುರಸಭೆ, ನಗರಸಭೆಗಳು, ಅದರ ಪ್ರತಿನಿಧಿಗಳು ಪ್ರಜೆಗಳಿಗೆ ಹತ್ತಿರದಲ್ಲಿರುವುದರಿಂದ ಹೆಚ್ಚು ಅಧಿಕಾರವೂ ಅವರಿಗೆ ದೊರೆತರೆ ಅವುಗಳನ್ನು ಬಲಪಡಿಸಿದರೆ ನಾಗರಿಕರು ತಮ್ಮ ವಾರ್ಡ್ ನೆರೆಹೊರೆಯ ಕಛೇರಿಗಳಲ್ಲಿಯೇ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅವಕಾಶವಾಗುತ್ತದೆ. ಆದರೆ ಅದಕ್ಕೆ ಬದಲಾಗಿ ನೀರು ಸರಬರಾಜಿಗೆ ಒಂದು ರಾಜ್ಯ ನಿಗಮ, ನಗರಗಳ ಅಭಿವೃದ್ಧಿಗೊಂಡು ನಾಮಕರಣಗೊಂಡ ಅಧಿಕಾರಿಗಳ 'ಬುಡಾ', 'ಮೂಡ', 'ಹೂಡ' ಎಂತಹುದೋ ಒಂದು ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ರಾಜ್ಯ ಸರ್ಕಾರದ ನೇರ ಹಿಡಿತದಲ್ಲಿ. ಹೀಗೆ ಮಾಡಿ ಈ ಸಂಸ್ಥೆಗಳನ್ನು ಹಲ್ಲಿಲ್ಲದ, ಬೆನ್ನೆಲುಬಿಲ್ಲದ ಸಂಸ್ಥೆಗಳನ್ನಾಗಿ ಮಾಡಲಾಗಿದೆ. ಅವುಗಳ ಹಣಕಾಸು ಸ್ಥಿತಿಯಂತೂ ರಾಜ್ಯ ಸರ್ಕಾರದ ಭಿಕ್ಷೆಗಾಗಿ ಕಾಯುವಂತಹ ದೈನೇಸಿ ಸ್ಥಿತಿಗೆ ತರಲಾಗಿದೆ. ಹೀಗಾಗಿ ಈ ಸಂಸ್ಥೆಗಳ ಬಗ್ಗೆ ಜನರಿಗೆ ಗೌರವವೇ ಇಲ್ಲದಂತಾಗಿದೆ. ಈ ಸಂಸ್ಥೆಗಳು ತಮ್ಮ ಸಮಸ್ಯೆಗಳನ್ನು ಬಗೆಹರಿಸಬಹುದೆಂಬ ನಂಬಿಕೆ ಜನರಿಗೆ ಮಾಯವಾಗಿದೆ. ಹೆಚ್ಚು ಹಣ ಹಾಗೂ ನಗರಗಳ, ಪಟ್ಟಣಗಳ ಒಳಗಿರುವ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳನ್ನು ಈ ಸಂಸ್ಥೆಗಳಿಗೆ ಒದಗಿಸಿಕೊಟ್ಟರೆ ಆಗ ಈ ಸಂಸ್ಥೆಗಳು ಬಲಿಷ್ಠವಾಗಿ ಜನರಿಗೇ ಬಲಬಂದಂತೆ ಆಗುತ್ತದೆ.

ಈ ಸಂಸ್ಥೆಗಳಲ್ಲಿ ಅಧಿಕಾರವಿಲ್ಲದಿದ್ದರೂ ಚುನಾವಣೆಗಳಲ್ಲಿ ಪೈಪೋಟಿಗೇನೂ ಕಡಿಮೆಯಿಲ್ಲ. ರಾಜಕೀಯ ಪಕ್ಷಗಳೂ, ಸ್ಪರ್ಧಿಗಳೂ ಮೇಲೆ ಬಿದ್ದು ಪೈಪೋಟಿ ನಡೆಸುತ್ತವೆ. ಗೆದ್ದ ಮೇಲೆ ಆ ಸ್ಥಾನಬಲದಿಂದ ಅನೇಕ ನಗರ, ಪಟ್ಟಣಗಳ ಪುರಪಿತೃಗಳು ಅಪಾರ ಹಣವನ್ನು ಗಳಿಸಿಕೊಳ್ಳುತ್ತಾರೆ. ಬೆನ್ನೆಲುಬಿಲ್ಲದ ಸಂಸ್ಥೆಗಳು ಎಂದು ಮೇಲೆ ಕರೆಯಲಾಗಿರುವ ಈ ಸಂಸ್ಥೆಗಳಲ್ಲಿ ಈ ಹಣದ ಮೂಲ ಯಾವುದು?

ಇಲ್ಲಿದೆ ಜೀವ

ಇಲ್ಲಿಯೇ ಈ ಸಂಸ್ಥೆಗಳ ಜೀವ ಹಾಗೂ ಸಮಸ್ಯೆ ಇರುವುದು. ನಗರ, ಪಟ್ಟಣಗಳ ಬೆಳವಣಿಗೆಯಾಗುತ್ತಿದ್ದಂತೆ ಮನೆ ನಿವೇಶನಗಳ ಬೆಲೆ ವಿಪರೀತ ಏರಿದೆ. ಅವುಗಳ ಸುತ್ತ ಮೈಲುಗಟ್ಟಲೆ ಕಾಯಿದೆಬಾಹಿರ, ಕಾಯಿದೆಬದ್ಧ ಅಕ್ರಮ ವಿಸ್ತರಣಗಳು ನಾಯಿಕೊಡೆಗಳಂತೆ ಬೆಳೆಯುತ್ತಿವೆ. ಇವುಗಳನ್ನು ಅಸಹಾಯಕ ನಾಗರೀಕರಿಗೆ ದುಬಾರಿ ಬೆಲೆಗೆ ಮಾರಿ ಅವರ ಜೀವ ಹಿಂಡಿ ಹಣ ಮಾಡುವುದು, ಆಸ್ತಿದಾಖಲೆಗಳು, ವರ್ಗಾವಣೆಗಳ ವಿಷಯದಲ್ಲಿ ಭ್ರಷ್ಟಾಚಾರ, ನಾಗರೀಕ ಸೌಲಭ್ಯ ಒದಗಿಸುವ ಕೆಲಸಗಳ ಗುತ್ತಿಗೆದಾರತನ, ಮನೆ ನಿರ್ಮಾಣ, ಅಂಗಡಿ, ಹೊಟೇಲುಗಳಿಗೆ ಲೈಸೆನ್ಸ್ ನೀಡಿಕೆ ಇತ್ಯಾದಿಗಳೇ ಇಂದು ಭ್ರಷ್ಟ ಹಣದ ಆಧಾರವಾಗಿದೆ. ಅವುಗಳಲ್ಲಿ ನಗರಾಸ್ತಿ, ಅಕ್ರಮ ನಿವೇಶನಗಳೇ ಇಂದು ಪ್ರಧಾನವಾಗಿದೆ. ಹೀಗಾಗಿ ರಿಯಲ್ ಎಸ್ಟೇಟ್ ದಂಧೆಕೋರರು, ಗುತ್ತಿಗೆದಾರರು ಪರಸ್ಪರ ಪೈಪೋಟಿ ಮಾಡಿ ಸ್ಥಾನಗಳಿಸಲು ಪ್ರಯತ್ನಿಸುತ್ತಾರೆ. ಇದೇ ಪುರಸಭಾ, ನಗರಸಭಾ ಚುನಾವಣೆಗಳ ಅರ್ಥ ಎನ್ನುವಂತಾಗಿದೆ. ಇದಕ್ಕಾಗಿ ಗೂಂಡಾಗಿರಿ, ಮಾಫಿಯಾಗಳ ಬೆಳವಣಿಗೆ ಹೆಚ್ಚುತ್ತಿದೆ.

ಹೀಗಾಗಿ ಇಂದು ನಗರ, ಪಟ್ಟಣಗಳ ವಾಸಿಗಳ ಸಮಸ್ಯೆಗಳ ಮೂಲವೂ ಇಲ್ಲಿದೆ. ಯಾವುದೇ ಯೋಜನೆಯಿಲ್ಲದೆ ಆರಂಭಿಕವಾಗಿ ತಲೆಯೆತ್ತಿದ ಅಕ್ರಮ ವಿಸ್ತರಣಗಳು ಮತ್ತು ಸ್ಲಂಗಳ ಮೊತ್ತವೇ ನಗರ ಎನ್ನುವ ಸ್ಥಿತಿಯಲ್ಲಿ ನಾಗರೀಕ ಸೌಲಭ್ಯಗಳ ಪಾಡೇನು? ಶಿಕ್ಷಣ, ಆರೋಗ್ಯ, ಅವಶ್ಯ ವಸ್ತುಗಳ ಸರಬರಾಜು, ಸಾಂಸ್ಕೃತಿಕ ಬೆಳವಣಿಗೆ, ಕ್ರೀಡೆ ಮೊದಲಾದ ಸಾಮಾಜಿಕ ಸೌಲಭ್ಯಗಳ ಪಾಡೇನು? ಯಾರಿಗೆ ಬೇಕು. ಇಂತಹ ಯಾವುದರ ಗೋಜಿಲ್ಲದೆ ಹಾಗೂ ಹೀಗೂ ಒಂದು ಅಕ್ರಮ ವಿಸ್ತರಣ ಮಾಡಿ, ಸೈಟು ಮಾರಿ, ಹಣ ಮಾಡಿಬಿಟ್ಟರೆ ಸಾಕು. ನೀರು, ರಸ್ತೆ, ಚರಂಡಿ ಎಲ್ಲವೂ ಅಲ್ಲಿ ವಾಸಮಾಡ ಬಂದವರ ತಲೆನೋವು ಎಂಬಂತಾಗಿದೆ.

ಈ ಅರಾಜಕ ಸ್ಥಿತಿಯಿಂದ ಹೊರಬರಲು ರಿಯಲ್ ಎಸ್ಟೇಟ್ ದಂಧೆಕೋರರ ಗುತ್ತಿಗೆದಾರರ ಕೈಯಿಂದ ಪುರಸಭೆ, ನಗರಸಭೆಗಳನ್ನು ಬಿಡಿಸಲು ನಗರ, ಪಟ್ಟಣಗಳ ದುಡಿಯುವ ಜನರು ಒಗ್ಗಟ್ಟಾಗಿ ಸಂಘಟಿತರಾಗಬೇಕಾಗಿದೆ. ಪ್ರಜಾಸತ್ತಾತ್ಮಕ ಚಳುವಳಿ ಬಲಿಷ್ಠವಾಗಬೇಕಾಗಿದೆ. ಈ ಸಂಸ್ಥೆಯನ್ನು ಪಟ್ಟಭದ್ರರಿಂದ ವಿಮುಕ್ತಿಗೊಳಿಸುತ್ತಾ ಹೆಚ್ಚು ಹೆಚ್ಚು ಅಧಿಕಾರ, ಹಣಕ್ಕಾಗಿ ಬಲಿಷ್ಠ ಪುರಸಭೆ ನಗರಸಭೆಗಳಿಗಾಗಿ ಹೋರಾಟ ನಡೆಸಬೇಕಾಗಿದೆ.

ಜನಪರ ಬದಲಾವಣೆಗೆ ಜನತೆಯ ಹೋರಾಟವೇ ದಾರಿ



ಪರಮಾಣು ಒಪ್ಪಂದದ ಹಿಂದಿನ ಆಟಗಳು

ಭಾರತ, ಅಮೇರಿಕಾ ಪರಮಾಣು ಒಪ್ಪಂದದ ಬಗ್ಗೆ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಮತ್ತು ಇತರ ಪ್ರಜಾಪ್ರಭುತ್ವವಾದಿಗಳು ವ್ಯಕ್ತಪಡಿಸಿರುವ ಪ್ರಮುಖ ಆತಂಕಗಳು ಕೇವಲ ಊಹಾಪೂಹವಲ್ಲ ಎಂಬುದೀಗ ಒಂದೊಂದಾಗಿ ಸಾಬೀತಾಗುತ್ತಿದೆ. ಕಳೆದ ವಾರ ಇಬ್ಬರು ಉನ್ನತ ಅಮೇರಿಕನ್ ವಕ್ತಾರರ ಹೇಳಿಕೆಗಳೇ ಇವನ್ನು ಪುಷ್ಟೀಕರಿಸಿವೆ ಎಂಬುದು ಗಮನಾರ್ಹ.

ಈ ಒಪ್ಪಂದವನ್ನು ಪ್ರತ್ಯೇಕವಾಗಿ ನೋಡುವುದು ಸರಿಯಲ್ಲ. ಅಮೇರಿಕಾದೊಂದಿಗೆ ಬೆಳೆಯುತ್ತಿರುವ ಮಿಲಿಟರಿ ಸಂಬಂಧಗಳ ಒಟ್ಟಾರೆ ಚಿತ್ರದ ಭಾಗವಾಗಿಯೇ ಇದನ್ನು ನೋಡಬೇಕಾಗುತ್ತದೆ. ಹಾಗೂ ಈ ಒಪ್ಪಂದ ಅಮೇರಿಕಾದ ಹೈಡ್ ಆ್ಯಕ್ಟ್‌ಗೆ ಒಳಗಾಗಿದ್ದು ಈ ಕಾನೂನು ನಮ್ಮ ದೇಶದ ಸಾರ್ವಭೌಮತೆಗೆ ಕುಂದುತರುವ ಅಂಶಗಳನ್ನು ಹೊಂದಿದೆ ಎಂಬುದು ಎಡಪಕ್ಷಗಳು ಮತ್ತು ಇತರ ಟೀಕಾಕಾರರ ಮುಖ್ಯ ಆಕ್ಷೇಪಗಳು. ಭಾರತದಲ್ಲಿ ಅಮೇರಿಕಾದ ರಾಯಭಾರಿಗಳು ಮತ್ತು ಅಮೇರಿಕಾದ ಸಹಾಯಕ ವಿದೇಶಾಂಗ ಕಾರ್ಯದರ್ಶಿಗಳ ಹೇಳಿಕೆಗಳು ಇವೆರಡೂ ಆಕ್ಷೇಪಗಳು ಎಷ್ಟು ನಿಜ ಎಂಬುದನ್ನು ತೋರಿಸಿಕೊಟ್ಟಿವೆ.



ಎಡಪಕ್ಷಗಳು ವ್ಯಕ್ತ ಮಾಡಿದ ಆತಂಕಗಳು ನಿಜವಾಗುತ್ತಿವೆ. ಒಪ್ಪಂದವನ್ನು ಬೇಗ ಬೇಗ ಅಂತಿಮಗೊಳಿಸಿ ಎಂದು ಅಮೆರಿಕಾ ಒತ್ತಡ ಹೇರುತ್ತಿದ್ದರೆ ಇನ್ನೊಂದೆಡೆ ಒಪ್ಪಂದದ ಸಂಬಂಧದ ಹಲವು ಬಚ್ಚಿಡಲಾದ ಅಂಶಗಳು ಬಯಲಾಗುತ್ತಾ ನಡೆದಿವೆ.

ಒಪ್ಪಂದದ ಪೂರ್ಣ ಕಣ್ಣೋಟ

ಅಮೇರಿಕಾದ ರಾಯಭಾರಿಗಳು ಸೆಪ್ಟೆಂಬರ್ 18ರಂದು ಭಾರತ, ಅಮೇರಿಕಾ ಆರ್ಥಿಕ ಶೃಂಗಸಭೆಯಲ್ಲಿ ಮಾತಾಡುತ್ತಾ 'ಭಾರತ, ಅಮೇರಿಕಾ ಸಂಬಂಧಗಳು ಎಲ್ಲಾ ಮಾನವ ಸಾಧನೆಗಳ ವಲಯಗಳನ್ನು ಆವರಿಸಿರುವ ಒಂದು ವ್ಯಾಪಕ ಮತ್ತು ದೀರ್ಘಕಾಲೀನ ಕಣ್ಣೋಟ ಹೊಂದಿದ್ದು ಪರಮಾಣು ಒಪ್ಪಂದ ಪೂರ್ಣ ಕಣ್ಣೋಟದ ಒಂದು ಭಾಗವಷ್ಟೇ' ಎಂದು ಹೇಳಿದರು. ಏನಿದು ಈ 'ಪೂರ್ಣ ಕಣ್ಣೋಟ'? "ತ್ವರಿತವಾಗಿ ಬೆಳೆಯುತ್ತಿರುವ ಆರ್ಥಿಕ ಸಂಬಂಧಗಳು ಮತ್ತು ರಕ್ಷಣೆ, ಬಾಹ್ಯಾಕಾಶ ಸಹಕಾರದಿಂದ ಹಿಡಿದು ಭಯೋತ್ಪಾದನೆಗೆ ವಿರೋಧ, ರಕ್ಷಣೆ, ಆರೋಗ್ಯ ಹವಾಮಾನ ಬದಲಾವಣೆ" ಇತ್ಯಾದಿಗಳ ಈ 'ಪೂರ್ಣ ಕಣ್ಣೋಟ'ದ ಇತರ ಭಾಗಗಳು! ಇದೀಗ ಮಿಲಿಟರಿ ಮೈತ್ರಿಯ ನೀಲ ನಕ್ಷೆಯಲ್ಲದೇ ಬೇರೇನು?

ಇಷ್ಟೇ ಅಲ್ಲ, ಅಮೇರಿಕಾ ರಾಯಭಾರಿಗಳು ಆರ್ಥಿಕ ಉದಾರೀಕರಣದ 'ಸುಧಾರಣೆ'ಗಳನ್ನು ಬಲಗೊಳಿಸಬೇಕು, ಬ್ಯಾಂಕಿಂಗ್ ಮತ್ತು ಹಣಕಾಸು ವಲಯದಲ್ಲಿ ಇನ್ನಷ್ಟು 'ಸುಧಾರಣೆ' ತರಬೇಕು ಎಂದು ಸಲಹೆ ನೀಡಿದರು. ಅಂದರೆ 'ಪೂರ್ಣ'ದ ಭಾಗವಾದ ಈ ಪರಮಾಣು ಒಪ್ಪಂದ ಭಾರತ ವಿದೇಶಾಂಗ ನೀತಿಗಳಲ್ಲೂ, ಆರ್ಥಿಕ ನೀತಿಗಳಲ್ಲೂ ಅಮೇರಿಕಾದ ನಿಲುವುಗಳನ್ನೇ ಅನುಸರಿಸಬೇಕು ಎಂಬ ಪರಿಸ್ಥಿತಿಯತ್ತ ನಮ್ಮನ್ನು ತಳ್ಳುತ್ತದೆ ಎಂಬ ಆತಂಕ ಮೂಡಿಸುವುದು ಸಹಜ.

ಏನಿದರ ಅರ್ಥ


'ಆರ್ಥಿಕ ಸುಧಾರಣೆ'ಗಳ ದುಷ್ಫಲಗಳನ್ನು ನಮ್ಮ ಜನಗಳು ಈಗಾಗಲೇ ಅನುಭವಿಸುತ್ತಿದ್ದಾರೆ. ರಾಯಭಾರಿಗಳು 'ನೀರಿನ ವಾಣಿಜ್ಯ ಬಳಕೆಯಾಗಬೇಕು' ಎಂದೂ ಹೇಳಿದರು. ಏನಿದರ ಅರ್ಥ? ಜನಗಳಿಗೆ ಸಿಗುವ ಅಲ್ಪಸ್ವಲ್ಪ ನಾಗರಿಕ ಸೌಲಭ್ಯಗಳಿಗೂ ಶುಲ್ಕ ವಿಧಿಸಿ ಎಂದೇ ತಾನೇ?

ದಿಲ್ಲಿಯಲ್ಲಿ ಅಮೇರಿಕಾದ ರಾಯಭಾರಿಗಳ ಮಾತೇ ಹೀಗೆ ಈ ಒಪ್ಪಂದದ ಮೂಲ ಆಶಯವನ್ನು ಬಯಲುಗೊಳಿಸಿದರೆ ಅತ್ತ ವಾಶಿಂಗ್‌ಟನ್‌ನಲ್ಲಿ ರಿಚರ್ಡ್ ಬೌಚರ್ "123 ಒಪ್ಪಂದ ಪೂರ್ಣವಾಗಿ ಹೈಡ್ ಆ್ಯಕ್ಟ್‌ಗೆ ಅನುಗುಣವಾಗಿಯೇ ಇದೆ" ಎಂದು ಹೇಳಿದರು. ಈ 'ಪರಮಾಣು ಒಪ್ಪಂದ' ಅಮೇರಿಕಾದ ಹೈಡ್ ಆ್ಯಕ್ಟ್ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಈಡೇರಿಸಿದೆ ಎಂದೂ ಅವರು ಒಪ್ಪಿಕೊಂಡರು! ಭಾರತದ ಸ್ವತಂತ್ರ ವಿದೇಶಾಂಗ ನೀತಿ ಅಮೇರಿಕಾದ ವಿದೇಶಾಂಗ ನೀತಿ, ನಿಲುವುಗಳಿಗೆ ಅನುರೂಪವಾಗಿರುವಂತೆ ಮಾಡಲು ಏನು ಬದಲಾವಣೆಗಳು ಬರಬೇಕು ಎಂಬುದೇ ಹೈಡ್ ಆ್ಯಕ್ಟ್‌ನ ಹೂರಣ. ಸ್ವತಃ ಬೌಚರ್ ಕೂಡಾ ಇರಾನಿನೊಂದಿಗೆ ಭಾರತದ ಮಿಲಿಟರಿ ಒಪ್ಪಂದವನ್ನು ಕುರಿತಂತೆ ಅಮೇರಿಕಾಕ್ಕಿರುವ ಆತಂಕಗಳ ಬಗ್ಗೆ ಭಾರತಕ್ಕೂ ಗೊತ್ತಿದೆ ಎಂದು ಬಹಿರಂಗವಾಗಿಯೇ ಹೇಳಿದರು. ಅಮೇರಿಕಾ, ಭಾರತ ವ್ಯಾಪಾರ ಮೈತ್ರಿಕೂಟ ಮತ್ತು ಅಮೇರಿಕಾ, ಭಾರತ ವ್ಯಾಪಾರ ಕಾರ್ಯಪಡೆ ಜಂಟಿಯಾಗಿ ಪ್ರಾಯೋಜಿಸಿದ್ದ ಅಮೇರಿಕಾ, ಭಾರತ ಪರಮಾಣು ಸಹಕಾರ- ಮುಂದಿನ ಹೆಜ್ಜೆಗಳು" ಎಂಬ ಬಗ್ಗೆ ಮಾತನಾಡುತ್ತಿದ್ದರು. ಅಂದರೆ ಪರಮಾಣು ಒಪ್ಪಂದದ 'ಫಲ' ಬೇಕಾದರೆ ಅಮೇರಿಕಾ ಹೇಳಿದಂತೆ



ನಮ್ಮ ವಿದೇಶಾಂಗ ನೀತಿಗಳನ್ನು ಬದಲಿಸಬೇಕು ಎಂದೇ ಅರ್ಥವಲ್ಲವೇ? ಗಮನಿಸಬೇಕಾದ ಸಂಗತಿಯೆಂದರೆ ಈ ಒತ್ತಡ ಕೇವಲ ವಿದೇಶಾಂಗ ವಲಯಕ್ಕೆ ಸೀಮಿತವಾಗಿರುವುದಿಲ್ಲ. ರಕ್ಷಣಾ ಸಹಕಾರ ಭದ್ರತೆ ಮತ್ತು ಬೇಹುಗಾರಿಕೆ ಸಹಕಾರ ಇತ್ಯಾದಿ ಎಲ್ಲಾ ವಲಯಗಳಲ್ಲೂ ಅಮೇರಿಕಾದ ನೀತಿಗಳಿಗೆ ಅನುಗುಣವಾಗಿರಬೇಕು.

ಒಟ್ಟಿನಲ್ಲಿ ಈ ಪರಮಾಣು ಒಪ್ಪಂದ ಇದೇ ಸ್ವರೂಪದಲ್ಲಿ ಕಾರ್ಯರೂಪಕ್ಕೆ ಬಂದರೆ ಭಾರತದ ಸಾರ್ವಭೌಮತೆಗೆ ಭಾರೀ ಧಕ್ಕೆ ಬರುತ್ತದೆ ಎಂಬ ಆತಂಕವನ್ನು ಇಬ್ಬರು ಅಮೇರಿಕನ್ ವಕ್ತಾರರೇ ದೃಢಪಡಿಸಿದ್ದಾರೆ. ಆದ್ದರಿಂದ ಈಗಲಾದರೂ ಯುಪಿಎ ಸರ್ಕಾರ ಈ ದಿಕ್ಕಿನಲ್ಲಿ ಮುಂದುವರೆಯುವ ಮೊದಲು ಎಡಪಕ್ಷ ಮತ್ತು ಇತರ ಟೀಕಾಕಾರರ ಆತಂಕಗಳನ್ನು, ಆಕ್ಷೇಪಗಳನ್ನು ಪೂರ್ಣವಾಗಿ ಪರಿಶೀಲಿಸಬೇಕು ಎಂದು ದೇಶದ ಪ್ರಜಾಪ್ರಭುತ್ವವಾದಿಗಳು ನಿರೀಕ್ಷಿಸುತ್ತಾರೆ. ○



ಸಚಿವ ಕಪಿಲ್ ಸಿಬಾಲ್‌ರವರ ಅರ್ಥಹೀನ ಹೇಳಿಕೆಗೆ ಖಂಡನೆ

'ಬಹುಮತವಿಲ್ಲ, ಮತ್ತಿದು ಸಿಎಂಪಿಯ ಉಲ್ಲಂಘನೆ'

ಕೇಂದ್ರ ಸಚಿವ ಶ್ರೀಕಪಿಲ್ ಸಿಬಾಲ್‌ರವರು ಭಾರತ-ಅಮೇರಿಕ ಅಣು ಒಪ್ಪಂದದ ಬಗ್ಗೆ ಬೆಂಗಳೂರಿನಲ್ಲಿ ಪತ್ರಿಕಾ ಗೋಷ್ಠಿಯೊಂದನ್ನು ಉದ್ದೇಶಿಸಿ ಎಡಪಕ್ಷಗಳ ಮೇಲೆ ಹಲವಾರು ಆರೋಪಗಳನ್ನು ಮಾಡಿದ್ದಾರೆ ಮತ್ತು ಯುಪಿಎ ಸರ್ಕಾರ ಈ ಅಣು ಒಪ್ಪಂದದಿಂದ ಹಿಂದೆ ಹೋಗುವುದಿಲ್ಲ ಅದನ್ನು ಪುನರ್ವಿಮರ್ಶೆ ಮಾಡಲೂ ಆಗುವುದಿಲ್ಲ ಎಂದು ಹೇಳಿದ್ದಾರೆ. ಕರ್ನಾಟಕದಿಂದ ಪ್ರಕಟವಾಗುತ್ತಿರುವ ಹಲವು ಪತ್ರಿಕೆಗಳಲ್ಲಿ ಈ ಒಪ್ಪಂದಕ್ಕೆ ಸಂಬಂಧಿಸಿ ಎಡಪಕ್ಷಗಳ ಬಗ್ಗೆ ಕೆಲವು ಟೀಕೆಗಳನ್ನು ಮಾಡಲಾಗಿದೆ.

ಸಮಿಶ್ರ ಸರ್ಕಾರದ ಧರ್ಮ

ಸಚಿವ ಸಿಬಾಲ್‌ರವರು ಎಡಪಕ್ಷಗಳು ಸಮಿಶ್ರ ಸರ್ಕಾರದ ಧರ್ಮವನ್ನು ಪಾಲಿಸುತ್ತಿಲ್ಲ ಮತ್ತು ತಾವು ಅದನ್ನು ಪಾಲಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ನೀತಿಯನ್ನು ಕಣ್ಣು ಮುಚ್ಚಿಕೊಂಡು ಬೆಂಬಲಿಸುವುದೇ ಸಮಿಶ್ರ ಸರ್ಕಾರದ ಪಾಲುದಾರರ ಕರ್ತವ್ಯ, ಅದೇ ಸಮಿಶ್ರ ಸರ್ಕಾರದ ನೀತಿ ಎಂದು ಕಾಂಗ್ರೆಸ್ ಭಾವಿಸಿದಂತಿದೆ.

ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಬಗ್ಗೆ ಕಾಂಗ್ರೆಸ್ ರೂಪಿಸಿದ ಮೊದಲ ಕರಡಿನಲ್ಲಿ ಭಾರತ ಅಮೇರಿಕಾದೊಂದಿಗೆ ರಣನೀತಿಯ ಸಂಬಂಧವನ್ನು ಏರ್ಪಡಿಸಿಕೊಳ್ಳಬೇಕು ಎಂದು ನಮೂದಿಸಲಾಗಿತ್ತು. ಅದನ್ನು ಎಡಪಕ್ಷಗಳು ತೆಗೆದು ಹಾಕಲು ಒತ್ತಾಯಿಸಿ ನಂತರ ಅದನ್ನು ಸೇರಿಸಲಾಗಿಲ್ಲ, ಮಾತ್ರವಲ್ಲ ಸ್ವತಂತ್ರ ವಿದೇಶಾಂಗ ನೀತಿ, ಬಹುಧ್ರುವೀಯ ಪ್ರಪಂಚವನ್ನು ರೂಪಿಸುವುದು ಇವುಗಳನ್ನು ಅದರಲ್ಲಿ ಸೇರಿಸಲಾಯಿತು. ಎಡಪಕ್ಷಗಳು ಸರ್ಕಾರಕ್ಕೆ ನೀಡುವ ಬೆಂಬಲಕ್ಕೆ ಇದೇ ಆಧಾರ ಮತ್ತು ಇದು ಸರ್ಕಾರ ಭಾರತದ ಜನತೆಗೆ ನೀಡಿದ ವಚನ



ಹೀಗೆ ಸರ್ಕಾರದ ರಚನೆಯ ಮೊದಲ ದಿನಗಳಿಂದಲೇ ಈ ವಿಷಯದ ಬಗ್ಗೆ ಕಾಂಗ್ರೆಸ್‌ಗೆ ಸ್ಪಷ್ಟಪಡಿಸಿದ್ದೇವೆ.

ಆದರೆ ಇದನ್ನು ಕಾಂಗ್ರೆಸ್ ಅನೇಕ ಬಾರಿ ಉಲ್ಲಂಘಿಸುತ್ತಾ ಬಂದಿದೆ. ಅಂತಹ ಪ್ರತಿ ಸಂದರ್ಭದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿವೆ ಸಂಸತ್ತಿನಲ್ಲಿ ಮೂರು ಬಾರಿ ಇದರ ಬಗ್ಗೆ ಚರ್ಚೆ ನಡೆದಾಗ ಮಾತ್ರವಲ್ಲದೆ ಅಮೇರಿಕಾದ ಸಂಸತ್ತಿನಲ್ಲಿ ಹೈಡ್ ಕಾಯಿದೆಯ ಕರಡನ್ನು ಮಂಡಿಸಿದಾಗ ಮತ್ತು ಅಲ್ಲಿ ಅದರ ಮೇಲೆ ಚರ್ಚೆ ನಡೆಯುತ್ತಿದ್ದಾಗಲೇ 2006ರ ಜುಲೈ 23 ರಂದು ಎಡಪಕ್ಷಗಳು ಸರ್ಕಾರಕ್ಕೆ ಟಿಪ್ಪಣಿಯನ್ನು ಸಲ್ಲಿಸಿ ಅಮೇರಿಕಾದ ವಿದೇಶಾಂಗ ನೀತಿಗೆ ಭಾರತದ ವಿದೇಶಾಂಗ ನೀತಿ ಸರ್ವಸಮವಾಗಿರಬೇಕೆಂಬ ಮತ್ತಿತರ ಪ್ರಸ್ತಾಪಗಳನ್ನು ವಿರೋಧಿಸಲಾಗಿದೆ. ನಂತರ ಹೈಡ್ ಕಾಯಿದೆ ಅಂಗೀಕಾರವಾದ ನಂತರ ಸಂಸತ್ತಿನಲ್ಲಿ ಚರ್ಚೆ ನಡೆಸುವಾಗಲೇ ಈ ಒಪ್ಪಂದದ ಬಗ್ಗೆ ಮಾತುಕತೆಯನ್ನು ಕೈಬಿಡಿ ಎಂದು ಎಡಪಕ್ಷಗಳು ಹೇಳಿದವು ಮತ್ತು ಅಂದೇ ಈ ವಿಷಯದಲ್ಲಿ ಬಹುಮತ ಯುಪಿಎ ಸರ್ಕಾರದ ವಿರುದ್ಧವಾಗಿತ್ತು. ಜನವರಿ 7, 2007ರಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯನಂತರ ಹೈಡ್‌ಕಾಯಿದೆ ಸಿಎಂಪಿಯನ್ನು ಉಲ್ಲಂಘಿಸಿರುವುದರಿಂದ ಪ್ರಧಾನಮಂತ್ರಿ ಸಂಸತ್ತಿನಲ್ಲಿ ಇತ್ತ ಹತ್ತು ಆಶ್ವಾಸನೆಗಳಲ್ಲಿ ಹಲವನ್ನು ಸಾಧಿಸಲಾಗದಿರುವು ದರಿಂದ ಮತ್ತು ಬಹುಮತ ಈ ಒಪ್ಪಂದಕ್ಕೆ ವಿರುದ್ಧವಾಗಿರುವುದರಿಂದ ಈ ಒಪ್ಪಂದದ ಮಾತುಕತೆಯಲ್ಲಿ ಮುಂದುವರೆಯಬೇಡಿ ಎಂದು ಸ್ಪಷ್ಟ ಹೇಳಿಕೆ ನೀಡಿದೆ.

ಕಾಂಗ್ರೆಸ್‌ನ ಧಾರ್ಷ್ಟ್ಯ

ಇವಾವುದನ್ನೂ ಲೆಕ್ಕಿಸದೆ ಕೇಂದ್ರ ಸರ್ಕಾರ ಕಾಂಗ್ರೆಸ್‌ನ ಏಕಪಕ್ಷ ಸರ್ವಾಧಿಕಾರವೆಂದು ಭ್ರಮಿಸಿ ಮಾತುಕತೆಯನ್ನು ಮುಂದುವರೆಸಿ ಒಪ್ಪಂದಕ್ಕೆ ಸಹಿಹಾಕಿದರೆ, ಅದನ್ನು ಪುನರ್ವಿಮರ್ಶಿಸಲಾಗುವುದಿಲ್ಲ ಎಂದು ಅದಕ್ಕೆ ಅಂಟಿಕೊಂಡರೆ, ಅದನ್ನು 'ಐತಿಹಾಸಿಕ' ಎಂದು ಕಲ್ಪಿಸಿಕೊಂಡರೆ ಅದಕ್ಕೆ ಕಾಂಗ್ರೆಸ್ಸೇ ಹೊಣೆಯಾಗಬೇಕಾಗುತ್ತದೆ, ಎಡಪಕ್ಷಗಳಲ್ಲ ಎಂದು ಸ್ಪಷ್ಟಪಡಿಸಬಯಸುತ್ತೇವೆ.

ವಿದ್ಯುತ್ ಉತ್ಪಾದನೆ

ಇನ್ನು ಸಿಬಾಲ್‌ರವರು ವಿದ್ಯುತ್ ಉತ್ಪಾದನೆಗೆ ಈ ಅಣು ಒಪ್ಪಂದ ಅತೀ ಅವಶ್ಯವೆನ್ನುವಂತೆ ಮಾತಾನಾಡಿದ್ದಾರೆ. ಅಪರೇ

ಪುಟ 13 ಕ್ಕೆ



ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ



ಬೇಕೆಂತಲೇ ಚೇಂಬರಿಗೆ ಕರೆವುದು. ಡಿಕ್ಟೇಷನ್ ಕೊಡುವ ನೆಪದಲ್ಲಿ ತಾಸುಗಟ್ಟಲೆ ಎದುರು ಕೂರಿಸಿಕೊಳ್ಳುವುದು. ಇವಳು ಕೆಲಸ ಮುಗಿಸಿ ತನ್ನ ಪಾಡಿಗೆ ಹೊರಡಲು ಅವಸರಿಸಿದರೆ ರೇಗುವುದು, ಸೀರೆ ಬ್ಲೌಜು, ಮೈಬಣ್ಣದ ಬಗ್ಗೆ ಕಾಮೆಂಟ್ ಮಾಡುವುದು,

ಈ ನೋವು ನಿಲ್ಲುವುದೆಂದು......?

ಸಾಮ್ರಾಜ್ಯಶಾಹಿ ಬ್ರಿಟಿಷ್ ಗುಂಡೇಟಿಗೆ ಬಲಿಯಾಗಿ "ಇಂಕ್ವಿಲಾಬ್ ಜಿಂದಾಬಾದ್" ಘೋಷಣೆಯನ್ನು ಮುಗಿಲಂಗಳಕ್ಕೂ ಬರೆದ ಸಾವಿರಾರು ವೀರ ಚಳುವಳಿಗಾರರು ಸ್ಮತಿಪಟಲದಲ್ಲಿ ಹಸಿರಾಗಿರುವ ಹೊತ್ತಲ್ಲಿ ಗುಲಬರ್ಗಾದಿಂದ ಫೋನು ಟ್ರಿಣ್‌ಗುಟ್ಟಿತು. ಅಮೃತ್‌ಸರ್ ನಗರದ ಜಲಿಯನ್‌ವಾಲಾಬಾಗ್‌ನ "ಬುಲೆಟ್ ಮಾರ್ಕ್" ಗೋಡೆ ದಿಟ್ಟಿಸುತ ಚರಿತ್ರೆಯಾಳದಲ್ಲಿ ಇಳಿದು ಹೋಗಿದ್ದೆ.

ತಲ್ಲಣದ ಅಲೆ

ಸಿಖ್ಖರ ಶ್ರದ್ಧಾಕೇಂದ್ರ ಬಂಗಾರದ ಮಂದಿರ ಸುತ್ತುವಾಗಲೂ. ಥೇಟ್ ಕಲ್ಬುರ್ಗಿಯಂಥ ಭಣ ಭಣ ಬಿಸಿಲು ಮತ್ತು ರಸ್ತೆ ನೆನಪಿಸುವಂಥ ಜಮ್ಮುದತ್ತ ಪಯಣಿಸುವಾಗಲೂ, ಕಲ್ಬುರ್ಗಿಯಲ್ಲಿ ನಡೆದ ಘಟನೆಯ ವಾರ್ತೆ ಬಿತ್ತರಗೊಳ್ಳುತ್ತಲೇ ಇತ್ತು. ಸಹೋದ್ಯೋಗಿ ಉಪನ್ಯಾಸಕನೊಬ್ಬ ಉಪನ್ಯಾಸಕಿಯನ್ನು ಅಶ್ಲೀಲವಾಗಿ ನಿಂದಿಸಿ ಹಲ್ಲೆ ಮಾಡಿದ್ದಾನೆ ಎಂಬ ಸುದ್ದಿ ಮತ್ತೆ ಮತ್ತೆ ಪುಟ್ಟ ಮೊಬೈಲ್‌ನಲ್ಲಿ ತಲ್ಲಣದ ಅಲೆಗಳನ್ನೆಬ್ಬಿಸುತ್ತಲೇ ಇತ್ತು.

ಉರಿಬಿಸಿಲಿಗೆ ಮೈಯೊಡ್ಡಿ ದಿಲ್ಲಿಗೆ ಟ್ರೇನು ಹಿಡಿಯಲು ಹತ್ತಿದ ಟಾಟಾ ಸುಮೋ ಡ್ರೈವರ್, "ಬೆಹೆನ್ ಜೀ ಆಪ್‌ಲೋಗ್ ಬಹುತ್ ಹಿಮ್ಮತ್ ವಾಲೆ ಹೈ" (ಅಕ್ಕಾ ನೀವು ಬಹಳ ಧೈರ್ಯವಂತರು) ನಗುತ ಹೆಮ್ಮೆಯಿಂದ ಹೇಳಿದಾಗ, ಖುಷಿಯೇನೋ ಅನಿಸಿತು. ಆದರೆ ಎಷ್ಟೆಲ್ಲ ಧೈರ್ಯದಿಂದ, ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಬೇಕೆಂದರೂ ಅಡ್ಡಿಪಡಿಸುವ ಪಾಳೇಗಾರಿ ಶಕ್ತಿಗಳು, ಯಾರೆಲ್ಲ ರೂಪದಲ್ಲಿ ಬೆನ್ನಟ್ಟಿ ಕಾಡುತ್ತಿವೆಯಲ್ಲ....

ರಕ್ಷಣೆಯ ಮೌಲ್ಯ ಹೊತ್ತ ಕುಟುಂಬ ಆರ್ಥಿಕ ಸ್ವಾತಂತ್ರ್ಯದ ಭರವಸೆ ತೋರುವ ದುಡಿಮೆಯ ಕ್ಷೇತ್ರ. ಪ್ರಗತಿ ಮೌಲ್ಯದ ಮಾತಾಡುವ ಕೋಟೆಗಳು, ಹೀಗೆ ಎಲ್ಲ ಕಡೆಯ ಸಂದು-ಗೊಂದುಗಳಲ್ಲಿ ನುಸುಳಿ ಅಟ್ಟಹಾಸಗೈವ ಪಾಳೇಗಾರಿಯ ಯಜಮಾನಿಕೆಯಲ್ಲಿ ಮಹಿಳಾಲೋಕ ಖಂಡಿತ ಹೈರಾಣಾಗುತ್ತಿದೆ. ಒಮ್ಮೊಮ್ಮೆ ಹತಾಶೆ ನುಸುಳಿದರೂ ಮತ್ತೆ ಮೈಕೊಡವಿ ಮೇಲೆದ್ದು ಧೈರ್ಯ, ಸ್ಥೈರ್ಯದಿಂದ ಹೆಜ್ಜೆ ಹಾಕಿದೆ. ಆದರೆ ನುಂಗುವ ನೋವಿಗೆ, ಅನುಭವಿಸುವ ಅಪಮಾನಕೆ ಎಣೆಯಿಲ್ಲವೇ...?

ಸೌಂದರ್ಯ 'ದೋಷ'

ಕಳೆದ ವರ್ಷ ಪ್ರಜ್ಞಾ ಕಾನೂನು ಸಲಹಾ ಸಮಿತಿಗೆ ಒಬ್ಬ ಮಧ್ಯವಯಸ್ಕ ಸುಂದರ ಹೆಂಗಸು ಅರ್ಜಿಯೊಂದನ್ನು ಕೊಟ್ಟು ಒಂದೇ ಸಮನೆ ಅಳತೊಡಗಿದಳು. ಘಟನೆ ವಿವರಿಸಲು ಸಾಧ್ಯವಾಗಲೇ ಇಲ್ಲ ಅವಳಿಗೆ. ಅವಳು ಮಾತಾಡಲೆಂದು ಮುಖವೆತ್ತಿದಾಗಲೆಲ್ಲ ಅಳುವುದಕ್ಕೆ ಕಾಡಿಗೆಗಂಗಳಿಂದ ದಳ ದಳ ನೀರು ಹರಿಸುವುದರ ಹೊರತು ಏನೂ ಮಾಡಲೂ ಆಗಲಿಲ್ಲ. ಅರ್ಜಿ ಓದಿ ಮತ್ತು ಬಹಳ ಹೊತ್ತಿನ ತರುವಾಯ ಅವಳ ನೋವು ಅರಿಯಲು ಸಾಧ್ಯವಾಗಿತ್ತು.

ಪ್ರಿಯಾ (ಹೆಸರು ಬದಲಾಯಿಸಲಾಗಿದೆ) ಕೇಂದ್ರ ಸರಕಾರದ ಉದ್ಯೋಗಸ್ಥೆ. ಎರಡು ಪುಟ್ಟ ಮಕ್ಕಳ ತಾಯಿ. ಗಂಡನೂ ನೌಕರಸ್ಥ. ಪ್ರಿಯಾ ಖರೆನೇ ಸುಂದರಿ. ಆದರೆ ದೋಷವಿರುವುದು ಅವಳ ಸೌಂದರ್ಯದಲ್ಲಲ್ಲ. ಬೇಕೆಂದೇ ಕಾಡುವ ಎದುರಿನವರ ವಿಚಾರಗಳಲ್ಲಿ; ಆಲೋಚನೆಗಳಲ್ಲಿ. ಪ್ರಿಯಾ ಕೆಲಸ ಮಾಡುವ ಕಚೇರಿಯ ಅಧಿಕಾರಿಯು ಕಳೆದ ಮೂರು ವರ್ಷಗಳಿಂದ ಕೊಡುವ ಕಿರುಕುಳ, ಮಾನಸಿಕ ಹಿಂಸೆಯಿಂದ ಜರ್ಝರಿತಳಾಗಿದ್ದಾಳೆ. ಬೇಕೆಂತಲೇ ಚೇಂಬರಿಗೆ ಕರೆವುದು. ಡಿಕ್ಟೇಷನ್ ಕೊಡುವ ನೆಪದಲ್ಲಿ ತಾಸುಗಟ್ಟಲೆ ಎದುರು ಕೂರಿಸಿಕೊಳ್ಳುವುದು. ಇವಳು ಕೆಲಸ ಮುಗಿಸಿ ತನ್ನ ಪಾಡಿಗೆ ಹೊರಡಲು ಅವಸರಿಸಿದರೆ ರೇಗುವುದು, ಸೀರೆ ಬ್ಲೌಜು, ಮೈಬಣ್ಣದ ಬಗ್ಗೆ ಕಾಮೆಂಟ್ ಮಾಡುವುದು, ನಡುರಾತ್ರಿಯಲ್ಲಿ ಫೋನಾಯಿಸುವುದು. ಒಂದೇ ಎರಡೇ ನಾನಾ ನಮೂನೆಯ ಹಿಂಸೆ ಅನುಭವಿಸಿ ಸಾಕಾದ ಪ್ರಿಯಾ ಕಡೆಗೊಮ್ಮೆ ಎದುರಿಸಲು ಸಜ್ಜಾದಳು. ಇವಳು ದಾಖಲೆಸಹಿತ ಹೋರಾಟಕ್ಕೆ ನಿಂತಿದ್ದೇ ತಡ, ಆ ಅಧಿಕಾರಿಯೂ ಸೇಡಿನಿಂದ ಇನ್ನಷ್ಟು ವ್ಯಗ್ರನಾಗಿ ಮೆಮೊ ಕೊಡುವುದು, ಆಬ್‌ಸೆಂಟ್ ಹಾಕುವುದು. ಎಲ್ಲರೆದುರೇ ಮಾಡದ ತಪ್ಪಿಗೆ ಬಯ್ಯುವುದು ಶುರುವಿಟ್ಟುಕೊಂಡ. ಎಲ್ಲ ಹಂತದವರೆಗೂ ಹೋರಾಡಿ ಹೈರಾಣಾದ ಪ್ರಿಯಾಗೆ ಫಲಿತಾಂಶ ಮಾತ್ರ ಸೊನ್ನೆಯೇ. ಕೊನೆಗೆ ವಿಮಾ ನೌಕರರ ಸಂಘ ಎಐಐಇಎ ಸಂಗಾತಿಗಳು ಮತ್ತು ಪ್ರಜ್ಞಾ ಸಂಯುಕ್ತವಾಗಿ ಕ್ರಮವಹಿಸಿದವು. ತಲೆತಿರುಕ ಅಧಿಕಾರಿಯು ಸರಿಯಾಗದಿದ್ದರೆ ಚಳುವಳಿ ಎದುರಿಸಬೇಕಾಗುತ್ತದೆ ಎಂಬ ಚಾಟಿಯೂ ಬೀಸಬೇಕಾಯ್ತು. ಅದೊಂದು ದಿನ ಪ್ರಿಯಾ ಮನೆಯಲ್ಲಿ ಚಹಾ ಕುಡಿದು ಹೊರಬರುವಾಗ ಅವಳು ನಿರುಮ್ಮಳಾಗಿ, ನಿಶ್ಚಿಂತೆ ಭಾವದಿಂದ ಕೈಬೀಸುವಾಗ ಸಂಗಾತಿಗಳ ಮುಖದಲ್ಲಿ ನೆಮ್ಮದಿಯ ಮುಗುಳ್ನಗೆಯಿತ್ತು.

★

ಮಾತಿನ ಈಟಿ

......ನಡುರಾತ್ರಿ ದಾಟಿ ನಸುಕು ನೋಡದ ಹೊತ್ತಲ್ಲಿ ಕಲ್ಬುರ್ಗಿ ಬಂದಿತು. ಮನೆ ಮುಟ್ಟಿ ನಿದ್ದೆಯ ಚಾದರು ಹೊದ್ದುಕೊಳ್ಳುವಾಗ ಅದು ನಸುಕಿನ ಜಾವವೇ. ಪತ್ರಿಕೆ ತುಂಬ ಉಪನ್ಯಾಸಕಿ ಸುದ್ದಿಯಿತ್ತು.

ಉನ್ನತ ವ್ಯಾಸಂಗ ಮುಗಿಸಿ, ಡಾಕ್ಟರೇಟ್ ಪದವಿಧರಿಸಿ, ಕೈತುಂಬ ಸಂಬಳ ಎಣಿಸಿ ಉದ್ದುದ್ದ ಭಾಷಣ, ಉಪನ್ಯಾಸ, ಉಪದೇಶ ಮಾಡಿ, ಸಮಾಜಕ್ಕೆಲ್ಲ ಬಲು ಬುದ್ಧಿವಂತರೆಂಬ ಪೋಜು ಕೊಟ್ಟು, ಒಳಗೆಲ್ಲ ಅತ್ತಿಯ ಹಣ್ಣೊಳಗಿನ ಹುಳದ ಸಂಸ್ಕೃತಿ ಪಸರಿಸುವುದು ಕ್ರೌರ್ಯ ಮತ್ತು ಅಪಾಯಕಾರಿಯಲ್ಲದೇ ಮತ್ತೇನು? ಮೆದುಳಿಗೂ ನಾಲಿಗೆಗೂ, ನಡೆಗೂ, ನುಡಿಗೂ ಸಂಬಂಧವಿಲ್ಲದಂತೆ ವರ್ತಿಸುವುದು ಎಂದರೇನು? ಅಸಂಖ್ಯಾತ ಅನಕ್ಷರಸ್ಥರು, ಬಡವರು ಇರುವ ಈ ದೇಶದಲ್ಲಿ ಈ ಅಕ್ಷರಸ್ಥರು ಆರ್ಥಿಕ ಅನುಕೂಲಸ್ಥರು ಸಮತೆಯ ಆಶಯಗಳಿಗೆ ಆಧಾರಸ್ತಂಭ ವಾಗುವ ಬದಲಿಗೆ ಇವರೇ ಸಂಕಟ ಸೃಷ್ಟಿಸುವುದೆಂದರೆ ದುರಂತವಲ್ಲವೇ? ಕನಿಷ್ಠ ಸಾಮಾಜಿಕ ಪ್ರಜ್ಞೆಯಿಲ್ಲದ ಸರಕಾರಿ ಕಾಲೇಜಿನ ಪ್ರಾಚಾರ್ಯ ಅವರಾದಿ ಉಪನ್ಯಾಸಕ ಅರುಣಕುಮಾರ್ ಇಬ್ಬರೂ ಜೊತೆಯಾಗಿ 17.09.07ರಂದು ಉಪನ್ಯಾಸಕ ಡಾ.ಶಿವಗಂಗಾ ರುಮ್ಮಾ ಮೇಲೆ ಕಾಲು ಕೆದರಿ ಜಗಳ ತೆಗೆದಿದ್ದಾರೆ. ಕಾರಣವೇನು?

ಡಾ.ರುಮ್ಮಾ ಯುಜಿಸಿಯಿಂದ ಪ್ರಾಜೆಕ್ಟ್ ವರ್ಕ್ ತೆಗೆದುಕೊಂಡಿದ್ದಾರೆ. ಅಂತೆಯೇ ಇನ್ನೊಬ್ಬ ಪುರುಷ ಸಹೋದ್ಯೋಗಿಯೂ. ಕಿರುಕುಳ ಹಿಂಸೆ ಸಹಿಸುವ ಜಾಯಮಾನವಿಲ್ಲದ ಉಪನ್ಯಾಸಕಿಯು ಪ್ರಾಚಾರ್ಯ ಅವರಾದಿ ಕೇಳುವ ಪ್ರಶ್ನೆಗಳಿಗೆ ಸರಿಯಾಗಿಯೇ ಪ್ರತಿಕ್ರಿಯಿಸಿದ್ದಾರೆ. "ಸೋಮುವಾರದ ಒಳಗೆ ಪಾಜೆಕ್ಟ್ ವರ್ಕ್ ಮುಗಿಸಬೇಕು' ಎಂದು ಮತ್ತೆ ಮತ್ತೆ ತಾಕೀತು ಮಾಡಿದ ಪ್ರಾಂಶುಪಾಲರು ಹಿರೇತನದಿಂದ ವರ್ತಿಸಿದ್ದರೆ ಜವಾಬ್ದಾರಿ ನಿಭಾಯಿಸಿದ್ದರೆ ಎಲ್ಲವೂ ಸರಿಯಾಗುತ್ತಿತ್ತು. ಆದರೆ ಅಲ್ಲಿಯೇ ಇರುವ ಡಾ.ಅರುಣಕುಮಾರ್‌ಗೆ ಛೂಬಿಟ್ಟಿದ್ದಾರೆ. ಇಡೀ ಕಾಲೇಜಿನ ಸಿಬ್ಬಂದಿಗಳಿಗೆ ಒಂದಿಲ್ಲ ಒಂದು ನಮೂನೆ ಹಿಂಸಿಸಿದ್ದ ಅರುಣಕುಮಾರ್ ಹೆಂಗಸಾದ ಡಾ.ರುಮ್ಮಾ ಇಷ್ಟೆಲ್ಲಾ ಸ್ವಾಭಿಮಾನ ವ್ಯಕ್ತಿಸುವುದು ಸಹಿಸಲಿಲ್ಲ. ರೋಷಾವೇಷದಿಂದ ಬಾಯಿಗೆ ಬಂದಂತೆ ಅಶ್ಲೀಲವಾಗಿ, ಪ್ರಜ್ಞಾವಂತರು ತಲೆ ತಗ್ಗಿಸುವಂತೆ ಸೊಂಟದ ಕೆಳಗಿನ ಭಾಷೆಯಿಂದ ಬಯ್ಯುತ ಧಾಳಿ ಮಾಡಿದನು. ಸೀರೆ ಕಿತ್ತುವ ಮಾತಾಡಿದ ಮೇಲೆ, ಸಹನೆಯ ಮೇರೆ ದಾಟಿದ ಡಾ.ರುಮ್ಮಾ ಹೊರಬಂದು ಬಾಗಿಲಿಗೆ ಬೀಗ ಜಡಿದು ಪ್ರತಿಭಟಿಸಿದ್ದಾಳೆ. ಈ ಅನಾಚಾರ ನೋಡಿ ತಲ್ಲಣಿಸಿದ ಸಿಬ್ಬಂದಿಯೆಲ್ಲ ಒಟ್ಟಾಗಿ ಪೊಲೀಸ್‌ಗೆ ಫೋನಾಯಿಸಿ, ಕರೆಸಿ ಪ್ರಾಂಶುಪಾಲ ಮತ್ತು ಅರಣಕುಮಾರರ ಮೇಲೆ ಕೇಸು ಜಡೆದಿದ್ದಾರೆ. ಈವರೆಗೆ ಸುಮ್ಮನಿದ್ದ ನೊಂದ ಮಹಿಳಾ ಸಿಬ್ಬಂದಿ ಒಕ್ಕಟ್ಟಿನಿಂದ ಡಾ.ರುಮ್ಮಾ ಬೆನ್ನಿಗೆ ನಿಂತಿದ್ದಾರೆ. ಅಂತೆಯೇ ಪುರುಷ ಸಿಬ್ಬಂದಿಯೂ. ಪ್ರಕರಣ ನೋಡನೋಡುತ್ತಲೇ ಬೆಳೆದು ಬೀದಿಗೆ ಬಂದು, ಮಾಧ್ಯಮಗಳು, ಜನ ಜಮಾವಣೆ ಆಗಿ ಕಡೆಗೆ ಪ್ರಾಂಶುಪಾಲ ಮತ್ತು ಅರುಣಕುಮಾರ ಇಬ್ಬರೂ ಅರೆಸ್ಟ್ ಆಗಿ ಅಮಾನತ್ತಾಗಿ ಹೋಗಿದ್ದಾರೆ. ಜನವಾದಿ, ಎಸ್‌ಎಫ್‌ಐ ಮತ್ತಿತರ ಪ್ರಗತಿಪರ ಸಂಘಟನೆಗಳು-ಮಹಿಳೆಯೊಂದಿಗೆ ಅಸಭ್ಯವಾಗಿ ನಡಕೊಂಡ ಇಬ್ಬರ ಶಿಕ್ಷೆಗೆ ಒತ್ತಾಯಿಸಿವೆ. ಮಹಿಳೆಯರು ಕೆಲಸ ಮಾಡುವ ಸ್ಥಳದಲ್ಲಿ "ಲೈಂಗಿಕ ದೌರ್ಜನ್ಯ ತಡೆ ಸಮಿತಿ"ಗಳನ್ನು ಮಾಡಬೇಕೆಂಬ ಸುಪ್ರಿಂ ಕೋರ್ಟಿನ ಮಾರ್ಗದರ್ಶನ ಜಾರಿ ಮಾಡಲು ಆಗ್ರಹಿಸಿವೆ. ಈ ದೌರ್ಜನ್ಯದ ವಿರುದ್ಧ ಸೆಟೆದು ನಿಂತ ಕಾಲೇಜಿನ ಸಿಬ್ಬಂದಿಯು ಅಭಿನಂದನೆಗೆ ಅರ್ಹರು. ಅರುಣಕುಮಾರನ ಅಸಭ್ಯ ಅಶ್ಲೀಲ ಧಾಳಿಗೆ ಅಳುಕು ಮೂಡಿ ಮೂಲೆ ಹಿಡಿಯದೆ ಸ್ವಾಭಿಮಾನದಿಂದ ಎದುರಿಸಿದ ಡಾ.ರುಮ್ಮಾಳ ಅಸ್ಮಿತತೆಯ ಪ್ರಜ್ಞೆ ಮೆಚ್ಚಲೇಬೇಕು. ಅನ್ಯಾಯದ ವಿರುದ್ಧ ಸೆಟೆದು ನಿಲ್ಲುವಂಥ ನೈತಿಕ ಬಲ ಸಮಷ್ಠಿ ಶಕ್ತಿಯಾಗಲೇಬೇಕಲ್ಲವೇ?

ಅಶ್ಲೀಲವಾಗಿ, ಪ್ರಜ್ಞಾವಂತರು ತಲೆ ತಗ್ಗಿಸುವಂತೆ ಸೊಂಟದ ಕೆಳಗಿನ ಭಾಷೆಯಿಂದ ಬಯ್ಯುತ ಧಾಳಿ ಮಾಡಿದನು. ಸೀರೆ ಕಿತ್ತುವ ಮಾತಾಡಿದ ಮೇಲೆ, ಸಹನೆಯ ಮೇರೆ ದಾಟಿದ ಡಾ.ರುಮ್ಮಾ ಹೊರಬಂದು ಬಾಗಿಲಿಗೆ ಬೀಗ ಜಡಿದು ಪ್ರತಿಭಟಿಸಿದ್ದಾಳೆ.

ನಮಗೆ ಗೊತ್ತಿದೆ. ಈ ಅರುಣಕುಮಾರ ಮತ್ತು ಅವರಾದಿ ನಾಳೆಯ ದಿನ ಕೋರ್ಟಿನ ಕಟಕಟೆಯಲ್ಲಿ ನಿಂತು, "ತಾವು ಏನೇನು ಬಯ್ಯಲಿಲ್ಲ ತುಂಬ ಸಭ್ಯಸ್ಥರು" ಎಂಬ ಸುಳ್ಳು ಹೇಳುತ್ತಾರೆ. ಬಜಾವಾಗಲು ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸುತ್ತಾರೆ. ಈ ಸುಳ್ಳುಗಳು, ಈ ಮುಖವಾಡಗಳು ಸಭ್ಯತೆಯ ಮುಖವಾಡ, ಪರದೆ ಹೊದ್ದು ಸಾವಿರಾರು ವರ್ಷಗಳಿಂದ ದುಷ್ಟ, ಅಮಾನವೀಯ ಛಾಪು ಒತ್ತುತ್ತಲೇ ಬಂದಿವೆ. ಆದರೆ ಬದುಕುವ ಹಕ್ಕಿನ ಸ್ವಾಭಿಮಾನದ ಹೋರಾಟವೂ ವೀರ ಪರಂಪರೆಯನ್ನು ದಾಖಲಿಸುತ್ತಲೇ ಬಂದಿದೆ.

ಆಂಧ್ರ ಭೂಮಿ ಹೋರಾಟ: ಬಡವರ ಗುಡಿಸಲು ಕಿತ್ತೆಸೆಯಲು ಕಾಂಗ್ರೆಸ್ ಸರ್ಕಾರದ ಆದೇಶ

ಆಂಧ್ರ ಪ್ರದೇಶದಲ್ಲಿ ಸಿಪಿಐ(ಎಂ), ಸಿಪಿಐ ಮುಂತಾದ ಎಡಪಕ್ಷಗಳ ನೇತೃತ್ವದಲ್ಲಿ ನಡೆಯುತ್ತಿರುವ ಭೂ ಆಕ್ರಮಣ ಹೋರಾಟ ಹೊಸ ಘಟ್ಟ ಪ್ರವೇಶಿಸಿದೆ.

ನಗರ ಮತ್ತು ಪಟ್ಟಣ ಪ್ರದೇಶಗಳ ಬಡವರ ತಲೆಯ ಮೇಲೊಂದು ಸೂರಿಲ್ಲದೆ ನರಕ ಯಾತನೆ ಅನುಭವಿಸುತ್ತಿರುವಾಗ ರಾಜ್ಯದ ಲಕ್ಷಾಂತರ ಎಕರೆ ಭೂಮಿ ಬಂಡವಾಳಿಗರ, ದೊಡ್ಡ ಕಂಪನಿಗಳ ಪಾಲಗುತ್ತಲಿದೆ. ಇಲ್ಲವೇ ಪ್ರಭಾವಿ ಶ್ರೀಮಂತರ ಅಧಿಕಾರಸ್ಥ ರಾಜಕಾರಣಿಗಳ ಅತಿಕ್ರಮಣಕ್ಕೆ, ಕಬಳಿಕೆಗೆ ತುತ್ತಾಗಿದೆ.

ಇಂತಹ ಅತಿಕ್ರಮಣಗಳನ್ನು ಪತ್ತೆಹಚ್ಚಿ ಬಡವರು ಅದನ್ನು ವಶಕ್ಕೆ ತೆಗೆದುಕೊಳ್ಳುತ್ತಿರುವುದು, ಸರ್ಕಾರಿ ಭೂಮಿ ಲಭ್ಯವಿರುವೆಡೆಗಳಲ್ಲಿ ಅಲ್ಲಿ ಬಡವರು ಅದನ್ನು ವಶಕ್ಕೆ ತೆಗೆದುಕೊಳ್ಳುವುದು. ಈ ಚಳುವಳಿ ಇಂದು ಆಂಧ್ರದಾದ್ಯಂತ ತೀವ್ರವಾಗಿ ನಡೆಯುತ್ತಿದೆ.

ಬಡವರ ವಶಕ್ಕೆ 2 ಲಕ್ಷ ಎಕರೆ ಭೂಮಿ

ಈ ರೀತಿಯಾಗಿ ಆಂಧ್ರದಲ್ಲಿ ಇಲ್ಲಿಯವರೆಗೆ 2 ಲಕ್ಷ ಎಕರೆ ಭೂಮಿಯನ್ನು ಬಡವರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಮುಂದಿನ ಹಂತದ ಹೋರಾಟದಲ್ಲಿ ಎಡಪಕ್ಷಗಳ ರಾಷ್ಟ್ರೀಯ ನಾಯಕರು ಈ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದು ಅದಕ್ಕಾಗಿ ಸಿದ್ಧತೆಗಳು ನಡೆದಿವೆ.

ರಾಜ್ಯದ ಕಾಂಗ್ರೆಸ್ ಸರ್ಕಾರವು ಸಿದ್ಧತೆ ನಡೆಸಿದೆ. ಯಾಕಾಗಿ? ಬಡವರಿಗೆ ಭೂಮಿ ಹಂಚುವುದಕ್ಕಾಗಿಯೇ? ಅಲ್ಲ. ಬಡವರು ಹಾಕಿಕೊಂಡಿರುವ ಗುಡಿಸಲುಗಳನ್ನು ಕಿತ್ತು ಹಾಕಿ ಅವರನ್ನು ಅಲ್ಲಿಂದ ಓಡಿಸುವುದಕ್ಕಾಗಿ. ಹೀಗೆ ಮಾಡಿ ಭೂಮಿಗೆ ಬೇಲಿ ಹಾಕುವಂತೆ ಅಧಿಕಾರಿಗಳಿಗೆ ಸರ್ಕಾರ ಆದೇಶ ನೀಡಿದೆ.

ಅರ್ಹ ಕುಟುಂಬಗಳಿಗೆ ವಿಳಂಬವಿಲ್ಲದೆ ಶೀಘ್ರವಾಗಿ ಭೂಮಿ ವಿತರಿಸುವ ಅಧಿಕಾರವುಳ್ಳ ಸ್ವತಂತ್ರ ಆಯೋಗವನ್ನು ರಚಿಸಬೇಕೆಂಬ ಚಳುವಳಿಯ ಬೇಡಿಕೆಯನ್ನು ಸುತಾರಾಂ ಒಪ್ಪಲು ಸಿದ್ಧವಿಲ್ಲದ ಸರ್ಕಾರ ಭೂಮಿ ಹಂಚಿಕೆ ಕುರಿತು ಯಾವುದೇ ನಿರ್ದಿಷ್ಟ ತೀರ್ಮಾನ ಕೈಗೊಳ್ಳದೆ ವಿಳಂಬ ನೀತಿಯನ್ನೇ ಮುಂದುವರಿಸುತ್ತಾ ಹೋಗುತ್ತಿದೆ.

ಅಕ್ರಮವಾಗಿ ಭೂಮಿ ಕಬಳಿಸುವವರಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲಿಗರೂ, ಮುಂಡರೇ ದೊಡ್ಡ ಪ್ರಮಾಣದಲ್ಲಿದ್ದಾರೆಂದು ಚಳುವಳಿ ಬೆಳೆದಂತೆ ಬಯಲಾಗುತ್ತಿದೆ. ○

'ಮಾತು ಕೇಳದ ಸೊಸೆಯು ತಾನೇಕೆ?'

ಹರಿಯ ನೆನೆಯದವರ ಜನ್ಮವೇಕೆ?
ವೇದವನ್ನೋದದ ವಿಪ್ರನವನೇಕೆ?
ಮಾತು ಕೇಳದ ಸೊಸೆಯು ತಾನೇಕೆ.........?"

ಆಹಾ ಸೊಗಸಾಗಿದೆಯಲ್ಲಾ ಹಾಡು. ಎಲ್ಲಿ ಹಾಡಿದ್ದು ಅಂತೀರಾ? ಬೆಂಗಳೂರಿನ ಶಿಕ್ಷಕರ ಸದನದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ. ಸಮಾರಂಭ ಯಾವುದು ಅಂತೀರಾ? ನೀವು ಊಹಿಸಿ ನೋಡಿ. ಇದೇನು ಯಾವುದಾದರೂ ಪುರೋಹಿತರ ಸಮ್ಮೇಳನವೇ? ಸಂಘಪರಿವಾರಕ್ಕೆ ಸೇರಿದ ಸಾಧುಸಂತರ ಸಮ್ಮೇಳನವೇ? ಉಹುಂ ಅಲ್ಲ. ನಮ್ಮ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಭ್ರೂಣಹತ್ಯೆ ಕುರಿತು ಸಂಘಟಿಸಿದ್ದ ಕಾರ್ಯಕ್ರಮದಲ್ಲಿ ಕೇಳಿಬಂದ ಹಾಡು.

ಕೆ.ಎಸ್.ಲಕ್ಷ್ಮಿ

ಈ ಹಾಡೇನು ಇನ್ನು ಮುಂದಿನದ್ದು ಕೇಳಿ. ಹೆಣ್ಣು ಭ್ರೂಣ ಹತ್ಯೆಯೇನೋ ನಮ್ಮ ಸಮಾಜದಲ್ಲಿ ಅವ್ಯಾಹತವಾಗಿ ನಡೆದಿದೆ. ಅದಕ್ಕೆ ಯಾರು ಹೊಣೆ. ಹೆಣ್ಣೇ ಹೊಣೆ ಅನ್ನುತ್ತಿದೆ ಮಹಿಳಾ ಆಯೋಗ. ಗಂಡು ಮಗು ಹುಟ್ಟಿದರೆ ಮಾತ್ರ ಮೋಕ್ಷ ಎನ್ನುವ ಪುರುಷ ಪ್ರಧಾನಮೌಲ್ಯ ಅದಕ್ಕೆ ಕಾರಣವಲ್ಲ. ಆಸ್ತಿಹಕ್ಕು, ದುಡಿಮೆಯ ಹಕ್ಕು, ಶಿಕ್ಷಣದ ಹಕ್ಕು, ದೌರ್ಜನ್ಯ ನಡೆಸುವ ಹಕ್ಕು ಎಲ್ಲವನ್ನು ಗಂಡಿಗೆ ನೀಡಿರುವ ನಮ್ಮ ಸಾಮಾಜಿಕ ವ್ಯವಸ್ಥೆಯೂ ಇದಕ್ಕೆ ಕಾರಣವಲ್ಲ. ಹೆಣ್ಣೇ ಇದಕ್ಕೆ ಕಾರಣ. ಹೆಣ್ಣೇ ಇದಕ್ಕೆ ಹೊಣೆ. ಹೀಗೆಂದು ಸಾರಿತು ಆ ಸಮಾರಂಭ. ಕೆಲವಷ್ಟೇ ವಿರೋಧದ ದನಿಗಳು.

ಅದು 29.08.2007 "ಸ್ತ್ರೀ ಭ್ರೂಣ ಹತ್ಯೆ" ತಡೆ ಕುರಿತ ರಾಜ್ಯ ಮಹಿಳಾ ಆಯೋಗ ಸಂಘಟಿಸಿದ ಮಹಿಳೆಯರ ಸಮಾವೇಶ... ಸರಿ ಭಾಗವಹಿಸಲು ಹೋದ ನಮಗೆ ಸಭಾಂಗಣದ ತುಂಬೆಲ್ಲಾ ರಾರಾಜಿಸಿದ್ದು "ಸ್ತ್ರೀ ಭ್ರೂಣಹತ್ಯೆ ಮುಂದುವರೆದರೆ ಮುಂದೆ ವರನಿಗೆ ವಧುವನ್ನು ಎಲ್ಲಿಂದ ತರಬೇಕು". ಎಂಬ ಘೋಷಣೆಯುಳ್ಳ ರಾಜ್ಯ ಮಹಿಳಾ ಆಯೋಗ ಹಾಗೂ ಅಖಿಲ ಭಾರತೀಯ ತೆರಾಪಂಥ ಮಹಿಳಾ ಮಂಡಳಿಯ ಸಂಯುಕ್ತ ಆಶ್ರಯದ ಬ್ಯಾನರ್‌ಗಳು. "ಸ್ತ್ರೀ ಭ್ರೂಣ ಹತ್ಯೆ ತಡೆ ಕುರಿತು ಎಲ್ಲಾ ಧರ್ಮ ಗುರುಗಳೊಂದಿಗೆ ದುಂಡುಮೇಜಿನ ಸಭೆ" ಅಂತ್ಹೇಳಿ ಕಾರ್ಯಕ್ರಮ ಆಯೋಜಿಸಿ ಅಲ್ಲಿ ಬಂದವರು ಜೈನ ಧರ್ಮ ಗುರುಗಳು, ಸಿಖ್ ಧರ್ಮಗಳು ಬಿಟ್ಟು ಬೇರ್‍ಯಾವ ಧರ್ಮಧವರು ಭಾಗವಹಿಸದೇ ಇರುವುದು ಹಲವು ಸಂಶಯಗಳಿಗೆ ಎಡೆ ಮಾಡಿಕೊಟ್ಟಿತು.



ಉಳಿದಂತೆ ಇಪ್ಪತ್ತು 'ಸಂಪನ್ಮೂಲ ವ್ಯಕ್ತಿ'ಗಳು ವಿಷಯ ಮಂಡಿಸಲು ಆಗಮಿಸಿದ್ದರು. ಅವರಲ್ಲಿ ಕೆಲವರು ಸ್ತ್ರೀರೋಗತಜ್ಞರು. ಮನಃಶಾಸ್ತ್ರಜ್ಞರು, ಪತ್ರಕರ್ತರು, ಮಹಿಳಾ ಸಂಘಟನೆಗಳನ್ನು ಪ್ರತಿನಿಧಿಸಿದವರಾಗಿದ್ದರು.

ಸಭಾಂಗಣದ ಮುಖ್ಯ ವೇದಿಕೆಯಲ್ಲಿ ರಾಜ್ಯಮಹಿಳಾ ಆಯೋಗದ ಅಧ್ಯಕ್ಷೆ ಪ್ರಮಿಳಾ ನೇಸರ್ಗಿ, ಆರೋಗ್ಯ ಸಚಿವ ಆರ್ ಅಶೋಕ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವ ಹೆಚ್.ಕೆ.ಕುಮಾರಸ್ವಾಮಿ, ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಸ್.ಆರ್.ನಾಯಕ್, ಜೈನಧರ್ಮದ ಗುರುಗಳು ಮತ್ತು ಸಿಖ್ ಧರ್ಮಗುರುಗಳು ಅವರ ಕಾಲುಬುಡದಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಕೂರಿಸಲಾಗಿತ್ತು.

'ಜರತಾರಿ' ಸೀರೆಯ ಸಂಭ್ರಮ

ಇನ್ನು ಸಭಿಕರು 700ರಿಂದ 800 ಮಹಿಳೆಯರು ನಗರದ ಸ್ವಸಹಾಯ ಸಂಘಗಳಿಂದ ಬಂದಿದ್ದರು. ಆರಂಭದಲ್ಲಿ ಪ್ರಾಸ್ತಾವಿಕ ಮಾತನಾಡಿದ ಪ್ರಮಿಳಾ ನೇಸರ್ಗಿಗೆ ಸಂಭ್ರಮವೋ ಸಂಭ್ರಮ. ವೇದಿಕೆಯೆಲ್ಲಾ ಬಿಜೆಪಿಮಯ "ನಾವೀದಿನ ಎಲ್ಲಾ ರಾಜಕೀಯ ಪಕ್ಷಗಳವರು, ಎಲ್ಲಾ ಧರ್ಮದವರೂ ಸೇರಿದ್ದೇವೆ. ಎಲ್ಲರೂ ಸೇರಿ ಸಮಸ್ಯೆಗೆ ಪರಿಹಾರ ಹುಡುಕೋಣ". ಎಂದು ಹೇಳಿ ವೇದಿಕೆಯನ್ನು ಉಳಿದವರಿಗೆ ಬಿಟ್ಟುಕೊಟ್ಟರು.

ಹೆಣ್ಣು ಮನಸ್ಸು ಮಾಡಬೇಕು.. ಗಂಡು?

ಆರಂಭದಲ್ಲಿ ಮಾತನಾಡಿದ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಸ್.ನಾಯಕ್ "ಸ್ತ್ರೀ ಭ್ರೂಣಹತ್ಯೆ ತಡೆಯಲು ಹೆಣ್ಣುಮಕ್ಕಳು ಮನಸ್ಸು ಮಾಡಬೇಕು. ಹೆಣ್ಣುಮಕ್ಕಳ ಮನಸ್ಥಿತಿಯೇ ಅರ್ಥವಾಗೋಲ್ಲ. ಯಾಕೆ ಸ್ತ್ರೀ ಭ್ರೂಣಹತ್ಯೆ ಮಾಡಿಸ್ತೀರಿ. ಹೆಣ್ಣಿನ ದೊಡ್ಡ ಶತ್ರು ಹೆಣ್ಣೇ" ಎಂದು ಹೇಳಿ ಮಾತು ಮುಗಿಸಿದರು. ತದನಂತರ ಮಾತನಾಡಿದ ಜೈನ ಗುರುಗಳ ದಾಟಿಯೂ ಇದೇ ಆಗಿತ್ತು. ನಂತರ ಮಾತನಾಡಿದ ಆರ್.ಅಶೋಕ್ ಅಂಕಿಸಂಖ್ಯಾ ಶಾಸ್ತ್ರಜ್ಞರ ತರಹ ರಾಜ್ಯದ ಲಿಂಗಾನುಪಾತದ ಅಂಕಿ ಸಂಖ್ಯೆ ಮಂಡಿಸಿದರಾದರೂ ಅವರ ಧ್ವನಿಯಲ್ಲಿ ತುಡಿತವಾಗಲಿ, ದೃಢತೆಯಾಗಲೀ ಇರಲಿಲ್ಲ. ಮಹಿಳಾ ಆಯೋಗ ಮಹಿಳೆಯರಿಗೆ ಬೋಧಿಸಲು ಹೊರಟ ದೀಕ್ಷಾವಿಧಿಯನ್ನು ಅಭಿನಂದಿಸಿ ರಾಜ್ಯದ ಎಲ್ಲಾ ಜನತೆಗೆ ದೀಕ್ಷೆ ನೀಡುವಂತೆ ಕರೆ ನೀಡಿದರು. ಇನ್ನೂ ಹೆಚ್.ಕೆ.ಕುಮಾರಸ್ವಾಮಿ, ಪ್ರಮಿಳಾ ನೇಸರ್ಗಿಯವರ ಈ ಪ್ರಯತ್ನವನ್ನು ಅಭಿನಂದಿಸಿದ್ದೇ ಆಯ್ತು. ಇಡೀ ಕಾರ್ಯಕ್ರಮದ ಶೋ ನೋಡಿದ್ರೆ... ಮುಂದೆ ಅಕ್ಟೋಬರ್ 3ಕ್ಕೆ ಬಿಜೆಪಿಗೆ ಅಧಿಕಾರ ಹಸ್ತಾಂತರವಾದರೆ, ತನಗೊಂದು ಖಾತೆಗಾಗಿ ಪೂರ್ವಭಾವಿ ಅರ್ಜಿ ಸಲ್ಲಿಸಿದಂತಿತ್ತು. ಯಾಕೆಂದ್ರೆ ಆ ವೇದಿಕೆಯಲ್ಲಿ ಪುಂಕಾನುಪುಂಕವಾಗಿ ಮಹಿಳಾ ವಿರೋಧಿ ವಿಚಾರಗಳೇ ಹರಿದು ಬರುತ್ತಿದ್ದರೂ ನೇಸರ್ಗಿಯವರ ಮುಖದಲ್ಲಿ ಯಾವ ಪ್ರತಿಕ್ರಿಯೆಯೂ ಕಾಣಲಿಲ್ಲ. ಜರತಾರಿ ಸೀರೆಯಲ್ಲಿ ಅವರ ಸಂಭ್ರಮಕ್ಕೆ ಎಲ್ಲೆ ಇರಲಿಲ್ಲ.

ಸರಿ, ನಂತರ ಅಲ್ಲಿ ನೆರೆದಿದ್ದ ಮಹಿಳೆಯರಿಗೆ ದೀಕ್ಷಾ ಪತ್ರ ವಿತರಿಸಿ ಸಹಿ ಮಾಡಲು ಕೋರಿದರು. ದೀರ್ಘಪತ್ರದ ವಿವರ.... ಮಹಿಳೆ ಎರಡು ರೀತಿಯಲ್ಲಿ ಅಪರಾಧವನ್ನು ಮಾಡುತ್ತಿದ್ದಾಳೆ. ಒಂದು ಮಹಿಳೆಯು ತನ್ನ ಹೆಣ್ಣಿನ ಜಾತಿಯನ್ನೇ ನಾಶ ಮಾಡುತ್ತಿದ್ದಾಳೆ. ಎರಡನೆಯದು ತನ್ನ ಮಮತೆಯ ಕತ್ತನ್ನು ಹಿಸುಕುತ್ತಿದ್ದಾಳೆ. ಇನ್ನು ಮುಂದೆ ಭ್ರೂಣ ಹತ್ಯೆಯಂತಹ ಕೀಳು ಕಾರ್ಯ ಮಾಡುವುದಿಲ್ಲ, ಮಾಡಿಸಿಕೊಳ್ಳುವುದಿಲ್ಲ" ಎಂಬ ಪ್ರತಿಜ್ಞೆಗೆ ಸಹಿ ಹಾಕಬೇಕಿತ್ತು. ಈ ದೀಕ್ಷಾಪತ್ರಗಳು ನಮ್ಮ ಕೈಗೆ ಬಂದೊಡನೆ, ಒಂದೆಡೆ ಸಂಪನ್ಮೂಲ ವ್ಯಕ್ತಿಯಾಗಿದ್ದ 'ಜನವಾದಿ' ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್.ವಿಮಲಾ ಹಾಗೂ ನಾವುಗಳು ಎದ್ದು ನಿಂತು ಈ ಕೂಡಲೆ 'ದೀಕ್ಷಾಪತ್ರ ಹಿಂಪಡೆಯಬೇಕು' ಎಂದು ಮಹಿಳೆ ಸ್ತ್ರೀ ಭ್ರೂಣಹತ್ಯೆ ಕುರಿತ ತಪ್ಪು ತಿಳುವಳಿಕೆಯನ್ನು ಮಹಿಳಾ ಆಯೋಗ ಹೇಗೆ ಬಿತ್ತರಿಸಿದೆ ಎಂದು ಒಮ್ಮೆಲೆ ಪ್ರತಿಭಟಿಸಿದೆವು. ಮಾಧ್ಯಮಗಳೆಲ್ಲ ಗಮನ ಕೇಂದ್ರೀಕರಿಸಿದ್ದನ್ನು ಗಮನಿಸಿ ತಬ್ಬಿಬ್ಬಾದ ಪ್ರಮಿಳಾ ನೇಸರ್ಗಿ ಎದ್ದುಬಂದು ಏನಾದರೂ ತಪ್ಪಿದರೆ, ತಿದ್ದುಪಡಿ ಮಾಡೋಣ. ದೀಕ್ಷಾ ಪತ್ರವನ್ನು ಹಿಂದಕ್ಕೆ ಪಡೆಯುತ್ತೇವೆ ಎಂದು ಘೋಷಿಸಿದರು. ಮಧ್ಯಪ್ರವೇಶದಿಂದಾಗಿ ಪುನರ್‌ರೂಪಿತ ದೀಕ್ಷಾಪತ್ರ ವಿತರಿಸಲಾಯಿತು. ಅಲ್ಲಿ ನೆರೆದಿದ್ದ ಶೇ.90 ಮಹಿಳೆಯರಿಗೆ ನಾಯಕರವರು ಮಾತನಾಡಿದ ಆಂಗ್ಲಭಾಷಾ ಭಾಷಣ ಅರ್ಥವಾಗಿರಲಿಲ್ಲ ಮತ್ತು ದೀಕ್ಷಾವಿಧಿಯನ್ನು ಗ್ರಹಿಸುವ ಶಕ್ತಿಯೂ ಇರಲಿಲ್ಲ. ಪ್ರತಿಭಟನೆಯಾದಾಗ ದೀಕ್ಷಾ ಪತ್ರ ಸುದ್ದಿಯಾಗಿ ಮಹಿಳೆಯರ ನಡುವೆ ಚರ್ಚೆಯಾಗಿ ಆಯೋಗದ ವಿರುದ್ಧ ಗುಸುಗುಸು ಮಾತನಾಡಲಾರಂಭಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರವಾದರೂ ಅರ್ಥಪೂರ್ಣ ಚರ್ಚೆಯಾಗಬಹುದೆಂದು ನಿರೀಕ್ಷಿಸಿದವರಿಗೆ ಬರಸಿಡಿಲೇ ಬಡಿದಂತಾಯ್ತು. ಒಬ್ಬ ಸ್ತ್ರೀರೋಗತಜ್ಞೆ ಹೇಳ್ತಾರೆ. ಭ್ರೂಣವನ್ನು ಚಿಕ್ಕ ಚಿಕ್ಕ ತುಂಡು ಮಾಡಿ ಹೊರ ತೆಗೆಯಬೇಕಾಗುತ್ತೆ. ಅದರ ಆತ್ಮ ಸುಮ್ಮನೆ ಬಿಡೋಲ್ಲ.

ಪುಟ 13 ಕ್ಕೆ

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

'ಸನ್ಯಾಸಿ' ಸಂಸಾರ

ಸನ್ಯಾಸಿಗಳೆಂದರೆ ಬಾಹುಬಲಿಯಂತೆ ಸರ್ವಸಂಗ ಪರಿತ್ಯಾಗಿಗಳು ಎಂದು ನಾವೆಲ್ಲಾ ತಿಳಿದುಕೊಂಡಿದ್ದೇವೆ. ಆದರೆ ಈ ಸನ್ಯಾಸಿಗಳು ಬಹಳ ಸಾರಿ ಅವರು ತಮ್ಮ ಜ್ಞಾನ-ವಿವೇಕವನ್ನು ತೊರೆದು, ಅದನ್ನು ತ್ಯಾಗ ಮಾಡಿ ನಿಂತವರಂತೆ ಕಾಣುವುದು ನಮ್ಮ ಜ್ಞಾನದ ಬಲವೋ ಅಥವಾ 'ಅಜ್ಞಾನ'ದ ಫಲವೋ ಎಂಬುದನ್ನು ಈ ದಿವ್ಯ ಜ್ಞಾನಿಗಳೇ ಹೇಳಬೇಕಿದೆ. ಇರಲಿ. ಎಲ್ಲವನ್ನು ತ್ಯಾಗ ಮಾಡಿರುವ ಸನ್ಯಾಸಿಗಳು ಸಾಮಾನ್ಯವಾಗಿ ವಿದ್ಯಾದಾನ ಮಾಡುವ ಹಾಗೂ ಧರ್ಮವನ್ನು ರಕ್ಷಿಸಿ ಜನತೆಗೆ ಆಶೀರ್ವಚನ ನೀಡುವ ಹಕ್ಕುಗಳನ್ನು ಮಾತ್ರ ತಮ್ಮ ಬಳಿಯೇ ಉಳಿಸಿಕೊಂಡಿರುತ್ತಾರೆ. ವಿದ್ಯಾದಾನ ಅದರಲ್ಲೂ ತಾಂತ್ರಿಕರು ವೈದ್ಯರು, ಶುಶ್ರೂಷಕರನ್ನು ತಯಾರಿಸುವ 'ವಿದ್ಯಾದಾನ' ಮಾಡುವುದು ಜಾಗತೀಕರಣ ಯುಗದಲ್ಲಿ ಪುಣ್ಯಕಾರ್ಯವೆಂದು ಪರಿಗಣಿಸಲಾಗಿರುವುದರಿಂದ ಸನ್ಯಾಸಿಗಳೆಲ್ಲಾ ಇದೇ ವಿದ್ಯಾದಾನ ಮಾಡಲು ಮಳಿಗೆ ತೆರೆಯುವುದು ಉಚಿತವೆಂದು ಭಾವಿಸಿದ್ದಾರೆ.

ಇದರಿಂದ ಸನ್ಯಾಸಿಗಳಿಗೆ ವಿದ್ಯಾದಾನ ಮಾಡಿದ ಪುಣ್ಯ ಬರುತ್ತದೆ. ಇದು ಕಲಿಯುಗವಾದ್ದರಿಂದ ವಿದ್ಯಾದಾನಕ್ಕೆ ತಕ್ಕಂತೆ ಶುಲ್ಕವನ್ನು, ವಂತಿಗೆಯನ್ನು ವಸೂಲಿ ಮಾಡುವುದೇನು ಪಾಪಕಾರ್ಯವಲ್ಲವೆಂದು ಪರಿಗಣಿಸಲಾಗಿರುವುದರಿಂದ ಸನ್ಯಾಸಿಗಳಿಗೆ ನಿಧಿಯು ದೊರೆಯುತ್ತಾ ಸನ್ಯಾಸಿಗಳು ತಕ್ಕಮಟ್ಟಿಗೆ ಸಮೃದ್ಧ ಜೀವನ ನಡೆಸುವುದು ಸಾಧ್ಯವಾಗಿದೆ. ಅಷ್ಟಕ್ಕೂ ರಾಜ್ಯದ, ಹೊರರಾಜ್ಯದ, ವಿದೇಶಗಳ ಶ್ರೀಮಂತ ಭಕ್ತರ ಕುಟುಂಬಗಳ ಪುತ್ರ ಪುತ್ರಿಯರನ್ನೇ ಇಲ್ಲಿ ವಿದ್ಯಮಾನಕ್ಕೆ ಆಯ್ಕೆ ಮಾಡಿಕೊಳ್ಳುವುದರಿಂದ ಬಡವರಿಗೆ ಇದರಿಂದ ಯಾವ ತೊಂದರೆಯೂ ಆದಂತಾಗುವುದಿಲ್ಲ. ಹೆಚ್ಚಿನ ಸಾರಿ ಬಡವರು ಇಲ್ಲಿಗೆ ಹತ್ತಿರ ಸುಳಿಯಲೂ ಅವಕಾಶ ಇಲ್ಲದಿರುವುದರಿಂದ ಅವರು ತುಂಬಾ ಸುರಕ್ಷಿತವಾಗಿರುತ್ತಾರೆ.

ಸಮಾಜಕ್ಕೆ ತ್ಯಾಗದ ಸಂದೇಶವನ್ನು ನೀಡಲು ಮಠವೊಂದು ಅಗತ್ಯವಾಗಿರುವುದರಿಂದ ಭಾರೀ ತ್ಯಾಗದ ಸಂದೇಶವನ್ನು ನೀಡಲು ಭಾರೀ ಮಠಗಳನ್ನೇ ಇವರು ಕಟ್ಟಿಕೊಂಡಿದ್ದಾರೆ.

ಹಿಂದೆಲ್ಲಾ ಯಜ್ಞಯಾಗಾದಿಗಳನ್ನು ನಡೆಸುವ ಋಷಿಮುನಿಗಳಿಗೆ ರಾಕ್ಷಸರು ಅಡ್ಡಿ ಮಾಡುತ್ತಿದ್ದಂತೆ, ಈಗ ಮಠಮಾನ್ಯಗಳ ಈ ವಿದ್ಯಾದಾನ ಮುಂತಾದ ಧರ್ಮಕಾರ್ಯಕ್ಕೆ ಹಲವು ಅಡ್ಡಿ ಆತಂಕಗಳು ಆಗಾಗ ಏರ್ಪಡುವ ಸಂಭವವಿದೆ ಎನ್ನುವುದು ತಮಗೆಲ್ಲಾ ತಿಳಿದೇ ಇದೆ. ಹಿಂದೆಲ್ಲಾ ಅಂತಹ ಸಂದರ್ಭಗಳಲ್ಲಿ ಧೀರರೂ, ಶೂರರೂ ಆದ ರಾಜರು, ರಾಜಕುಮಾರರು ಋಷಿ ಮುನಿಗಳ ರಕ್ಷಣೆಗೆ ಒದಗುತ್ತಿದ್ದರು.

ಇದು ಕಲಿಯುಗವಾದ್ದರಿಂದ ಈಗಿನ ನಮ್ಮ ಸನ್ಯಾಸಿಗಳು, ಋಷಿಮುನಿಗಳು ರಾಜ್ಯಾಧಿಕಾರಕ್ಕೇರಬಲ್ಲವರ ಜೊತೆ, ಅಥವಾ ಈಗಾಗಲೇ ರಾಜ್ಯಾಧಿಕಾರದಲ್ಲಿರುವವರ ಜೊತೆ ಸ್ನೇಹ ಸಲುಗೆಯಿಂದಿರುವುದು ಏನೇನೂ ತಪ್ಪಲ್ಲವೆಂದೂ ಬದಲಿಗೆ ಇದರಿಂದ ತಮ್ಮ ವಿದ್ಯಾದಾನ ಧರ್ಮರಕ್ಷಣೆಯ ಕೈಂಕರ್ಯಕ್ಕೆ ಇದರಿಂದ ಅಮೋಘ ಬೆಂಬಲ ಮತ್ತು ವೇಗ ಸಿಗುವುದರಿಂದ ಅದೂ ಸಹ ಒಂದು ಪುಣ್ಯ ಕಾರ್ಯವೆಂದೇ ಭಾವಿಸಲಾಗಿದೆ. ಅದೇ ರೀತಿ ತಮ್ಮ ಧರ್ಮ ಕಾರ್ಯಗಳಿಗೆ ಪೂರಕವಾಗಬಲ್ಲವನ್ನು ಅಧಿಕಾರಕ್ಕೇರಿಸಲು, ಅಥವಾ ಮಾರಕವಾಗಬಲ್ಲವರು ಅಧಿಕಾರಕ್ಕೇರುವುದನ್ನು ತಡೆಯಲು ತಮ್ಮ ಮಂತ್ರ ದಂಡವನ್ನು ಸನ್ಯಾಸಿಗಳು ಉಪಯೋಗಿಸುವುದು ಸಹಜವೇ ಆಗಿದೆ.

ಬಳಸುತ್ತಾ ಬಂದಂತೆಲ್ಲಾ ದುರ್ಬಲವಾಗುವ ಮೊಬೈಲ್ ಬ್ಯಾಟರಿಗಳಂತೆ ಈ ಸನ್ಯಾಸಿಗಳ ಮಂತ್ರದಂಡವು ಕಲಿಯುಗದಲ್ಲಿ ದುರ್ಬಲವಾಗಿರುವ ಕಾರಣದಿಂದ ತಾವು ಪ್ರತಿನಿಧಿಸುವುದಾಗಿ ಹೇಳುವ ಸಮಾಜಬಾಂಧವರ ಅಂದ್ರೆ ಕುಲಬಾಂಧವರ ಸಂಪರ್ಕದಿಂದ ಮಂತ್ರದಂಡವನ್ನು ಚಾರ್ಜ್ ಮಾಡಿಕೊಳ್ಳಲಾಗುತ್ತದೆ. ಅಂದರೆ ಬ್ಯಾಟರಿ ವೀಕ್ ಆಗಿರುವ ಮೊಬೈಲ್‌ಗೆ ಚಾರ್ಜರ್ ಪ್ಲಗ್ ಹಾಕಿ ಚಾರ್ಜ್ ಮಾಡಿಕೊಳ್ಳುವಂತೆ. ಮಂತ್ರದಂಡವನ್ನು ಚಾರ್ಜ್ ಮಾಡಿಕೊಳ್ಳಲು ಕುಲಬಾಂಧವರ ವೋಟ್ ಬ್ಯಾಂಕ್ ಎಂಬ ವಿದ್ಯುತ್ ಪ್ರವಾಹಕ್ಕೆ ಪ್ಲಗ್ ಹಾಕಿಕೊಂಡು ಚಾರ್ಜ್ ಮಾಡಿಕೊಳ್ಳಲಾಗುತ್ತಿದೆ.

ಇಷ್ಟೆಲ್ಲಾ ಆಗಿ ಧರ್ಮ ರಕ್ಷಣೆಯ ರಾಜಕೀಯ ಅಂತೆಲ್ಲಾ ಲೌಕಿಕ ವ್ಯವಹಾರಕ್ಕಿಳಿದ ಮೇಲೆ ಅಂಜಿಕೆ ಏನು ನಾಚಿಕೆ ಏನು ಎಂದು ಕೆಲವು ಸನ್ಯಾಸಿಗಳು ಬಡ್ಡಿಗೆ ಸಾಲ ನೀಡುವುದು ಮುಂತಾದ ಫೈನಾನ್ಸ್ ವ್ಯವಹಾರ, ರಿಯಲ್ ಎಸ್ಟೇಟ್ ಚಟುವಟಿಕೆ, 'ಸುಫಾರಿ' ಚಟುವಟಿಕೆಗಳಿಗೂ ಈಗಾಗಲೇ ಇಳಿದಾಗಿದೆ. ಇದನ್ನು 'ಸನ್ಯಾಸಿ ಸಂಹಾರ' ಅಂತ ಕರೆದರೆ ಮಠದ ಇಲಿ ಹಿಡಿಯಲು ಬೆಕ್ಕು, ಬೆಕ್ಕಿಗೆ ಹಾಲು ನೀಡುವ ಸಲುವಾಗಿ ಹಸು, ಹಸು ನೋಡಿಕೊಳ್ಳುವ ಸಲುವಾಗಿ ಸಂಸಾರವನ್ನು ಕಟ್ಟಿಕೊಂಡ ಸನ್ಯಾಸಿ ಕಥೆ ನೆನಪಿಗೆ ಬರುತ್ತಿದೆಯಲ್ಲವೇ?

ಸನ್ಯಾಸಿಗಳಾಗಿದ್ದೂ ನೂರೆಂಟು ಲೌಕಿಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಅದ್ಭುತ ಚಮತ್ಕಾರಪನ್ನೇ ಮೆರೆಯುತ್ತಿರುವ ನಮ್ಮ ನಾಡಿನ ಹಲವರು ನಮ್ಮ ಸಮಾಜಕ್ಕೆ, ಧರ್ಮಕ್ಕೆ ಮನುಕುಲಕ್ಕೆ ನೀಡಿದ ಕೊಡುಗೆಯ ಕುರಿತು ಮುಂದಿನ ವಾರ ಪರಿಚಯಿಸಿಕೊಳ್ಳೋಣ.


ಈಗ ಸದ್ಯಕ್ಕೆ ಈ ಕೆಳಗಿನ ಪಟ್ಟಿಯಲ್ಲಿ ಸನ್ಯಾಸಿಗಳು ಯಾರು, ಯಾರು ಸನ್ಯಾಸಿಗಳಲ್ಲ ಗುರುತಿಸಿ.

ಸುಬ್ರಹ್ಮಣ್ಯ ಸ್ವಾಮಿ	
ಪೇಜಾವರ ಶ್ರೀಸ್ವಾಮಿ	ಚಂದ್ರಸ್ವಾಮಿ
ಕಂಚಿ ಶ್ರೀ ಜಯೇಂದ್ರ ಸರಸ್ವತಿ	ಕುಮಾರಸ್ವಾಮಿ
ಬಾಲ ಗಂಗಾಧರ ಸ್ವಾಮಿ	ನೀಲಗುಂದ ಸ್ವಾಮಿ

ಕಲಬುರ್ಗಿ ಮಹಾನಗರ ಪಾಲಿಕೆ ಚುನಾವಣೆ

ತುರುಸಿನ ಸ್ಪರ್ಧೆ ಹೊಸ ಫಲಿತಾಂಶದ ನಿರೀಕ್ಷೆ

1960-70ರ ದಶಕದಲ್ಲಿ ಕಲಬುರ್ಗಿ ನಗರ ಸಭೆಯಲ್ಲಿ ಕಮ್ಯೂನಿಸ್ಟರೇ ಅತೀ ಪ್ರಭಾವಶಾಲಿಗಳಾಗಿದ್ದರು. ಆಗ ನಡೆದ ನಗರ ಸಭೆ ಚುನಾವಣೆಯಲ್ಲಿ ಅವರ ನೇತೃತ್ವದ ನಾಗರೀಕ ಸಮಿತಿ ವಿರೋಧ ಪಕ್ಷದ ಸ್ಥಾನದಲ್ಲಿತ್ತು. ಅದೇ ಕಾಲದಲ್ಲಿ ಏಕೀಕೃತ ಪಕ್ಷದಿಂದ ಕಲಬುರ್ಗಿ ನಗರದಿಂದ ನಮೋಶಿಯವರು ಶಾಸಕರಾಗಿ ಚುನಾಯಿತಗೊಂಡಿದ್ದರು. ಪಕ್ಷದ ವಿಭಜನೆಯಾಗಿ ಸಿ.ಪಿ.ಎಂ. ಪಕ್ಷ ಸ್ಥಾಪನೆಯಾದಾಗ ನಮೋಶಿಯವರು ಸಿ.ಪಿ.ಎಂ.ನಲ್ಲಿ ಉಳಿದರು. ಆ ಕಾಲದಲ್ಲಿ ಕಾಂಗ್ರೆಸ್‌ಗೆ ಸಿ.ಪಿ.ಎಂ ಪಕ್ಷವೇ ಪರ್ಯಾಯವಾಗಿತ್ತು. ಕಾಲದ ರಭಸದಲ್ಲಿ ಪ್ರಗತಿಪರರ ಪ್ರಾಬಲ್ಯ ಕುಗ್ಗಿತು. ತದನಂತರ 1984ರಲ್ಲಿ ಕಲಬುರ್ಗಿ ಮಹಾನಗರ ಪಾಲಿಕೆ ರಚನೆಯಾದ ನಂತರ ನಡೆದ ಚುನಾವಣೆಯಲ್ಲಿ ಸಿ.ಪಿ.ಎಂ.ನ ಒಬ್ಬ ಅಭ್ಯರ್ಥಿ ಪಾಲಿಕೆಯಲ್ಲಿ ಪ್ರವೇಶ ಪಡೆದರು. ಅವರು ಸತತವಾಗಿ ಎರಡು ಬಾರಿ ಚುನಾಯಿತಗೊಂಡರು. ಆದರೆ ಅವರು ಬಂಡವಾಳಶಾಹಿ ಗುಣಗಳನ್ನು ಮೈಗೂಡಿಸಿಕೊಂಡ ಪರಿಣಾಮವಾಗಿ ಚಳುವಳಿಯಿಂದ ಆಚೆಗಾದರು. ನಂತರದ ದಿನಗಳಲ್ಲಿ ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ದುಡಿಯುವ ಜನರ ಪ್ರತಿನಿಧಿ ಇಲ್ಲದಂತಾಯಿತು. 2002ರಲ್ಲಿ ನಡೆದ ಚುನಾವಣೆಯಲ್ಲಿ ಸಿ.ಪಿ.ಎಂ.ನ ಅಭ್ಯರ್ಥಿಗಳು ಸ್ಪರ್ಧಿಸಿದರೂ ಸರಿಯಾದ ಪೂರ್ವಬಾವಿ ಸಿದ್ಧತೆಯಿಲ್ಲದೆ ಪ್ರವೇಶ ಆಗಲಿಲ್ಲ. ಈಗ ನಡೆಯುತ್ತಿರುವ ಪಾಲಿಕೆ ಚುನಾವಣೆಯಲ್ಲಿ ಸಿ.ಪಿ.ಎಂ.ನಿಂದ ಒಟ್ಟು ಮೂರು ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಎಲ್ಲರೂ ಜಯಗಳಿಸುವ ಸಾಧ್ಯತೆಗಳಿವೆ. ವಾರ್ಡ್ ನಂ.7ರಿಂದ ಜನವಾದಿ


2005 ರಲ್ಲಿ ಆಯ್ಕೆಯಾದ ಮೇಯರ್, ಉಪಮೇಯರ್ ಚೆನ್ನಾಗಿ ಮೇಯ್ದರೆ?

ಮಹಿಳಾ ಸಂಘಟನೆಯ ನಾಯಕಿ ಕಾಂ.ಜಗದೇವಿ ನೂಲ್‌ಕರ್ ವಾರ್ಡ್ ನಂ.52ರಿಂದ ಸಿ.ಪಿ.ಎಂ.ನ ನಗರ ಕಾರ್ಯದರ್ಶಿ ಕಾಂ.ಗಂಗಮ್ಮ ಬಿರಾದಾರ ಮತ್ತು ವಾರ್ಡ್ ನಂ. 53ರಿಂದ ಯುವ ನಾಯಕ ಹಾಗೂ ನ್ಯಾಯವಾದಿ ಜೈಲಾಲ ತೋಟದ ಮನಿ ಜೆಡಿಎಸ್, ಬಿ.ಜೆ.ಪಿ ಮತ್ತು ಕಾಂಗ್ರೆಗೆ ಸೆಡ್ಡು ಹೊಡಿದಿದ್ದಾರೆ. ಇಂದಿನ ಸಮೀಕ್ಷೆ ಪ್ರಕಾರ ಎಲ್ಲಾ ಮೂರು ಸ್ಥಾನಗಳಲ್ಲಿ ಗೆಲ್ಲುವ ವಾತಾವರಣ ಇದೆ.

ನಗರದ ಈ ಚುನಾವಣೆಯಲ್ಲಿ ಒಟ್ಟು 55 ಸ್ಥಾನಗಳ ಪೈಕಿ ಕಾಂಗ್ರೆ 55, ಜೆ.ಡಿ.ಎಸ್ 52, ಬಿ.ಜೆ.ಪಿ 46, ಬಿ.ಎಸ್.ಪಿ 21, ಸಿಪಿಐ 2, ಎನ್.ಸಿ.ಪಿ 1, ಜೆ.ಡಿ.ಯು 2, ಸಮಾಜವಾದಿ 8, ಜನತಾಪಕ್ಷ 3, ಮತ್ತು ಪಕ್ಷೇತರರು 64 ಸ್ಥಾನಗಳಿಗೆ ಸ್ಪರ್ಧಿಸಿದ್ದಾರೆ. ತುರುಸಿನ ಈ ಚುನಾವಣಾ ರಂಗದಲ್ಲಿ ಇಂದಿನ ವರದಿಗಳ ಪ್ರಕಾರ ಕಾಂಗ್ರೆ ಪಕ್ಷವು ಕೆಲವು ಸ್ವತಂತ್ರ ಸದಸ್ಯರ ಬೆಂಬಲದಿಂದ ಅಧಿಕಾರಕ್ಕೆ ಬರುವ ಸಾಧ್ಯತೆಗಳಿವೆ. ಬರುವ ದಿನಗಳಲ್ಲಿ ಕಾಂಗ್ರೆ ಮುಖಂಡತ್ವದಲ್ಲಿ ಒಡಕುಂಟಾದರೆ ಅದು ಸಾಧ್ಯವಾಗಲಿಕ್ಕಿಲ್ಲ. ಇನ್ನೊಂದು ಮಹತ್ವದ ಬೆಳವಣಿಗೆಯಲ್ಲಿ 21 ಸ್ಥಾನಗಳಿಗೆ ಸ್ಪರ್ಧಿಸಿರುವ ಬಿ.ಎಸ್.ಪಿ ಕಾಂಗ್ರೆನ ಮತ ಬ್ಯಾಂಕ್‌ಗೆ ಲಗ್ಗೆಯಿಡುವ ಸಾಧ್ಯತೆ ಇದೆ. ಬಿ.ಜೆ.ಪಿ.-ಜೆ.ಡಿ.ಎಸ್. ಪ್ರತ್ಯೇಕವಾಗಿ ಸ್ಪರ್ಧಿಸುತ್ತಿದ್ದರೂ ಇಬ್ಬರಿಗೂ ಅಲ್ಪಸಂಖ್ಯಾತರ ಮತಗಳು ಸಿಗುವ ಸಾಧ್ಯತೆಗಳು ಇಲ್ಲ. ನಗರದಲ್ಲಿ ಶೇ.40 ಅಲ್ಪಸಂಖ್ಯಾತರ ಮತಗಳಿದ್ದು, ಅವರು ಈ ಚುನಾವಣೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ಮೀರಾಜೋದ್ದಿನ್ ಪಟೇಲ್ ಜೆ.ಡಿ.ಎಸ್ ರಾಜ್ಯಾಧ್ಯಕ್ಷರಾದ ನಂತರ ಕೆಲ ಕಾಂಗ್ರೆ ಮುಖಂಡರು ಜೆ.ಡಿ.ಎಸ್ ಸೇರಿದ್ದಾರೆ. ಆದರೆ ಇದರಿಂದ ಕಾಂಗ್ರೆ ಮೇಲೆ ಯಾವುದೇ ವ್ಯತಿರಿಕ್ತ ಪ್ರಭಾವ ಆಗುವುದಿಲ್ಲ. ಇಂದಿನ ಒಟ್ಟಾರೆ ಪರಿಸ್ಥಿತಿಯಂತೆ ಮತ್ತು ವಿವಿಧ ರೀತಿಯ ಗಣಿತ, ಕೆಮೆಸ್ಟ್ರಿಯಂತೆ ಈ ಚುನಾವಣೆಯಲ್ಲಿ ಕಾಂಗ್ರೆ ಅಧಿಕಾರ ಹಿಡಿಯುವ ಸಾಧ್ಯತೆಯಿದೆ. ಇನ್ನೊಂದು ಮಹತ್ವದ ಉದ್ದೇಶವೇನೆಂದರೆ, ಸಿಪಿಎಂ ಪಕ್ಷವು ನಗರದಾದ್ಯಂತ ವಿವಿಧ ಬಡಾವಣೆಗಳಲ್ಲಿ ಒಟ್ಟು ಸುಮಾರು 10,000 ಮತದಾರರ ಮೇಲೆ ಹೆಚ್ಚು ಪ್ರಭಾವ ಹೊಂದಿದೆ. ಹೀಗಾಗಿ ಈ ಪಕ್ಷವು ತಾವು ಸ್ಪರ್ಧಿಸುತ್ತಿರುವ ಸ್ಥಾನಗಳನ್ನು ಹೊರತುಪಡಿಸಿ ಉಳಿದೆಲ್ಲ ಸ್ಥಾನಗಳಲ್ಲಿ ಯಾರಿಗೆ ಮತ ಚಲಾಯಿಸುವರೆಂಬುದು ಕೂಡ ನಿರ್ಣಾಯಕ ಅಂಶವಾಗಿದೆ. ಸಿಪಿಐ ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಯತ್ನಿಸಿತು. ಆದರೆ ಅದು ಫಲಿಸಲಿಲ್ಲ.

ಏನೇ ಇದ್ದರೂ ಕಲಬುರ್ಗಿಯಲ್ಲಿ ಕೋಮುವಾದಿಗಳು ಅಧಿಕಾರಕ್ಕೆ ಬರುವುದು ಅಸಂಭವವೆನಿಸುತ್ತಿದೆ ಮತ್ತು ತುಂಬಾ ವರ್ಷಗಳ ನಂತರ ಸಿಪಿಎಂ ಪಕ್ಷವು ಕಲಬುರ್ಗಿ ಮಹಾನಗರ ಪಾಲಿಕೆಗೆ ಮರುಪ್ರವೇಶ ಮಾಡುವುದು ಎಂದು ಕಾಣುತ್ತಿದೆ.

ಗಂಗಾ

ಲಂಬಾಣಿ ತಾಂಡಗಳಲ್ಲಿ ಶ್ವೇತ ಪತಾಕೆ ಹಾರಾಟ
ಅದ್ದೂರಿ ಡಿವೈಎಫ್‌ಐ ಉದ್ಘಾಟನಾ ಸಮಾರಂಭ

'ನಾಗರೀಕತೆ'ಯಿಂದ ದೂರವೇ ಉಳಿದು ಕಾಡಮೇಡುಗಳಲ್ಲಿ ವಾಸಿಸುತ್ತಾ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಬುಡಕಟ್ಟು ಸಮುದಾಯಗಳಲ್ಲಿ ಬಂಜಾರ ಸಮುದಾಯವೂ ಒಂದು. ದಾವಣಗೆರೆ ಜಿಲ್ಲೆ ಹರಪನಹಳ್ಳಿಯಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಈ ಸಮುದಾಯದ ಯುವಜನರು ತಮ್ಮ ಬೇಕು ಬೇಡಗಳ ಈಡೇರಿಕೆಗಳಿಗೆ ಸಂಘಟಿತರಾಗಬೇಕಾದ ಅಗತ್ಯವನ್ನು ಮನಗಂಡಿದ್ದು, ತಮ್ಮ ಊರುಗಳಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (DYFI) ನ ಘಟಕಗಳನ್ನು ಆರಂಭಿಸಿದ್ದಾರೆ. ಚನ್ನಹಳ್ಳಿ ತಾಂಡಾದ ಘಟಕದ ನಾಮಫಲಕ ಅನಾವರಣವನ್ನು ಶ್ರೀ ವೀರಭದ್ರೇಶ್ವರ ಸ್ವಾಮೀಜಿ ನೆರವೇರಿಸಿ ಡಿವೈಎಫ್‌ಐ ನಂತಹ ಜಾತ್ಯತೀತ ಸಂಘಟನೆಯನ್ನು ಆಯ್ಕೆ ಮಾಡಿಕೊಂಡಿರುವುದಕ್ಕಾಗಿ ಯುವಜನರನ್ನು ಅಭಿನಂದಿಸಿದರು. ಕಾರ್ಯಕ್ರಮವನ್ನು ಡಿವೈಎಫ್‌ಐ ಸಂಘಟನೆಯ ರಾಜ್ಯ ಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್ ಉದ್ಘಾಟಿಸಿದರು. ಅವರು ನಿರುದ್ಯೋಗ ಕೋಮುವಾದ, ಬಡತನ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಬೇಕು. ಭಜರಂಗದಳದಂತಹ ಕೋಮುವಾದಿ ಸಂಘಟನೆಗಳು ಇಂದು ಬುಡಕಟ್ಟು ಜನರನ್ನು ಧರ್ಮದ ಹೆಸರನ್ನು ಹೇಳಿ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ಇವುಗಳ ಬಗ್ಗೆ ಜಾಗ್ರತಗೊಳ್ಳಬೇಕೆಂದರು. ಪ್ರೊ.ಡಿ.ಬಿ.ಬಡಿಗೇರರವರು ಮಾತನಾಡುತ್ತ ನಮ್ಮ ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳಬೇಕು. ಸಂಘಟಿಸಿ ಹೋರಾಟದಿಂದ ದೇಶವನ್ನೇ ಸ್ವತಂತ್ರಗೊಳಿಸಲು ಸಾಧ್ಯವಾಗಿದೆ ಎಂದರು. ವೇದಿಕೆಯಲ್ಲಿ ಹರಪನಹಳ್ಳಿ ಪೊಲೀಸ್ ಇನ್ಸ್‌ಪೆಕ್ಟರ್ ನಾಗೇಶ್ ಐತಾಳ ಎಸ್‌ಎಫ್‌ಐ ರಾಜ್ಯ ಸಹಕಾರ್ಯದರ್ಶಿ ಅನಂತ್ ನಾಯಕ್, ಜನವಾದಿ ಮಹಿಳಾ ಸಂಘಟನೆಯ ಟಿ.ಪದ್ಮಾವತಿ, ಪ್ರಜ್ಞಾ ಡಿವೈಎಫ್‌ಐ ತಾಲ್ಲೂಕ ಅಧ್ಯಕ್ಷ ಗುಣಿಕೇರಿ ಲೋಕೇಶ್ ಕಾರ್ಯದರ್ಶಿ ರಾಜು ಕೌದೂರು ರಾಮಚಂದ್ರನಾಯ್ಕ ಪ್ರೇಮಾ ನಾಯ್ಕ, ಹೇಮಾ ನಾಯ್ಕ್, ಶೆಟ್ಟಿ ನಾಯ್ಕ್ ಉಪಸ್ಥಿತರಿದ್ದರು.

ಜನರ ಬದುಕು

ಹರಪನಹಳ್ಳಿ ಪಟ್ಟಣಕ್ಕೆ 1 ಕಿ.ಮೀ ದೂರವಿರುವ ಆದಿ ಬಸವೇಶ್ವರ ಕಾಲೋನಿಯಲ್ಲಿ 300 ಮನೆಗಳನ್ನು ಆಶ್ರಯ ಯೋಜನೆ ಅಡಿ ವಿತರಿಸಿ 10 ವರ್ಷವಾಗಿದೆ. ಆದರೆ ಮನೆ ವಿತರಿಸುವಾಗ ಜನಪ್ರತಿನಿಧಿಗಳಿಗೆ, ಶ್ರೀಮಂತರಿಗೆ ಅವರ ಸಂಬಂಧಿಕರಿಗೆ ಹಂಚಿರುವುದು ಬೇರೆ ವಿಚಾರ. ಈ ಕಾಲೋನಿಗೆ ವಿದ್ಯುತ್ ಕಂಬಗಳನ್ನು ಅಳವಡಿಸಿದೆ. ಆದರೆ ಈ ಬಡವರ ಮನೆಗಳಿಗೆ ಭಾಗ್ಯಜ್ಯೋತಿ ಅಥವಾ ಕುಟೀರಜ್ಯೋತಿಯ ಮೂಲಕ ವಿದ್ಯುತ್ ಸೌಕರ್ಯವಿಲ್ಲದೆ ಕಗ್ಗತ್ತಲೆಯಲ್ಲಿ ವಾಸ ಮಾಡುತ್ತಾರೆ. ಈ ಕಾಲೋನಿಗೆ ರಸ್ತೆ, ಚರಂಡಿಯಿಲ್ಲದೆ ಗಿಡ, ಬಳ್ಳಿಗಳು ಬೆಳೆದು ಸದಾ ವಿಷಜಂತುಗಳ ಭಯದಲ್ಲಿ ಬದುಕುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಬೆಟ್ಟಗುಡ್ಡಗಳಿಗೆ ತಾಗಿಕೊಂಡಿದೆ ಈ ಕಾಲೋನಿ. ಬೋರ್‌ವೆಲ್ ಕೆಟ್ಟು ವರ್ಷ ಕಳೆದು ರಿಪೇರಿಗೆ ಅಂತ 400 ರೂ. ಲಂಚವನ್ನು ಕೊಟ್ಟು ರಿಪೇರಿಯಾದರೂ ನೀರು ಬರಲಿಲ್ಲ. ಶ್ರೀಮಂತರಿಗೆ ಮಂಜೂರಾಗುವ ಮನೆಗಳು ಖಾಲಿಬಿದ್ದು ಹಾಳಾಗುತ್ತಿವೆ. ಈ ಮನೆಗಳಲ್ಲಿ ವಸತಿರಹಿತರು ಬಂದು ವಾಸ ಮಾಡಿದರೆ ಹೊರಕ್ಕೆ ಬಿಸಾಕುತ್ತಾರೆ. ಇಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ಡಿವೈಎಫ್‌ಐ ಸದಸ್ಯತ್ವ ಮಾಡಿಸಿ ಘಟಕ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಮೀನಳ್ಳಿ ತಂಡಕ್ಕೆ ರಸ್ತೆಯಿಂದ ಸುಮಾರು 4 ಕಿ.ಮೀ ದೂರ ಹೊಲಗದ್ದೆಗಳ ಮಧ್ಯೆ ಹಾದುಹೋಗಬೇಕು. ಯಾರಿಗಾದರೂ ಕಾಯಿಲೆ ಬಂದರೆ, ಗರ್ಭಿಣಿ ಮಹಿಳೆಯರ ಸ್ಥಿತಿ ಚಿಂತಾಜನಕ. ಕೂಲಿಗಾಗಿ ವಲಸೆ ಹೋಗುತ್ತಾರೆ. ಆದರೆ ಉದ್ಯೋಗ ಖಾತ್ರಿಯ ಬಗ್ಗೆ ಮಾಹಿತಿಯೇ ಇಲ್ಲ. ಈ ಸಮಸ್ಯೆಗಳ ನಡುವೆ ಆಶಾವಾದದಿಂದ ಡಿವೈಎಫ್‌ಐ ಸಂಘಟನೆ ಪ್ರಾರಂಭಿಸಿದ್ದಾರೆ. ಅದೇ ರೀತಿ ಹಾರ್ಕನಾಳ ತಂಡದಲ್ಲಿ ಡಿವೈಎಫ್‌ಐ ಸಂಘಟನೆ ಪ್ರಾರಂಭ ಮಾಡಿ ಘಟಕ ಉದ್ಘಾಟನೆ ನೆರವೇರಿಸಿದೆ.

'ಬಹುಮತವಿಲ್ಲ, ಮತ್ತಿದು ಸಿಪಿಎಂಪಿಯ ಉಲ್ಲಂಘನೆ'

ಪುಟ 9 ರಿಂದ

ಉಲ್ಲೇಖಿಸಿದ ಅಂಕಿಅಂಶಗಳೇ ಈ ವಾದದ ಟೊಳ್ಳುತನವನ್ನು ಬಯಲಿಗೆಳೆಯುತ್ತವೆ. 2006ರವರೆಗೆ ಭಾರತಕ್ಕೆ 8 ಲಕ್ಷ ಮೆಗಾವ್ಯಾಟ್ ವಿದ್ಯುತ್ ಬೇಕಂತೆ. ಆದರೆ ಈ 8 ಲಕ್ಷದಲ್ಲಿ ಭಾರತ ಸರ್ಕಾರ ಮತ್ತು ಯೋಜನಾ ಆಯೋಗದ ಲೆಕ್ಕಾಚಾರದಂತೆಯೇ ಕೇವಲ 30ರಿಂದ 40 ಸಾವಿರ ಮೆ. ವ್ಯಾ. ಮಾತ್ರ ಅಣುಶಕ್ತಿಯ ಕೊಡುಗೆ. ಅಂದರೆ ಕೇವಲ ಶೇ 5ಕ್ಕಿಂತಲೂ ಕಡಿಮೆ. ಅದರಲ್ಲಿಯೂ ಆಮದು ಮಾಡಿಕೊಳ್ಳುವ ಅಣು ವಿದ್ಯುತ್ತಿನ ಬೆಲೆ ಈಗಿನ ಲೆಕ್ಕಾಚಾರದಂತೆ ಯೂನಿಟ್ ಒಂದಕ್ಕೆ ರೂ 10ರಿಂದ 11 ಆಗುತ್ತದೆ. ಈ ವಿಷಯವನ್ನು ಭಾರತದ ಜನತೆಯಿಂದ ಅವರು ಮುಚ್ಚಿಡಬಯಸುತ್ತಾರೆ.

ರಕ್ಷಣಾನೀತಿ, ವಿದೇಶಾಂಗನೀತಿ, ಕೃಷಿ, ಕೈಗಾರಿಕೆ, ಬ್ಯಾಂಕ್, ಶಿಕ್ಷಣ, ನ್ಯಾಯಾಲಯಗಳ ಮೇಲೆ ತೀವ್ರ ಪರಿಣಾಮ.

ಕಾಂಗ್ರೆಸ್ ಭಾರತದ ಜನತೆಯಿಂದ ಮುಚ್ಚಿಡಬಯಸುತ್ತಿರುವ ಹಲವು ಶರತ್ತುಗಳು ಅಣುಒಪ್ಪಂದದೊಂದಿಗೆ ತಳುಕು ಹಾಕಿಕೊಂಡಿವೆ. ಭಾರತದ ಸೇನೆ ಅಮೇರಿಕಾದ ಸೇನೆಯ ಸಹಚರವಾಗಬೇಕು, ಮೂರನೇ ದೇಶಗಳಲ್ಲಿ ಎರಡೂ ದೇಶಗಳು ಮಿಲಿಟರಿ ಕಾರ್ಯಾಚರಣೆಯಲ್ಲಿ ಭಾಗವಹಿಸಬೇಕು ಭಾರತದ ವಿದೇಶಾಂಗ ನೀತಿ ಅಮೇರಿಕಾದ ವಿದೇಶಾಂಗ ನೀತಿಗೆ ಸರ್ವಸಮವಾಗಬೇಕು, ಭಾರತದ ಖಾಸಗಿ ಬ್ಯಾಂಕ್‌ಗಳು ಬಹುರಾಷ್ಟ್ರೀಯ ಕಂಪನಿಗಳ ವಶವಾಗಬೇಕು ಕೃಷಿ ಸಂಶೋಧನೆ, ರೈತರ ಫಸಲು ಇವು ಮೊನ್ಸಾಂಟೋ, ಕಾರ್ಗಿಲ್‌ನಂತಹ ಕುಪ್ರಸಿದ್ಧ ಕಂಪನಿಗಳ ವಶವಾಗಬೇಕು, ಕೈಗಾರಿಕೆಗಳು, ಕಾರ್ಮಿಕ ಕಾಯಿದೆಗಳು, ಉನ್ನತ ಶಿಕ್ಷಣವೂ ಈ ಪರಿಧಿಗೆ ಸೇರಿದೆ. ನ್ಯಾಯಾಲಯ ವ್ಯವಸ್ಥೆಯಲ್ಲಿಯೂ ಬಹುರಾಷ್ಟ್ರೀಯ ಕಂಪನಿಗಳ ಅವಶ್ಯಕತೆಗನುಗುಣವಾಗಿ ವಿಶೇಷ ನ್ಯಾಯಾಲಯಗಳು ಬೇಕು ಇತ್ಯಾದಿ.

ಒಟ್ಟಿನಲ್ಲಿ ಭಾರತದ ರೈತರನ್ನು ಮತ್ತಷ್ಟು ಆತ್ಮಹತ್ಯೆಯತ್ತ ದೂಡುವ, ಸಾಮಾನ್ಯ ಜನರನ್ನು ಭಾಧಿಸುವ ಆರ್ಥಿಕ ನೀತಿಗಳನ್ನು ಮತ್ತಷ್ಟು ತೀವ್ರವಾಗಿ ಹೇರುವುದು ಈ ಒಪ್ಪಂದದ ಭಾಗವಾಗಿದೆ. ಆದ್ದರಿಂದ ಈ ಒಪ್ಪಂದವನ್ನು ಪುನರ್ವಿಮರ್ಶೆಗೊಳಪಡಿಸಬೇಕು. ಈ ಒಪ್ಪಂದದ ಎಲ್ಲಾ ಪರಿಣಾಮಗಳ ಬಗ್ಗೆ ವಿಮರ್ಶೆಯಾಗದ ಚರ್ಚೆಯಾಗದ ಹೊರತು ಮುಂದಿನ ಹೆಜ್ಜೆಗಳನ್ನಿಡಬಾರದು ಎಂಬುದು ಸಿಪಿಐ(ಎಂ) ನಿಲುವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಬಾಗೇಪಲ್ಲಿ ಪಟ್ಟಣ ಪಂಚಾಯಿತ್ತಿಯಲ್ಲಿ ನಿರಂತರವಾಗಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಅಭಿವೃದ್ಧಿ ಕಾರ್ಯದಲ್ಲಿ ವಿಫಲವಾದರೆ ಸಿಪಿಐ(ಎಂ) ಶಾಸಕರ ಪರಿಶ್ರಮದಿಂದ ಪಟ್ಟಣದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳಾಗಿವೆ.

60 ವರ್ಷಗಳ ಆಡಳಿತದಲ್ಲಿ ಬಾಗೇಪಲ್ಲಿಯನ್ನು ದಿವಾಳಿ ಮಾಡಿದ ಕಾಂಗ್ರೆಸ್

ಹೊಸ ಬಾಗೇಪಲ್ಲಿ ನಿರ್ಮಾಣಕ್ಕೆ ಕಂಕಣ


ರಸ್ತೆ ದೀಪದ ವ್ಯವಸ್ಥೆ

ಮುರುಳಿಕೃಷ್ಣ

ಕಾಂಗ್ರೆಸ್ ಪಕ್ಷದ ವತಿಯಿಂದ ಆಯ್ಕೆಯಾಗಿ ಬಂದಿರುವ ಸದಸ್ಯರು ಅಭಿವೃದ್ಧಿ ಕಾರ್ಯಗಳಿಗೆ ಬರುವ ಹಣವನ್ನು ಕೋಟಾ ಪ್ರಕಾರದಲ್ಲಿ ಹಂಚಿಕೆ ಮಾಡಿಕೊಳ್ಳುವದಲ್ಲೇ ಕಾಲ ಕಳೆದರು. ಇದು ಬಿಟ್ಟರೆ ಪಟ್ಟಣದ ಜನರ ಮೂಲಭೂತ ಸಮಸ್ಯೆಗಳ ನಿವಾರಣೆಗೆ ಅರೆ ಕ್ಷಣವೂ ಚಿಂತನೆ ನಡೆಸಿಲ್ಲ. ಚುನಾವಣೆಯಲ್ಲಿ ತೊಡಗಿಸಿದ 'ಬಂಡವಾಳ'ವನ್ನು ಬಡ್ಡಿ, ಚಕ್ರಬಡ್ಡಿ ಸಮೇತ ವಾಪಸ್ ಪಡೆಯುವುದು ಹೇಗೆಂಬುದೇ ಇವರ ಪ್ರಮುಖ ಕಾಯಕವಾಗಿದೆ.

ಪಟ್ಟಣದ ಅಭಿವೃದ್ಧಿಗೆ ಸರ್ಕಾರದಿಂದ ಹಣ ಮಂಜೂರಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಕುಳಿತು ಅವರಿಗಿಷ್ಟು, ಇವರಿಗಿಷ್ಟು ಎಂದು ಹಂಚಿಕೊಳ್ಳುವುದನ್ನು ಬಿಟ್ಟರೆ ವಾರ್ಡ್‌ಗಳಲ್ಲಿ ತುಂಬಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹರಿಸುವ ಕ್ರಮ ಕೈಗೊಂಡಿದ್ದೇ ಇಲ್ಲ.

ಸಿಪಿಎಂ ಪಕ್ಷದಿಂದ ಆಯ್ಕೆಯಾಗುವ ಒಂದೆರಡು ಅಭ್ಯರ್ಥಿಗಳು, ಮೆಜಾರಿಟಿ ಇಲ್ಲದಿದ್ದರೂ ಸತತವಾಗಿ ಹೋರಾಟ ನಡೆಸುತ್ತಾ ಕೆಲವು ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದನ್ನು ಬಿಟ್ಟರೆ ಉಳಿದಂತೆ ಯೋಜನೆಗಳಿಗೆ ಮಂಜೂರಾದ ಹಣ ಪಟ್ಟಣ ಪಂಚಾಯ್ತಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಜೇಬು ತುಂಬಿಸುವುದೇ ಆಗಿದೆ.

ತಮ್ಮ ಅರವತ್ತು ವರ್ಷಗಳ ಅಧಿಕಾರಾವಧಿಯಲ್ಲಿ ಒಮ್ಮೆಯೂ ಬಡವರಿಗೆ ನಿವೇಶನವಾಗಲಿ, ಮನೆಗಳನ್ನಾಗಲಿ ಹಂಚಿಲ್ಲ. ತಮ್ಮ ಬಂಟರಿಗೆ ಕಾಮಗಾರಿಗಳನ್ನು ನೀಡಿ ಅಲ್ಲಿ ಇಲ್ಲಿ ತೇಪೆ ಕೆಲಸಗಳನ್ನು ಮಾಡಿ ಬಿಲ್ಲುಗಳನ್ನು ಹಂಚಿಕೊಂಡು ಸರ್ಕಾರಿ ಹಣ ಲೂಟಿ ಮಾಡಿರುವುದೇ ಅವರ ಇದುವರೆಗಿನ ಅಭಿವೃದ್ಧಿ ಕಾರ್ಯ.

ಜಾತಿ ಹೆಸರಿನಲ್ಲಿ ಅನೈತಿಕ ರಾಜಕಾರಣ ಮಾಡುತ್ತಾ, ಹಣ, ಸಾರಾಯಿ ಹಂಚುತ್ತಾ ಅರವತ್ತು ವರ್ಷಗಳಿಂದ ಬಾಗೇಪಲ್ಲಿ ಪಟ್ಟಣ ಪಂಚಾಯತಿಯಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷವೂ ಇಡೀ ಪಟ್ಟಣವನ್ನು ಹಾಳು ಕೊಂಪೆಯನ್ನಾಗಿ ಮಾಡಿದೆ. 28ರಂದು ನಡೆಯುವ ಪಟ್ಟಣ ಪಂಚಾಯ್ತಿ ಚುನಾವಣೆಗೆ ಇದೇ ಟ್ರಂಪ್ ಕಾರ್ಡ್ ಬಳಕೆ ಮಾಡಿ ಮತ್ತೆ ಅಧಿಕಾರ ಹಿಡಿಯಲು ಹವಣಿಸುತ್ತಿದೆ.

ತನ್ನ ಅರವತ್ತು ವರ್ಷಗಳ ಅಧಿಕಾರಾವಧಿಯಲ್ಲಿ ಹೇಳಿಕೊಳ್ಳುವಂತಹ ಒಂದಾದರೂ ಪ್ರಮುಖ ಅಭಿವೃದ್ಧಿ ಕಾರ್ಯ ಮಾಡದಿರುವ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರ ಹಿಡಿಯಲು ಎಲ್ಲ ಅನೈತಿಕ ಮಾರ್ಗಗಳನ್ನು ಅನುಸರಿಸುತ್ತಿದೆ. ಪಟ್ಟಣದ ಅಭಿವೃದ್ಧಿಗೆ ನಿರ್ದಿಷ್ಟ ಕಾರ್ಯಕ್ರಮ ಇಲ್ಲದೆ ಖಾಲಿ ಮತ್ತಳಿಕೆಯೊಂದಿಗೆ ಜನರನ್ನು ಮೋಸಗೊಳಿಸಿ ಚುನಾವಣೆ ಎದುರಿಸಲು ಮುಂದಾಗಿದೆ.

ಸಿಪಿಎಂ ಪಕ್ಷದ ವತಿಯಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಅವಧಿ ಹೊರತುಪಡಿಸಿದರೆ ಅತ್ಯಂತ ದೀರ್ಘಾವಧಿವರೆಗೆ ಕಾಂಗ್ರೆಸ್ ಪಕ್ಷ ಬಾಗೇಪಲ್ಲಿಯಲ್ಲಿ ಆಡಳಿತ ನಡೆಸಿದೆ. ಆದರೆ ಇದುವರೆಗೂ ಒಂದೇ ಒಂದು ಜನಪರ ಕಾರ್ಯ ಕೈಗೊಂಡಿರುವ ಉದಾಹರಣೆ ಇಲ್ಲ.

ಸರ್ವತೋಮುಖ ಅಭಿವೃದ್ಧಿಗಾಗಿ

ಈ ಹಿಂದಿನ ಪಂಚಾಯ್ತಿಯಲ್ಲಿ ಸಿಪಿಎಂ ಪಕ್ಷವನ್ನು ಪ್ರತಿನಿಧಿಸಿದ್ದ ವಾರ್ಡ್‌ಗಳಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳು ಪಟ್ಟಣದ ಇತರ ವಾರ್ಡ್‌ಗಳಿಗೆ ಮಾದರಿಯಾಗಿದೆ. ಸಿಪಿಎಂ ಪಕ್ಷ ಅಧಿಕಾರಕ್ಕೆ ಬಂದರೆ ಇಡೀ ಬಾಗೇಪಲ್ಲಿ ಪಟ್ಟಣಕ್ಕೆ ಹೊಸ ರೂಪ ನೀಡುವ ಕಾರ್ಯಕ್ರಮದೊಂದಿಗೆ ಜನರ ಬೆಂಬಲ ಯಾಚಿಸುತ್ತಿದೆ. ಎಲ್ಲ ವಾರ್ಡ್‌ಗಳಲ್ಲೂ ಅಪಾರ ಸ್ಪಂದನೆ ಸಿಕ್ಕಿದೆ.

ಪಟ್ಟಣ ಪಂಚಾಯ್ತಿಯಲ್ಲಿ ಸಿಪಿಎಂ ಪಕ್ಷ ಇದುವರೆಗೆ ಅಧಿಕಾರ ನಡೆಸದಿದ್ದರೂ ಶಾಸಕ ಶ್ರೀರಾಮರೆಡ್ಡಿರವರ ಅವಿರತ ಶ್ರಮದಿಂದ ಪಟ್ಟಣ ಸರ್ವತೋಮುಖ ಬೆಳವಣಿಗೆಯತ್ತ ಮುನ್ನಡೆದಿದೆ. ಪಟ್ಟಣದ ಅಭಿವೃದ್ಧಿಗೆ ಇದುವರೆಗೆ ಕೋಟ್ಯಾಂತರ ರೂಗಳನ್ನು ತೊಡಗಿಸಲಾಗಿದೆ.

ನಿವೇಶನ ಇಲ್ಲದ ಬಡವರಿಗೆ ಬಾಗೇಪಲ್ಲಿ ಇತಿಹಾಸದಲ್ಲೇ ಮೊದಲ ಬಾರಿಗೆ 386 ನಿವೇಶನಗಳನ್ನು ಹಂಚಲಾಗಿದೆ. ಗೂಳೂರು ರಸ್ತೆಯಿಂದ ಪ್ರವಾಸಿ ಮಂದಿರದವರೆಗೆ ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತವಾದ ಜೋಡಿ ರಸ್ತೆಯನ್ನು ನಿರ್ಮಾಣ ಮಾಡಿ, ಮರ್ಕ್ಯುರಿ ದೀಪಗಳನ್ನು ಅಳವಡಿಸಲಾಗಿದೆ.



ಪಟ್ಟಣದ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಣೆ ಮಾಡಲು ಚಿತ್ರಾವತಿ ನದಿಗೆ ಪರಗೋಡು ಸಮೀಪ ಅಣೆಕಟ್ಟು ನಿರ್ಮಾಣ ಮಾಡಲಾಗಿದೆ. ಸಣ್ಣಮಟ್ಟ ವ್ಯಾಪಾರಸ್ತರಿಗೆ ಅನುಕೂಲವಾಗಲೆಂದು ಪಟ್ಟಣದ ಸಂತೆ ಮೈದಾನದಲ್ಲಿ ಅಂಗಡಿಗಳನ್ನು ನಿರ್ಮಾಣ ಮಾಡಲಾಗಿದೆ. ಐಡಿಎಸ್‌ಎಂಟಿ ಯೋಜನೆಯಡಿ ಪಟ್ಟಣದಲ್ಲಿ ಎರಡು ಕಡೆ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡಲಾಗಿದ್ದು, ಇದರಿಂದ ವರ್ತಕರಿಗೆ ಅನುಕೂಲವಾಗುವುದರೊಂದಿಗೆ ಪಟ್ಟಣ ಪಂಚಾಯ್ತಿಗೂ ನಿರಂತರ ಆದಾಯ ಬರುವಂತೆ ಕ್ರಮ ಕೈಗೊಳ್ಳಲಾಗಿದೆ. ವಾಲ್ಮೀಕ ಕಾಲೋನಿಯಿಂದ ಕೊತ್ತಪಲ್ಲಿವರೆಗೆ ನಾಲೆ ಅಭಿವೃದ್ಧಿಪಡಿಸಲಾಗಿದೆ.


ಶಾಸಕರಿಂದ ನಿವೇಶನ ಹಕ್ಕುಪತ್ರ ವಿತರಣೆ

ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಸಿಪಿಐ(ಎಂ) ಪಕ್ಷ ವಹಿಸಿದ ಕಾಳಜಿಯಿಂದಾಗಿ ಪ್ರಥಮ ದರ್ಜೆ ಕಾಲೇಜು, ಪಾಲಿಟೆಕ್ನಿಕ್ ಆರಂಭಿಸಲಾಗಿದೆ. ಬಸ್ ಡಿಪೋ ಸ್ಥಾಪಿಸಲಾಗಿದೆ. ಪಟ್ಟಣದಲ್ಲಿ ಗಣನೀಯ ಪ್ರಮಾಣದಲ್ಲಿರುವ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಮೊಟ್ಟಮೊದಲ ಬಾರಿಗೆ ಸರ್ಕಾರಿ ಉರ್ದು ಶಾಲೆ ಆರಂಭಿಸಲಾಗಿದೆ.

ಈ ಎಲ್ಲ ಕೆಲಸಗಳ ಆಧಾರದಲ್ಲಿ ಪಟ್ಟಣವನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವ ದೃಢ ನಿರ್ಧಾರದೊಂದಿಗೆ ಸಿಪಿಎಂ ಪಕ್ಷ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಇಂತಹ ಯಾವುದೇ ಹಿನ್ನೆಲೆ ಇಲ್ಲದ ಕಾಂಗ್ರೆಸ್ ಪಕ್ಷ ತನ್ನ ಎಂದಿನ ಹಣಬಲ, ಸಾರಾಯಿ ಮತ್ತು ಜಾತಿ ಬಲದ ಆಧಾರದಲ್ಲಿ ಚುನಾವಣೆ ಎದುರಿಸಲು ಮುಂದಾಗಿದೆ.

ಕೋಲಾರ ಜಿಲ್ಲೆಯಲ್ಲಿ ನಗರಸಭೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಸಿಪಿಎಂ ಪಕ್ಷದ ಅಭ್ಯರ್ಥಿಗಳ ವಿವರ

ಬಾಗೇಪಲ್ಲಿ ಪಟ್ಟಣ ಪಂಚಾಯ್ತಿಯಲ್ಲಿ ಎಲ್ಲಾ 23 ಸ್ಥಾನಗಳಲ್ಲೂ ಸ್ಪರ್ಧಿಸುತ್ತಿದೆ. ಅದೇ ರೀತಿ ಗುಡಿಬಂಡೆಯಲ್ಲಿ 11 ಸ್ಥಾನಗಳಲ್ಲಿ ಸ್ಪರ್ಧಿಸಲಾಗುತ್ತಿದೆ. ಕೋಲಾರ ನಗರದಲ್ಲಿ 2 ಸ್ಥಾನಗಳಲ್ಲಿ, ಕೆಜಿಎಫ್ 3 ಸ್ಥಾನಗಳಲ್ಲೂ, ಬಂಗಾರಪೇಟೆಯಲ್ಲಿ 1, ಗೌರಿಬಿದನೂರಿನಲ್ಲಿ 3, ಶ್ರೀನಿವಾಸಪುರದಲ್ಲಿ 2, ಚಿಂತಾಮಣಿಯಲ್ಲಿ 1 ಸ್ಥಾನಗಳಲ್ಲಿ ಸ್ಪರ್ಧಿಸಲಾಗುತ್ತಿದೆ.

'ಮಾತು ಕೇಳದ ಸೊಸೆಯು ತಾನೇಕೆ?'

ಪುಟ 11 ರಿಂದ

ಶಾಪ ಹಾಕದೆ ಬಿಡೋಲ್ಲ. ಅದಕ್ಕೆ ಮೋಕ್ಷವೇ ಸಿಗೋಲ್ಲ. ಇಂತಹ ಪಾಪದ ಕಾರ್ಯಕ್ಕೆ ಮಹಿಳೆಯರು ಕೈಹಾಕಬಾರದು ಎಂದರು. ಮತ್ತೊಬ್ಬ ಮನಃಶಾಸ್ತ್ರಜ್ಞೆ "ಮಹಿಳೆಯಲ್ಲಿ ಕೀಳರಿಮೆ ಇರುವುದರಿಂದಲೇ ಸ್ತ್ರೀ ಭ್ರೂಣಹತ್ಯೆ ನಡೆಯುತ್ತೆ. ಕೀಳರಿಮೆ ಬಿಟ್ಟು ವಿಶ್ವಾಸದೊಂದಿಗೆ ಹೆಣ್ಣು ಮಗುವಿಗೆ ಜನ್ಮ ನೀಡಬೇಕು" ಎಂದರು. ಹೀಗೆಯೇ ಇನ್ನೊಬ್ಬ ಮಹಿಳಾ ಡಾಕ್ಟರ್ ಹೇಳಿದರು "ವೈದ್ಯರದ್ದು ಏನೂ ತಪ್ಪಿಲ್ಲ. ಮಹಿಳೆಯರು ಕೇಳೋದ್ರಿಂದ ಅಭಾರ್ಷನ್ ಮಾಡ್ತೀವಿ. ಇಲ್ಲಾಂದ್ರೆ ಯಾಕೆ ಮಾಡ್ತೀವಿ?" ಅಂತ್ಹೇಳಿ ತಾವು ಬಚಾವಾಗಿ ಮಹಿಳೆಯರನ್ನು ಹೊಣೆ ಮಾಡಿದರು.

20 ಸಂಪನ್ಮೂಲ ವ್ಯಕ್ತಿಗಳ ಪೈಕಿ ಕೆ.ಎಸ್.ವಿಮಲಾ, ಡಾ.ವಜನಾ, ಎಸ್.ವಿ.ಪ್ರಭಾವತಿ, ಡಾ.ಪದ್ಮಿನಿ ಉತ್ತಮ ವಿಚಾರಗಳನ್ನು ಮಂಡಿಸಿದರು. ಪುರುಷ ಪ್ರಧಾನ ಮೌಲ್ಯಗಳು ಬದುಕಿನ ಅಭದ್ರತೆ, ಜಾಗತೀಕರಣ ಸ್ತ್ರೀ ಭ್ರೂಣಹತ್ಯೆಯನ್ನು ಪುಷ್ಟೀಕರಿಸುತ್ತಿರುವ ಬಗ್ಗೆ ಮಹಿಳೆಯರ, ಮಾಧ್ಯಮದ ಗಮನ ಸೆಳೆದರು. ಕನಿಷ್ಟ ಚರ್ಚೆಗಳ ನಂತರವಾದರೂ ಸ್ತ್ರೀಭ್ರೂಣಹತ್ಯೆ ತಡೆಯಲು ಮುಂದಿನ ಕಾರ್ಯಯೋಜನೆಯಾಗಲಿ, ಬೇಡಿಕೆಗಳಾಗಲೀ ಹೊರಹೊಮ್ಮಲಿಲ್ಲ. ಅಂತಹ ದೃಢತೆಯಾಗಲೀ, ಇಚ್ಛಾಶಕ್ತಿಯೂ ಕಾಣಲಿಲ್ಲ. ಆಯೋಗದಿಂದ ನಡೆದ ಕಾರ್ಯಕ್ರಮವಷ್ಟೇ ಅಲ್ಲ. ಹಿಂದೆ ನಡೆದ "ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ" ಕುರಿತ ಕಾರ್ಯಕ್ರಮವೂ ಸ್ಪಷ್ಟ ಮಹಿಳಾಪರ ಕಣ್ಣೋಟದ ಕೊರತೆ ಎದುರಿಸಿತ್ತು. ಮಹಿಳೆಯರ ಮೇಲಿನ ದೌರ್ಜನ್ಯ ಇತ್ಯಾದಿ ಹಲವು ಪ್ರಕರಣಗಳಲ್ಲಿ ಮಿಂಚಿನಂತೆ ಕಾಣಿಸಿಕೊಳ್ಳುವ ಪ್ರಮಿಳಾ ನೇಸರ್ಗಿಯದ್ದು ಏಕವ್ಯಕ್ತಿ ಪ್ರದರ್ಶನ. ಇಲ್ಲಿಯವರೆಗೆ ರಾಜ್ಯ ಮಹಿಳಾ ಆಯೋಗದ ಸಮಿತಿಯನ್ನು ಪುನರ್ರಚಿಸಲಾಗಲಿಲ್ಲ. ಆನೆ ನಡೆದದ್ದೇ ದಾರಿಯಾಗಿದೆ. ಆದರೆ ಅದು ಕೋಮುವಾದದೆಡೆಗೆ, ಮನುವಾದದೆಡೆಗೆ ಎಂಬುವ ಅಪಾಯವನ್ನು ಅರ್ಥ ಮಾಡಿಕೊಳ್ಳಬೇಕಿದೆ.


ಈ ಹಿನ್ನೆಲೆಯಲ್ಲಿ ರಾಜ್ಯ ಮಹಿಳಾ ಆಯೋಗ ಜಾತ್ಯಾತೀತ ತತ್ವದ ನೆಲೆಯಲ್ಲಿ ಕಾರ್ಯಾಚರಣೆ ಮಾಡಬೇಕು. ಆಯೋಗವನ್ನು ಪ್ರಜಾಪ್ರಭುತ್ವೀಕರಣಗೊಳಿಸಬೇಕು. ಕಾರ್ಯಾಚರಣೆಯನ್ನು ವಿಕೇಂದ್ರೀಕರಿಸಬೇಕು. ಆಯೋಗದಲ್ಲಿ ಮಹಿಳಾ ಸಂಘಟನೆಗಳ ಪ್ರಾತಿನಿಧ್ಯವಿರಬಕೆಂಬ ನಿಲುವುಗಳೊಂದಿಗೆ, ಸರ್ಕಾರದ ಮೇಲೆ ಒತ್ತಡ ಹೇರಲು ನಗರದ ಎಲ್ಲಾ ಮಹಿಳಾ ಸಂಘಟನೆಗಳ ಜಂಟಿ ಕಾರ್ಯಕ್ರಮ ರೂಪುರೇಷೆಗಳು ಸಿದ್ಧಗೊಳ್ಳುತ್ತಿವೆ. ○

ಜಗದಗಲ

ಶರತ್‌ಚಂದ್ರ

ಅಕ್ಟೋಬರ್ 6 ರಂದು ಪಾಕಿಸ್ತಾನದಲ್ಲಿ ಅಧ್ಯಕ್ಷೀಯ ಚುನಾವಣೆ

ಪಾಕಿಸ್ತಾನದಲ್ಲಿ ಕಳೆದ ದಿನಗಳಲ್ಲಿ ನಾಟಕೀಯ ಬೆಳವಣಿಗೆಗಳು ಆಗಿದ್ದು, ಕೊನೆಗೂ ಅಧ್ಯಕ್ಷೀಯ ಚುನಾವಣೆ ಅಕ್ಟೋಬರ್ 6 ರಂದು ನಡೆಯಲಿದೆ. ನವಾಜ್ ಶರೀಫರು ಪಾಕಿಸ್ತಾನಕ್ಕೆ ಕಾಲಿಡುತ್ತಿದ್ದಂತೆ, ಅವರನ್ನು ಬಂಧಿಸಿ ಸೌದಿ ಅರೇಬಿಯಾಕ್ಕೆ ಗಡಿಪಾರು ಮಾಡುವ ಆಕ್ರಾಮಕ ಕ್ರಮವನ್ನು ಮುಶರಫ್ ಸರ್ಕಾರ ಕೈಗೊಂಡಿದೆ. ಶರೀಫರ ಮುಸ್ಲಿಂ ಲೀಗ್ ಪಕ್ಷವನ್ನು ಎದುರು ಹಾಕಿಕೊಳ್ಳುವ ರಾಜಕೀಯ ನಿರ್ಧಾರ ತೆಗೆದುಕೊಂಡಿದೆ. ಇನ್ನೊಂದು ಕಡೆ ಬೆನಜೀರ್ ಜತೆ ಗುಪ್ತ ಮಾತುಕತೆ ಮುಂದುವರೆದಿದೆ.



ಮುಶರಫ್ ಅಧ್ಯಕ್ಷರಾಗಿ ಚುನಾಯಿತರಾಗಲು ಬೆಂಬಲಕ್ಕೆ ಬದಲಾಗಿ - ವಾಪಸು ಬಂದು ಪುನಃ ರಾಜಕೀಯದಲ್ಲಿ ಭಾಗವಹಿಸಲು ಅನುವು ಮಾಡುವ, ಪುನಃ ಪ್ರಧಾನಿಯಾಗಲು ಕಾನೂನಿನ ಅಡಚಣೆ ನಿವಾರಿಸುವ, ತಮ್ಮ ಕುಟುಂಬದವರ ಮೇಲಿರುವ ಎಲ್ಲಾ ಕೇಸುಗಳನ್ನು ವಾಪಸು ಪಡೆಯುವ - ಆಶ್ವಾಸನೆ ಪಡೆಯಲು ಬೆನಜಿರ್ ಒತ್ತಡ ಹೇರಿದ್ದಾರೆ ಎನ್ನಲಾಗಿದೆ. ಅವರು ಅಕ್ಟೋಬರ್ 18 ರಂದು ಪಾಕಿಸ್ತಾನಕ್ಕೆ ವಾಪಸಾಗುವ ಘೋಷಣೆ ಮಾಡಿದ್ದಾರೆ.

ಈ ನಡುವೆ ಚುನಾವಣೆ ಕಮೀಶನ್ ಸೇನಾ ಮುಖ್ಯಸ್ಥರಾಗಿದ್ದಂತೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಕ್ಕೆ ಅವಕಾಶ ಮಾಡುವ ನಿಯಮಗಳ ಬದಲಾವಣೆ ಮಾಡಿದೆ. ಅದನ್ನು ಕಾನೂನು-ಸಂವಿಧಾನ ವಿರೋಧಿ ಎಂದು ವಜಾ ಮಾಡಲು ಕೋರಿದ ಹಲವು ಅರ್ಜಿಗಳು ಸುಪ್ರೀಂ ಕೋರ್ಟಿನ ಮುಂದಿದೆ. ಅಧ್ಯಕ್ಷರಾಗಿ ಚುನಾಯಿತರಾದ ನಂತರ ಜನರಲ್ ಪದವಿ ಬಿಟ್ಟು ಕೊಡುವುದಾಗಿ ಮುಶರಫ್ ಸುಪ್ರೀಂ ಕೋರ್ಟಿಗೆ ಆಶ್ವಾಸನೆ ಕೊಟ್ಟಿದ್ದಾರೆ. ಎಲ್ಲಾ ವಿರೋಧ ಪಕ್ಷಗಳು ಸೇರಿರುವ 'ಪ್ರಜಾಪ್ರಭುತ್ವಕ್ಕಾಗಿ ಸರ್ವ ಪಕ್ಷ ಚಳುವಳಿ' (ಎ.ಪಿ.ಡಿ.ಪಿ.) ಮುಶರಫ್ ಸ್ಪರ್ಧೆ ವಿರುದ್ಧ ತೀವ್ರ ಚಳುವಳಿ ಆರಂಭಿಸಿದೆ. ಬೆನಜೀರ್ ಪಕ್ಷ ಸಹ ಈ ಚಳುವಳಿ ಸೇರುವ ಬೆದರಿಕೆ ಹಾಕಿದೆ.

ಮುಶರಫ್ ಸ್ಪರ್ಧೆ ಮಾಡಿದರೆ ಎಲ್ಲಾ ರಾಜ್ಯ-ಕೇಂದ್ರ ಚುನಾಯಿತ ಸಭೆಗಳಿಂದ ಸಾಮೂಹಿಕ ರಾಜೀನಾಮೆ ಕೊಡುವ ಬೆದರಿಕೆಯನ್ನೂ ಎ.ಪಿ.ಡಿ.ಪಿ. ಹಾಕಿದೆ. ಕೆಲವು ರಾಜ್ಯಗಳಲ್ಲಿ ಈ ವಿರೋಧ ಪಕ್ಷಗಳೇ ಇಡೀ ವಿಧಾನಸಭೆಯಲ್ಲಿವೆ. ಅಂಥಲ್ಲಿ ಈ ಕ್ರಮದಿಂದ ವಿಧಾನಸಭೆಯೇ ವಿಸರ್ಜನೆಯಾಗಬಹುದು. ಅಧ್ಯಕ್ಷೀಯ ಚುನಾವಣೆಯ ಮತದಾರ ವಿಭಾಗವೇ ಪೂರ್ಣವಾಗಿಲ್ಲ. ಆದ್ದರಿಂದ ಚುನಾವಣೆ ನಡೆಯುವಂತಿಲ್ಲ ಎಂಬ ಕಾನೂನು ಅಡಚಣೆ ಬರಬಹುದು. ಅಥವಾ ಕನಿಷ್ಟ ಚುನಾವಣೆಯ ವಿಶ್ವಾಸಾರ್ಹತೆಗೆ ಏಟು ಬೀಳಬಹುದು. ಆದರೆ ಎ.ಪಿ.ಡಿ.ಪಿ. ಯ ಕೆಲವು ಪಕ್ಷಗಳಾದರೂ ಮುಶರಫ್ ಅಥವಾ ಅಮೆರಿಕನ್ ಒತ್ತಡಕ್ಕೆ ಮಣಿದು ಕೊನೆ ಗಳಿಗೆಯಲ್ಲಿ ಹಿಂದೇಟು ಹೊಡೆಯುವ ಸ್ಪಷ್ಟ ಸಾಧ್ಯತೆ ಕಂಡು ಬರುತ್ತಿದೆ. ಎ.ಪಿ.ಡಿ.ಪಿ.ಯ ಭಾಗವಾಗಿರುವ ಜಮಾತೇ ನಾಯಕ ಆಗಲೇ ಇಂತಹ ಅಪಸ್ವರ ಎತ್ತಿದ್ದಾರೆ. ಆದರೆ ವಕೀಲರ ನಾಯಕತ್ವದ ಚಳುವಳಿಗೆ ಪ್ರಬಲ ಜನ ಬೆಂಬಲವಿದ್ದು, ಮಿಲಿಟರಿ ಸರ್ವಾಧಿಕಾರ ಮುಂದುವರೆಸುವ ಮುಶರಫ್-ಅಮೆರಿಕನ್ ಹಳೆ ತಂತ್ರಗಳು ಫಲಿಸದೆ ಹೋಗಬಹುದು.

ವೆನೆಜುವೆಲಾದ ಕೊಳಗೇರಿಗಳಲ್ಲಿ ಶಾಸ್ತ್ರೀಯ ಸಂಗೀತದ ಗುಂಗು

ವೆನೆಜುವೆಲಾದ ಬಗ್ಗೆ ಯಾವಾಗಲೂ ಕೆಟ್ಟ-ದುರಂತದ ಸುದ್ದಿ ಕೊಡುವ ಪಾಶ್ಚಿಮಾತ್ಯ ಪೇಪರ್-ಟೀವಿಗಳಲ್ಲೂ ಚವೇಝರ ಹೊಸ ಕಾರ್ಯಕ್ರಮವನ್ನು ಪುಳಕ ತರುವ ರೀತಿಯಲ್ಲಿ ಬಿಂಬಿಸಲಾಗಿದೆ. ಅದು ವೆನೆಜುವೆಲಾದ ಕೊಳೆಗೇರಿಗಳಲ್ಲಿ ಈಗಾಗಲೇ ಇರುವ ಶಾಸ್ತ್ರೀಯ ಸಂಗೀತದ ಗುಂಗು ಇನ್ನಷ್ಟು ವ್ಯಾಪಕಗೊಳಿಸುವ 'ಮ್ಯೂಸಿಕಾ ಮಿಶನ್' (ಸಂಗೀತ ಮಿಶನ್) ಎಂಬ ಕಾರ್ಯಕ್ರಮದ ಘೋಷಣೆ. ಇತ್ತೀಚೆಗೆ ತನ್ನ ಮೊದಲ ಪ್ರಮುಖ ಅಂತರ್ರಾಷ್ಟ್ರೀಯ ಸಂಗೀತ ಕಚೇರಿ ಯಾತ್ರೆಯಲ್ಲಿ 'ಸೈಮನ್ ಬೊಲಿವರ್ ಯುತ್ ಆರ್ಕೆಸ್ಟ್ರಾ' ಅಪಾರ ಜನಪ್ರಿಯತೆ ಗಳಿಸಿ ಸುದ್ದಿ ಮಾಡಿತ್ತು. ಲಂಡನ್ ನ ರಾಯಲ್ ಅಲ್ಬರ್ಟ ಹಾಲ್ ನ ಕಚೇರಿ ಯಂತೂ ಭಾರೀ ಸುದ್ದಿಯಾಯಿತು.

ಈ ಆರ್ಕೆಸ್ಟ್ರಾ ನಿನ್ನೆ ಮೊನ್ನೆಯದಲ್ಲ. 32 ವರ್ಷಗಳ ಹಿಂದೆ ಜೋಸ್ ಅಂಟೋನಿ ಅಬ್ರೆಯು ಎಂಬಾತ ಕ್ಯಾರಕಾಸ್ ನ(ವೆನೆಜುವೆಲಾದ ರಾಜಧಾನಿ) ಕೊಳೆಗೇರಿಗಳಲ್ಲಿ ಕೆಲವು ಮಕ್ಕಳಿಗೆ



ಸಂಗೀತ ಪಾಠ ಹೇಳುವುದರ ಜತೆ ಆರಂಭವಾಗಿತ್ತು. ಈ ಪ್ರಯತ್ನ ಆ ನಂತರದ ವರ್ಷಗಳಲ್ಲಿ ಚಳುವಳಿಯ ರೂಪ ಪಡೆದು ಕ್ಯಾರಕಾಸ್ ಮಾತ್ರವಲ್ಲ, ದೇಶದ ಎಲ್ಲಾ ಮೂಲೆಯ ನಗರ-ಪಟ್ಟಣಗಳಿಗೆ ಮುಟ್ಟಿತು. ಮಕ್ಕಳೂ, ಅವರ ಪಾಲಕರೂ ಉತ್ಸಾಹದಿಂದ ಈ ಚಳುವಳಿಯಲ್ಲಿ ಭಾಗವಹಿಸಿದರು. ಬಡತನದಿಂದ ಮಕ್ಕಳು ಸಾಂಸ್ಕೃತಿಕ ಅಧಃ ಪತನ ಮತ್ತು ಅಪರಾಧದೆಡೆಗೆ ತಳ್ಳಲ್ಪಡುವ ಭಯಾನಕ ಸ್ಥಿತಿಯಿಂದ ಬಿಡುಗಡೆಯ ಹಾದಿಯಾಗಿ ಈ ಸಂಗೀತ ತರಗತಿಗಳು ಅವರಿಗೆ ಕಂಡಿರಬೇಕು. ಈಗಾಗಲೇ ಸುಮಾರು ಮೂರು ಲಕ್ಷ ಮಕ್ಕಳು ಈ ಚಳುವಳಿಯ ಭಾಗವಾಗಿದ್ದಾರೆ. ಈ ಆರ್ಕೆಸ್ಟ್ರಾದ ಗರಡಿಯಲ್ಲಿ ತಯಾರಾದ ಗುಸ್ತಾವೋ ದುಡಾಮೆಲ್



ಈಗ ಅದರ ಸಾರಥ್ಯ ವಹಿಸಿದ್ದು, ಲಾಸ್ ಎಂಜಲೀಸ್ ಸಂಗೀತ ಮಂಡಳಿ ಆತನಿಗೆ ಆಹ್ವಾನ ನೀಡಿದೆ.

ಚವೇಝ್ ಘೋಷಿಸಿದ ಮಿಶನ್ ಈ ಕಾರ್ಯಕ್ರಮಕ್ಕೆ ಸರಕಾರದ ಸಂಪನ್ಮೂಲದ (ಸುಮಾರು ಎರಡುವರೆ ಕೋಟಿ ಡಾಲರು) ಬೆಂಬಲ ನೀಡುತ್ತದೆ. ವೆನೆಜುವೆಲಾದ ವ್ಯಾಪಕ ಪ್ರಜಾಪ್ರಭುತ್ವೀಕರಣದ ಮುಖ್ಯ ವಾಹಕಗಳಾದ 'ಸಮುದಾಯ ಮಂಡಳಿ'ಗಳು ತಮ್ಮ ವ್ಯಾಪ್ತಿಯಲ್ಲಿ ಆರ್ಕೆಸ್ಟ್ರಾದ ಘಟಕ ಮತ್ತು ತರಗತಿ ನಡೆಸಲಿವೆ. ವೆನೆಜುವೆಲಾದ ಬಡವರು ತಮ್ಮ ಬಡತನದ ವಿರುದ್ಧ ನಡೆಸಿದ ಸಮಗ್ರ ಹೋರಾಟದ ಭಾಗ 'ಸೈಮನ್ ಬೊಲಿವರ್ ಯುತ್ ಆರ್ಕೆಸ್ಟ್ರಾ'. 'ಮ್ಯೂಸಿಕಾ ಮಿಶನ್' ಅದನ್ನು ವೆನೆಜುವೆಲಾದಲ್ಲಿ ಕಲೆ ಮತ್ತು ಸಂಸ್ಕೃತಿಯ ಸುವರ್ಣ ಅಧ್ಯಾಯ ಆರಂಭಿಸುವತ್ತ ಒಯ್ಯುವ, ಜಗತ್ತಿನಲ್ಲೇ ಮಾದರಿ ಸಾಂಸ್ಕೃತಿಕ ಕಾರ್ಯಕ್ರಮವಾಗಿಸುವ ಉದ್ದೇಶ ಹೊಂದಿದೆ. ಬಡವರು ಸಂಪೂರ್ಣ ಮಾನವರಾಗಿ ತಮ್ಮ ಪೂರ್ಣ ಸಾಧ್ಯತೆ ಸಾಕಾರಗೊಳಿಸುವ ಹೋರಾಟಕ್ಕೆ ಬೆಂಬಲ ನೀಡುತ್ತದೆ ಎಂದು ಚವೇಝ್ ಹೇಳಿದ್ದಾರೆ. ಲ್ಯಾಟಿನ್ ಅಮೆರಿಕದ ಇತರ ಹಲವು ದೇಶಗಳಲ್ಲಿ ಇಂತಹ ಚಳುವಳಿ-ಕಾರ್ಯಕ್ರಮ ಆರಂಭಿಸುವ ಪ್ರಕ್ರಿಯೆ ಸಹ ಆರಂಭವಾಗಿದೆ. 'ಸೈಮನ್ ಬೊಲಿವರ್ ಯುತ್ ಆರ್ಕೆಸ್ಟ್ರಾ' ದ ಸಂಗೀತದ ಗುಂಗು ಎಲ್ಲೆಡೆ ಹರಡಲಿ.

ನೇಪಾಳ ಸರ್ಕಾರದಿಂದ ಹೊರನಡೆದ ಮಾವೋವಾದಿಗಳು

ಕಳೆದ ಐದು ತಿಂಗಳುಗಳ ಕಾಲ ನೇಪಾಳವನ್ನು ಆಳಿದ ಸಮ್ಮಿಶ್ರ ಸರಕಾರದಿಂದ ಮಾವೋವಾದಿಗಳು ಹೊರ ಬಂದಿದ್ದು ಹೊಸ ರಾಜಕೀಯ ಬಿಕ್ಕಟ್ಟು ಉಂಟಾಗಿದೆ. ಮಾವೋವಾದಿಗಳು ನೇಪಾಳದಲ್ಲಿ ರಾಜಸತ್ತೆ ಕೊನೆಗೊಳಿಸಿ, ದೇಶವನ್ನು ಗಣರಾಜ್ಯವೆಂದು ಈಗಲೇ ಘೋಷಿಸಬೇಕೆಂದು ಒತ್ತಾಯಿಸುತ್ತಿದ್ದು, ಸೆಪ್ಟೆಂಬರ್ 17 ರ ವರೆಗೆ ಗಡುವು ನೀಡಿತ್ತು. ಏಳು ಪಕ್ಷಗಳ ಕೂಟ ಇದಕ್ಕೆ ಒಪ್ಪದ್ದರಿಂದ ಈ ಕ್ರಮ ಕೈಗೊಂಡಿದ್ದಾರೆ. ರಾಜನ ಸರ್ವಾಧಿಕಾರ ಮತ್ತು ನಿರಂಕುಶ ಆಡಳಿತ ಕೊನೆಗೊಳಿಸಿದ ಕೂಟದ ಇತರ ಏಳು ಪಕ್ಷಗಳ ಬಹುಮತದ ಅಭಿಪ್ರಾಯ - ಈ ಪ್ರಶ್ನೆಯನ್ನು ಚುನಾಯಿತ ಸಂವಿಧಾನ ಸಭೆ ನಿರ್ಧರಿಸಬೇಕು. ರಾಜ ಯಾವುದೇ ವಿಶೇಷ ಅಧಿಕಾರ ಇಲ್ಲದ ಔಪಚಾರಿಕ ಸರಕಾರದ ಮುಖ್ಯಸ್ಥನಾಗಿರಬಹುದೇ ಅಂತ. ಆದರೆ ಈ ಭಿನ್ನಾಭಿಪ್ರಾಯದ ಅರ್ಥ ಶಾಂತಿ ಒಪ್ಪಂದ ಕೊನೆಗೊಂಡಿದೆ ಎಂದಲ್ಲ ಎಂದು ಮಾವೋವಾದಿಗಳು ಮತ್ತು ಏಳು ಪಕ್ಷಗಳ ಕೂಟ ಇವೆರಡೂ ಸ್ಪಷ್ಟಪಡಿಸಿದೆ. ತಾವು ಸಶಸ್ತ್ರ ಹೋರಾಟಕ್ಕೆ ಮರಳುವುದಿಲ್ಲ. ಇದಕ್ಕಾಗಿ ಜನಜಾಗೃತಿಯ ಚಳುವಳಿ ಮಾಡುತ್ತೇವೆ. ಚುನಾವಣಾ ಕಮೀಶನ್ ಘೋಷಿಸಿರುವ ಚುನಾವಣಾ ವೇಳಾಪಟ್ಟಿ ಮತ್ತು ನೀತಿ ಸಂಹಿತೆ ಒಪ್ಪಲರ್ಹವಲ್ಲ ಎಂದೂ ಮಾವೋವಾದಿಗಳು ಹೇಳಿದ್ದಾರೆ. ಈ ನಡುವೆ ಮಾವೋವಾದಿಗಳು ಮತ್ತು ಏಳು ಪಕ್ಷಗಳ ಕೂಟ ನಡುವೆ ಸಂಧಾನ ನಡೆದಿದೆ ಎನ್ನಲಾಗಿದೆ.


○

ರಶ್ಯಾದಿಂದ ಅತೀ ಪ್ರಬಲ ಪರಮಾಣು ಅಲ್ಲದ ಬಾಂಬು ಪರೀಕ್ಷಣೆ

ರಶ್ಯಾ ಪರಮಾಣು-ಅಲ್ಲದ ಬಾಂಬುಗಳಲ್ಲೇ ಅತೀ ಪ್ರಬಲ ಬಾಂಬಿನ ಸಫಲ ಪರೀಕ್ಷಣೆ ನಡೆಸಿರುವುದಾಗಿ ಘೋಷಿಸಿದೆ. ಅಮೆರಿಕದ ಅತ್ಯಂತ ಪರಮಾಣು-ಅಲ್ಲದ ಬಾಂಬಿಗಿಂತ ನಾಲ್ಕು ಪಟ್ಟು ಹೆಚ್ಚು ವಿನಾಶ ಶಕ್ತಿ ಈ ಹೊಸ ಬಾಂಬಿಗೆ ಇದೆ. ವಾತಾವರಣದಲ್ಲಿರುವ ಆಕ್ಸಿಜನ್ ಅನ್ನು ಉರಿಯುವುದಕ್ಕೆ ಬಳಸಿ, ಬಾಂಬ್ ಪ್ರಯೋಗ ಮಾಡಿದ ಪ್ರದೇಶದಲ್ಲಿ ನಿರ್ವಾತ ಉಂಟು ಮಾಡುವ ಮೂಲಕ ಪ್ರಬಲ ವಿನಾಶ ಶಕ್ತಿ ಹೊಂದಿರುವುದು ಇದರ ವಿಶೇಷ. ಅಮೆರಿಕ ಹೊಂದಿರುವ ಯುದ್ಧ ಪ್ರದೇಶಗಳಲ್ಲಿ ಬಳಸುವ ಚಿಕ್ಕ ಪರಮಾಣು ಬಾಂಬುಗಳಿಗಿಂತ ಇದು ಹೆಚ್ಚು ಪ್ರಬಲ.

ರಶ್ಯಾ ಅಂತರ್ರಾಷ್ಟ್ರೀಯ ವಿಷಯಗಳಲ್ಲಿ - ಅಮೆರಿಕದ ಬಾಲಬಡುಕವಾಗಿರುವ ಅಥವಾ ಅದರ ಆಕ್ರಮಣವನ್ನು ಬಾಯಿ ಮುಚ್ಚಿ ಸಹಿಸುವ ಕಾಲ ಹೋಗಿ - ಸವಾಲು ಹಾಕುವ ಹೊಸ ನೀತಿಯ ಹಿನ್ನೆಲೆಯಲ್ಲಿ ಇದು ಗಮನಾರ್ಹ ಬೆಳವಣಿಗೆ. ಅಮೆರಿಕ ಶಸ್ತ್ರಾಸ್ತ್ರ ಕಡಿತ ಅಥವಾ ಮಿತಿಗೊಳಿಸುವ ಒಪ್ಪಂದಗಳನ್ನು ಉಲ್ಲಂಘಿಸುವ ಅಥವಾ ಜಾರಿ ಮಾಡದಿರುವಾಗ ರಶ್ಯಾ ಸಹ ಅದಕ್ಕೆ ಬದ್ಧವಾಗಿರುವುದಿಲ್ಲ ಎಂದಿದೆ. ಪೂರ್ವ ಯುರೋಪಿನಲ್ಲಿ ರಶ್ಯಾದ ಗಡಿಯ ಹತ್ತಿರ ಕ್ಷಿಪಣಿಯಿಂದ ರಕ್ಷಣೆಯ ಹೆಸರಲ್ಲಿ, ಅದರ ರಕ್ಷಣೆಗೆ ಬೆದರಿಕೆ ಹಾಕುತ್ತಿರುವ ಹಿನ್ನೆಲೆಯಲ್ಲಿ ಪುಟಿನ್ ನಾಯಕತ್ವದ ರಶ್ಯಾ ಅಮೆರಿಕಕ್ಕೆ ಸವಾಲು ಹಾಕಲು ನಿರ್ಧರಿಸಿದೆ. ಆರ್ಥಿಕವಾಗಿಯೂ ರಶ್ಯಾ ಚೇತರಿಸಿಕೊಳ್ಳುತ್ತಿದ್ದು ಎಲ್ಲಾ ಕ್ಷೇತ್ರಗಳಲ್ಲಿ ಅಮೆರಿಕದ ಅಧಿಪತ್ಯಕ್ಕೆ ಸವಾಲು ಎಸೆಯುತ್ತಿದೆ.


ಯಾವ ದೇಶ ಮಾಡಿದರೂ ಹೊಸ ಮಾರ ಅಸ್ತ್ರಗಳ ಬೆಳವಣಿಗೆ, ಪ್ರಸರಣ ಸಕಾರಾತ್ಮ ಬೆಳವಣಿಗೆ ಅಲ್ಲ. ಆದರೆ ಇಡೀ ಜಗತ್ತಿನ ಮೇಲೆ ಯುದ್ಧದ ಭೀತಿ ಹೇರುತ್ತಿರುವ ಅಮೆರಿಕದ ಏಕಮಾತ್ರ ಸೂಪರ್ ಪವರ್ ಗಿರಿಗೆ ಪ್ರತಿರೋಧದ ತುರ್ತಿ ಅಗತ್ಯದ ಹಿನ್ನೆಲೆಯಲ್ಲಿ ಇದು ಸಕಾರಾತ್ಮ ಬೆಳವಣಿಗೆ ಎನ್ನಬಹುದು. ಮಾಜೀ ಸೋವಿಯತ್ ಒಕ್ಕೂಟದ ಅಣ್ವಸ್ತ್ರ ಕ್ಷಮತೆ, ಅಮೆರಿಕನ್ ಸಾಮ್ರಾಜ್ಯಶಾಹಿಯ ಆಕ್ರಮಣಗಳಿಗೆ ಕಡಿವಾಣ ಹಾಕಿ ಹಲವು ದಶಕಗಳ ಕಾಲ ವಿಶ್ವ ಶಾಂತಿ ಕಾಪಾಡಿತ್ತು ಎಂದು ಇಲ್ಲಿ ನೆನೆಸಿಕೊಳ್ಳಬಹುದು!



ಜಲ ವಿದ್ಯುತ್ ಉತ್ಪಾದನೆ

ಜಯ

ಜಲ ವಿದ್ಯುತ್ ವಿಶ್ವದ ವಿದ್ಯುತ್ ಉತ್ಪಾದನೆಯಲ್ಲಿ ಶೇ. 19ರಷ್ಟು ಪಾಲನ್ನು ಹೊಂದಿದೆ. ಇಲ್ಲಿ ಒಂದೆಡೆ ತಂಗಿಸಿದ ನೀರು ತನ್ನ ಪ್ರಚ್ಛನ್ನ ಶಕ್ತಿ (Potential energy) ಯಿಂದ ಟರ್ಬೈನ್ ಮತ್ತು ಜನರೇಟರ್‌ನ್ನು ಚಲಿಸುವಂತೆ ಮಾಡುವುದರಿಂದ ವಿದ್ಯುತ್ ಉತ್ಪಾದನೆಯಾಗುತ್ತದೆ.




ನೀರಿನ ಗಾತ್ರದ ಮೇಲೆ ಮತ್ತು ನೀರು ತಂಗಿರುವ ಎತ್ತರ ಮತ್ತು ಅದು ಹೊರಹರಿಯುವ ಮಟ್ಟ, ಇವೆರಡರ ನಡುವಿರುವ ಎತ್ತರದ ಮೇಲೆ ನೀರಿನಲ್ಲಿರುವ ಶಕ್ತಿಯನ್ನು ಬಳಸಿಕೊಳ್ಳಬಹುದಾಗಿದೆ. ಇವುಗಳ ನಡುವಿನ ಎತ್ತರವನ್ನು ವರಾತ (Head) ಎಂದು ಕರೆಯಲಾಗುತ್ತದೆ. ನೀರಿನ ಪ್ರಚ್ಛನ್ನ ಶಕ್ತಿಯು ಈ ವರಾತದ ಮೇಲೆ ಅವಲಂಬಿತವಾಗಿದೆ. ಹೆಚ್ಚಿನ ಪ್ರಚ್ಛನ್ನ ಶಕ್ತಿಯನ್ನು ಉಂಟುಮಾಡಲು ನೀರನ್ನು ದೊಡ್ಡ ಕೊಳವೆಗಳಲ್ಲಿ ಟರ್ಬೈನ್‌ಗಳ ಮೇಲೆ ಹಾಯಿಸಲಾಗುತ್ತದೆ. ಇಂತಹ ಕೊಳವೆಗಳನ್ನು ಪೆನ್‌ಸ್ಟಾಕ್ ಎಂದು ಕರೆಯಲಾಗುತ್ತದೆ. ಪೆನ್‌ಸ್ಟಾಕ್‌ಗಳು ನೀರನ್ನು ನಿಯಂತ್ರಿಸುವ ಪ್ರವೇಶದ್ವಾರಗಳಂತೆ ಕೆಲಸ ಮಾಡುತ್ತಾ ಅತಿ ಹೆಚ್ಚು ಒತ್ತಡ ಮತ್ತು ವೇಗದಿಂದ ನೀರನ್ನು ಟರ್ಬೈನ್‌ಗಳ ಮೇಲೆ ಹಾಯಿಸುತ್ತವೆ. ಟರ್ಬೈನ್ ವೇಗದಿಂದ ತಿರುಗಲಾರಂಭಿಸಿದಾಗ ಅದಕ್ಕೆ ಸಂಪರ್ಕ ಹೊಂದಿರುವ ಜನರೇಟರ್, ಟರ್ಬೈನಿನ ಚಲನ ಶಕ್ತಿಯನ್ನು ವಿದ್ಯುತ್‌ಶಕ್ತಿಯನ್ನಾಗಿ ಪರಿವರ್ತಿಸುತ್ತದೆ.




ವಿದ್ಯುತ್‌ನ್ನು ವಿವಿಧ ಪ್ರದೇಶಗಳ ವಿದ್ಯುತ್ ಜಾಲಗಳಿಗೆ ಹಾಯಿಸಿ ವಿತರಿಸಲಾಗುತ್ತದೆ. ವಿಶ್ವದ ಶೇ. 50ರಷ್ಟು ಸಣ್ಣ ಜಲ ವಿದ್ಯುತ್ ಸ್ಥಾವರಗಳು ಚೀನಾದಲ್ಲಿವೆ.

ಇತರೆ ವಿಧಾನಗಳಿಗೆ ಹೋಲಿಸಿದಲ್ಲಿ, ಜಲ ವಿದ್ಯುತ್ ಉತ್ಪಾದನಾ ವಿಧಾನದಲ್ಲಿ ಹೆಚ್ಚಿನ ಪರಿಸರ ಮಾಲಿನ್ಯ ಉಂಟಾಗುವುದಿಲ್ಲ. ಕೆಲಮಟ್ಟಿಗೆ ಜಲ ಜೀವಿ ಪರಿಸರಕ್ಕೆ ಹಾನಿಯಾಗುತ್ತದೆ. ಹಾಗೂ ಜನರ ಸ್ಥಳಾಂತರ ಮತ್ತು ಪುನರ್ವಸತಿಯಂತಹ ಸಮಸ್ಯೆಗಳಿಗೆ ಅಗತ್ಯ ಯೋಜನೆ ರೂಪಿಸಬೇಕಷ್ಟೆ. ಸಣ್ಣ ಸಣ್ಣ ಜಲ ವಿದ್ಯುತ್ ಯೋಜನೆಗಳಿಂದ ಅಷ್ಟೇನೂ ಹೆಚ್ಚಿನ ಸಮಸ್ಯೆಗಳಿಲ್ಲ.

ಸದ್ಯಕ್ಕೆ ಭಾರತದಲ್ಲಿ 1,43,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಇದರಲ್ಲಿ ಸುಮಾರು 85,585 ಮೆಗಾವ್ಯಾಟ್‌ನಷ್ಟು ಉಷ್ಣ ಸ್ಥಾವರಗಳಿಂದ ಉತ್ಪತ್ತಿಯಾಗುತ್ತಿದ್ದರೆ, 34,565 ಮೆಗಾವ್ಯಾಟ್ ಜಲವಿದ್ಯುತ್, 4,124 ಮೆಗಾವ್ಯಾಟ್ ಪರಮಾಣು ವಿದ್ಯುತ್, 1,214 ಮೆಗಾವ್ಯಾಟ್ ನವೀಕರಿಸಬಹುದಾದ ವಿದ್ಯುತ್



ಮೂಲಗಳಿಂದ ಉತ್ಪಾದಿಸಲಾಗುತ್ತಿದೆ. ಇನ್ನು ಮುಂದಿನ ಹತ್ತು ವರ್ಷಗಳಲ್ಲಿ ಇನ್ನೂ 1,00,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಬೇಕೆಂದು ಯೋಜಿಸಲಾಗಿದೆ. ತಕ್ಷಣದಲ್ಲಿ ಉತ್ಪಾದಿಸಬಹುದಾದ 50,000 ಮೆಗಾವ್ಯಾಟ್‌ನಷ್ಟು ಜಲವಿದ್ಯುತ್‌ನ್ನು ಬಳಸಿಕೊಳ್ಳಲು ಸರ್ಕಾರ ಯಾವುದೇ ಅಗತ್ಯ ಯೋಜನೆ ರೂಪಿಸಿಲ್ಲ. ○



ಬೆನ್ನೇರಿ ಬರುವುದೇ ಕೋಮುವಾದದ ವಿಷ ಸರ್ಪ?

ಪುಟ 6 ರಿಂದ

ಬೆಳೆದ ನಂತರವೂ ಅದೇ ಒಳಚರಂಡಿ ವ್ಯವಸ್ಥೆಯಿಂದ ನಗರದ ನೈರ್ಮಲ್ಯ ಕಾಪಾಡಲು ಹೇಗೆ ಸಾಧ್ಯ? ಇತ್ತೀಚೆಗೆ ಹೊಸ ಒಳಚರಂಡಿ ವ್ಯವಸ್ಥೆಗಾಗಿ ಏಶ್ಯನ್ ಅಭಿವೃದ್ಧಿ ಬ್ಯಾಂಕಿನಿಂದ ಅಗಾಧ ಪ್ರಮಾಣದ ಸಾಲ ಪಡೆಯಲಾಗಿದೆ. ನಗರದ ಅನೇಕ ರಸ್ತೆಗಳನ್ನು ಅಗೆದು ಪೈಪ್ ಹಾಕಲಾಗಿದೆ. ಆದರೆ ಒಂದು ವರ್ಷದ ಹಿಂದೆ ಈ ಕಾಮಗಾರಿ ಇದ್ದಕ್ಕಿದ್ದಂತೆ ನಿಂತುಬಿಟ್ಟಿದೆ. ಅಗೆದ ರಸ್ತೆಗಳಿಗೆ ಡಾಮರು ಹಾಕಲಾಗಿದೆ. ಏನೂ ನಡೆದಿಲ್ಲವೇನೋ ಎಂಬಂತೆ ಒಳಚರಂಡಿ ಪೈಪುಗಳು ಭೂಮಿಯ ಅಡಿಯಲ್ಲಿ ಮಲಗಿವೆ. ಎಡಿಬಿ ಸಾಲದ ಹೊರೆ ಮಾತ್ರ ನಾಗರಿಕರು ಹೊರಬೇಕು. ಆದರೆ ಇಂತಹ ಸಮಸ್ಯೆಗಳ ಕುರಿತು ಕಾಂಗ್ರೆಸ್, ಬಿಜೆಪಿ ಕಾರ್ಪೊರೇಟರುಗಳು ತಲೆ ಕೆಡಿಸಿಕೊಳ್ಳುವುದಿಲ್ಲ.

ಪಾಲಿಕೆಯ 60 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ತಲಾ 59 ಸ್ಥಾನಗಳಿಗೆ ಸ್ಪರ್ಧಿಸಿವೆ. ಕಾಂಗ್ರೆಸ ಒಂದು ಸ್ಥಾನವನ್ನು ಸಿಪಿಐಗೆ ಬಿಟ್ಟುಕೊಟ್ಟಿದೆ. ಇತ್ತೀಚೆಗೆ ನಡೆದ ಉಳ್ಳಾಲ ವಿಧಾನಸಭಾ ಉಪಚುನಾವಣೆಯಲ್ಲಿ ಸಿಪಿಐ(ಎಂ)ನ ವಿರುದ್ಧ ಪ್ರಚಾರ ಮಾಡಿದ್ದಕ್ಕೆ ಪ್ರತಿಯಾಗಿ ಕಾಂಗ್ರೆಸ್ಸಿನವರು ಸಿಪಿಐಗೆ ಕೊಟ್ಟ ಮಾತಿಗೆ ಅನುಸಾರವಾಗಿ ಪಂಜಿಮೊಗರು ವಾರ್ಡನ್ನು ಬಿಟ್ಟುಕೊಟ್ಟಿದ್ದಾರೆ. ಜೆಡಿಎಸ್ 38, ಜೆಡಿಯು 2 ಮತ್ತು ಪಕ್ಷೇತರರು 60 ಮಂದಿ ಸ್ಪರ್ಧಿಸುತ್ತಿದ್ದಾರೆ. ಸಿಪಿಐ(ಎಂ) ಐದು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಯಾದವ ಶೆಟ್ಟಿ ಕಂಕನಾಡಿ ವಾರ್ಡಿನಿಂದ ಸ್ಪರ್ಧಿಸುತ್ತಿದ್ದಾರೆ. ಉಳಿದಂತೆ ಜಯಂತಿ ಬಿ.ಶೆಟ್ಟಿ(ಬಜಾಲ್) ದಿನೇಶ್ ಅಂಚನ (ಜಪ್ಪಿನಮೊಗರು), ದಯಾನಂದ ಶೆಟ್ಟಿ (ಪಂಜಿಮೊಗರು) ಮತ್ತು ಪ್ರಮಿಳ (ಪದವು ಸೆಂಟ್ರಲ್) ಇವರು ಸಿಪಿಐ(ಎಂ) ಅಭ್ಯರ್ಥಿಗಳು, ಮಹಾನಗರ ಪಾಲಿಕೆಯ ಒಂದನೇ ಮತ್ತು ಎರಡನೇ ಚುನಾವಣೆಗಳಲ್ಲಿ ಜಪ್ಪಿನಮೊಗರು ವಾರ್ಡಿನಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದ ಸದಾಶಿವ ಶೆಟ್ಟಿ ಈ ಸಲ ಪಕ್ಷ ತನ್ನನ್ನು ಅಭ್ಯರ್ಥಿಯನ್ನಾಗಿ ಆರಿಸಲಿಲ್ಲ ಎಂಬ ಕಾರಣಕ್ಕೆ ಬಿಜೆಪಿಗೆ ಸೇರಿ ಆ ಪಕ್ಷದ ಅಭ್ಯರ್ಥಿಯಾಗಿ ಅದೇ ವಾರ್ಡಿನಿಂದ ಸ್ಪರ್ಧಿಸುತ್ತಿರುವುದು ಪಕ್ಷಕ್ಕೆ ಎದುರಾಗಿರುವ ಸವಾಲಾಗಿದೆ. ಪಕ್ಷದ ಮಂಗಳೂರು ನಗರ ಸಮಿತಿಯು ಸದಾಶಿವ ಶೆಟ್ಟಿಯನ್ನು ಆತನ ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಿದೆ. ಮೂರು ದಶಕಗಳಿಂದ ಪಕ್ಷದಲ್ಲಿದ್ದು ಪಕ್ಷದಿಂದಾಗಿ ವಿವಿಧ ಸ್ಥಾನಮಾನಗಳನ್ನು ಗಳಿಸಿದ ವ್ಯಕ್ತಿ ಇಷ್ಟು ಕೀಳುಮಟ್ಟಕ್ಕೆ ಇಳಿದಿರುವುದು ಪಕ್ಷದ ಕಾರ್ಯಕರ್ತರಲ್ಲಿ ಆ ವ್ಯಕ್ತಿಯ ಬಗ್ಗೆ ತಿರಸ್ಕಾರ ಭಾವನೆಯನ್ನು ಮೂಡಿಸಿದೆ.

ಸವಾಲು ಸ್ವೀಕಾರ

ಜಪ್ಪಿನಮೊಗರಿನ ಸಿಪಿಐ(ಎಂ) ಕಾರ್ಯಕರ್ತರೂ ಹಿತೈಷಿಗಳೂ ಈ ಸವಾಲನ್ನು ಗಂಭೀರವಾಗಿ ಸ್ವೀಕರಿಸಿ ಸಿಪಿಐ(ಎಂ) ಅಭ್ಯರ್ಥಿ ದಿನೇಶ್ ಅಂಚನರ ಗೆಲುವಿಗಾಗಿ ದುಡಿಯುತ್ತಿದ್ದಾರೆ. ಜಪ್ಪಿನಮೊಗರು ಹಿಂದೆ ಗ್ರಾಮ ಪಂಚಾಯತ್ ಆಗಿದ್ದ ಕಾಲದಿಂದಲೂ ಅಲ್ಲಿ ಸಿಪಿಐ(ಎಂ) ಅಭ್ಯರ್ಥಿ ಜಯಂತಿ ಬಿ.ಶೆಟ್ಟಿಯವರು ಕೇವಲ 14 ಮತಗಳ ಅಂತರದಲ್ಲಿ ಸೋಲು ಅನುಭವಿಸಿದ್ದರು. ಈ ಸಲದ ಅಭ್ಯರ್ಥಿ ದಿನೇಶ್ ಅಂಚನೆ ಅವರು ಜನತೆಯ ನಡುವೆ ಸಕ್ರಿಯವಾಗಿ ಕೆಲಸ ಮಾಡುತ್ತಾ ಎಲ್ಲಾ ವಿಭಾಗಗಳ ಜನರ ವಿಶ್ವಾಸ ಮತ್ತು ಪ್ರೀತಿ ಗಳಿಸಿದವರು. ಜಪ್ಪಿನಮೊಗರು ಯುವಕ ಮಂಡಲದ ಅಧ್ಯಕ್ಷರಾಗಿ ದುಡಿಯುತ್ತಿರುವ ಉತ್ಸಾಹಿ ಯುವಕನಾದ ದಿನೇಶ್ ಅಂಚನರ ಗೆಲುವಿಗಾಗಿ ವಾರ್ಡಿನ ಯುವ ಜನರು ಸ್ಫೂರ್ತಿಯಿಂದ ಕೆಲಸ ಮಾಡುತ್ತಿದ್ದಾರೆ.

ಜನರ ಜೊತೆ ಬೆರೆಯುವವರು

ಯಾದವ ಶೆಟ್ಟರು ಸ್ಪರ್ಧಿಸುತ್ತಿರುವ ಕಂಕನಾಡಿ ವಾರ್ಡಿನಲ್ಲಿ ಕಾಂಗ್ರೆಸ್ ಮತ್ತು ಇತರ ಅಭ್ಯರ್ಥಿಗಳಿದ್ದರೂ, ಪ್ರಮುಖ ಸ್ಪರ್ಧೆ ಇರುವುದು ಯಾದವಶೆಟ್ಟಿ ಮತ್ತು ಬಿಜೆಪಿಯ ಭಾಸ್ಕರಚಂದ್ರ ಶೆಟ್ಟಿ ನಡುವೆ. ಹಿಂದೂ ಯುವ ಸೇನೆಯ ಅಧ್ಯಕ್ಷನೆಂಬುದನ್ನು ಬಿಟ್ಟರೆ ಜನಸೇವೆಯ ಯಾವ ಹಿನ್ನೆಲೆಯೂ ಇಲ್ಲದ ಬಿಜೆಪಿ ಅಭ್ಯರ್ಥಿ ಅಷ್ಟೇನೂ ಹೆಚ್ಚು ಮತಗಳಿಸಲಾರರು. ಕೋಮುವಾದಿ ಪ್ರಚಾರ ಮಾತ್ರ ಮಾಡುವವರಿಗೆ ಕಾರ್ಪೊರೇಟರ್ ಹುದ್ದೆ ಅಗತ್ಯವಿದೆಯೇ? ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಕಾರ್ಮಿಕರ ಮತ್ತು ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಅಹೋರಾತ್ರಿ ದುಡಿಯುವ ಕೋಮು ಸೌಹಾರ್ದತೆಗಾಗಿ ಜನರ ನಡುವೆ ಬೆರೆತು ಕೆಲಸ ಮಾಡುವ ಯಾದವಶೆಟ್ಟರಿಗೆ ವಿಜಯದ ಸಾಧ್ಯತೆ ಉಜ್ವಲವಾಗಿದೆ.

ಕಾರ್ಮಿಕ ನಾಯಕಿ

ಬಜಾಲು ಮಹಿಳಾ ಮೀಸಲು ಕ್ಷೇತ್ರದಿಂದ ಸಿಐಟಿಯು ನಾಯಕಿ ಜಯಂತಿ ಬಿ.ಶೆಟ್ಟಿ ಸ್ಪರ್ಧಿಸುತ್ತಿದ್ದಾರೆ. ಬೀಡಿ ಕಾರ್ಮಿಕರ ಮತ್ತು ಅಲ್ಪಸಂಖ್ಯಾತರ ಮತಗಳು ಇಲ್ಲಿ ನಿರ್ಣಾಯಕ. ಸಿಪಿಐ(ಎಂ) ಅಭ್ಯರ್ಥಿ ಬಜಾಲು ಪ್ರದೇಶವನ್ನೂ ಒಳಗೊಂಡ ಅಳವೆ ಪ್ರದೇಶ ಬೀಡಿ ಲೇಬರ್ ಯೂನಿಯನ್ನಿನ ಕಾರ್ಯದರ್ಶಿಯಾಗಿ ಈ ವಾರ್ಡಿನ ಜನರ ನಡುವೆ ದಿನನಿತ್ಯ ಓಡಾಡಿ ಕೆಲಸ ಮಾಡುತ್ತಿರುವವರು. ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಸಿಪಿಐ(ಎಂ) ಮುಂಚೂಣಿಯಲ್ಲಿದ್ದು ದುಡಿಯುತ್ತಿದೆ ಎಂಬುದು ಮುಸ್ಲಿಂ ಮತದಾರರಿಗೆ ಗೊತ್ತಿದೆ. ಈ ಕ್ಷೇತ್ರದಲ್ಲಿ ಸ್ವಾಭಾವಿಕವಾಗಿಯೇ ಸಿಪಿಐ(ಎಂ) ಅಭ್ಯರ್ಥಿಯ ಗೆಲುವಿನ ಸಾಧ್ಯತೆ ಪ್ರಬಲವಾಗಿದೆ.

ಪಂಜಿಮೊಗರು ವಾರ್ಡಿನಲ್ಲಿ ಸಿಪಿಐ(ಎಂ) ಅಭ್ಯರ್ಥಿ, ಡಿವೈಎಫ್ಐನ ಉತ್ಸಾಹಿ ಯುವನಾಯಕ ದಯಾಂದ ಶೆಟ್ಟಿ ಅವರು ಕಾಂಗ್ರೆಸ್ ಬೆಂಬಲಿತ ಸಿಪಿಐ ಅಭ್ಯರ್ಥಿ ಬಿ.ಕೆ.ಕೃಷ್ಣಪ್ಪ ಅವರನ್ನು ಎದುರಿಸುತ್ತಿದ್ದಾರೆ. ಹಿಂದೆ ಕಾಂಗ್ರೆಸನ್ನು ಬೆಂಬಲಿಸುತ್ತಿದ್ದ ಬಹುಸಂಖ್ಯೆಯ ಮುಸ್ಲಿಂ ಯುವಕರು ದಯಾನಂದ ಶೆಟ್ಟರ ಗೆಲುವಿಗಾಗಿ ಹಗಲಿರುಳೂ ದುಡಿಯುತ್ತಿದ್ದಾರೆ. ಗೆಲ್ಲುವ ಭರವಸೆ ದಿನಕಳೆದಂತೆ ಉಜ್ವಲವಾಗುತ್ತಿದೆ.

ಮಹಿಳಾ ಧುರೀಣೆ

ಬೀಡಿ ಕಾರ್ಮಿಕರೇ ಅಧಿಕ ಸಂಖ್ಯೆಯಲ್ಲಿರುವ ಪದವೂ ಸೆಂಟ್ರಲ್ ವಾರ್ಡಿನಲ್ಲಿ ಸಿಪಿಐ(ಎಂ) ಅಭ್ಯರ್ಥಿ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಪ್ರಮಿಳ ಸ್ಪರ್ಧಿಸುತ್ತಿದ್ದಾರೆ. ಕಾಂಗ್ರೆಸ್ಸಿನಿಂದ ಮಾಜಿ ಮೇಯರ್ ವಿಜಯಾ ಅರುಣ್, ಪಕ್ಷೇತರರಾಗಿ ಬಿಜೆಪಿಯ ಮಾಜಿ ಪ್ರತಿಪಕ್ಷ ನಾಯಕಿ ಮರಿಯಮ್ಮ ಥಾಮಸ್ ಅಲ್ಲದೆ ಬಿಜೆಪಿಯ ಅಧಿಕೃತ ಅಭ್ಯರ್ಥಿ ಮತ್ತಿತರರು ಸ್ಪರ್ಧೆಯಲ್ಲಿದ್ದಾರೆ. ಸಿಪಿಐ(ಎಂ) ಅಭ್ಯರ್ಥಿಯ ಪ್ರಚಾರ ಕಾರ್ಯ ಬಿರುಸಿನಿಂದ ನಡೆಯುತ್ತಿದೆ. ○

ಪಾಲಿಕೆಯ ಮಾಸಿಕ ಸಭೆಯಲ್ಲಿ ತಲೆ ಕೆಳಗೆ ಕಾಲು ಮೇಲೆ ಮಾಡಿ ಶೀರ್ಷಾಸನ ಮಾಡಿದ ಕಾರ್ಪೊರೇಟರ್

ಬಿ.ಜೆ.ಪಿ ಎಂತಹ ಅಸಭ್ಯತನ ಅಶ್ಲೀಲತೆಯ ಹರಿಕಾರ ಎಂಬುದಕ್ಕೆ ಈಗ್ಗೆ ಒಂದು ವರುಷದ ಹಿಂದೆ ಮಹಾನಗರ ಪಾಲಿಕೆಯ ಮಾಸಿಕಸಭೆಯಲ್ಲಿ ಬಿಜೆಪಿಯ ಸದಸ್ಯನೊಬ್ಬ ಅಸಭ್ಯತನಮತ್ತು ಅಶ್ಲೀಲತೆಯ ರೀತಿಯಲ್ಲಿ ಶೀರ್ಷಾಸನ ಮಾಡಿದ್ದೂ ನಡೆದಿದೆ. ಆಡಳಿತರೂಢ ಕಾಂಗ್ರೆಸು ಮತ್ತು ಬಿಜೆಪಿಯವರು ಇದನ್ನು ಮೂಕಪ್ರೇಕ್ಷಕರಂತೆ ನೋಡಿದರೆ ವಿನಹ ಪ್ರತಿಭಟಿಸಲಿಲ್ಲ. ಸುಮಾರು 10 ನಿಮಿಷ ಈ ರೀತಿ ವರ್ತಿಸಿದ್ದು ಸಂಸದೀಯ ಜನತೆಗೆ ಕಪ್ಪು ಚುಕ್ಕೆಯಲ್ಲವೇ? ಇಂತಹ ಸದಸ್ಯರುಗಳಿಂದ ಯಾವ ನೈತಿಕತೆ ಮತದಾರ ಕಲಿಯಲು ಸಾಧ್ಯ.

ಸಿನಿಮಾಗಳಲ್ಲಿ 'ನಾಯಕಿ'ಯರ ಕಲ್ಪ



■ ಕಿಟ್ಟಿ

ನಮ್ಮ ವ್ಯಾಪಾರಿ ಚಲನಚಿತ್ರಗಳಲ್ಲಿ ಹೀರೋ, ವಿಲನ್ ಎಂದರೆ ಕೆಲವು ಸಿದ್ಧ ಸೂತ್ರಗಳಿರುವಂತೆಯೇ. ನಾಯಕಿ- ಹೀರೋಯಿನ್ ಎಂದರೂ ಸಹ ಕೆಲವು ಸಿದ್ಧಸೂತ್ರಗಳು ಕೆಲವು ಒಂದು ನಿರ್ಧಿಷ್ಟ ಕಲ್ಪನೆ ಇದೆ.

ಬಹಳ ಸಾರಿ ಈ ಸಿನಿಮಾಗಳಲ್ಲಿ ನಾಯಕನ ವಿಜೃಂಭಣೆಯೇ ತುಂಬಿಕೊಂಡಿರುತ್ತದೆ. ನಾಯಕ ಶೂರ, ನಾಯಕ ಧೀರ, ಅವನು ಹೊಡೆದಾಡುತ್ತಾನೆ. ಅವನು ಹಾಡುತ್ತಾನೆ. ಅವನು ಕುಣಿಯುತ್ತಾನೆ. ಆಟದಲ್ಲಿ ಓಟದಲ್ಲಿ ಕೂಟದಲ್ಲಿ ಎಲ್ಲೆಲ್ಲೂ ಅವನು ಮುಂದೆಯೇ ಅವನೊಬ್ಬ ಚೆಲುವ ಚೆನ್ನಿಗ.

ಇಂತಿಪ್ಪ ಚಲುವ ಚೆನ್ನಿಗನಿಗೆ ಜೊತೆಯಲ್ಲಿ ಕುಣಿಯಲು ಒಂದು ಹೆಣ್ಣು ಬೊಂಬೆ ಬೇಕು. ಅದೇ ನಾಯಕಿಯ ಪಾತ್ರ. ಈ ನಾಯಕಿ ಬೊಂಬೆ ಎಂದರೆ ಬೊಂಬೆಯೇ. ಅದೂ ಚೆಂದದ ಬೊಂಬೆ. ಆಕೆಗೊಂದು ಸ್ವತಂತ್ರ ವ್ಯಕ್ತಿತ್ವವಿಲ್ಲ. ಸ್ವಂತಿಕೆಯಂತೂ ಇಲ್ಲವೇ ಇಲ್ಲ. ನಾಯಕನ ನೆರಳು.



ರಾಧಿಕಾ

ಪಾರ್ಕುಗಳಲ್ಲಿ ನಾಯಕನ ಕೈಹಿಡಿದು ಮರ ಸುತ್ತುವುದು, ಬೀದಿಗಳಲ್ಲಿ ನಾಯಕನ ಜೊತೆ ಕುಣಿಯುವುದು ಈಕೆಯ ಒಂದು ಪರಮ ಉದ್ಯೋಗ. ಖಳನಾಯಕರು, ಗೂಂಡಾಗಳೂ ನಾಯಕಿಯನ್ನು ಕೆಣಕುವುದು, ದಾರಿಯಲ್ಲಿ ಅಡ್ಡಬಂದು ಕಾಡುವುದು, ಅಪಹರಿಸಿಕೊಂಡು ಹೋಗಿ ಅತ್ಯಾಚಾರಕ್ಕೆ ಯತ್ನಿಸುವುದು ಇಂತಹ ಹಲವು ದೃಶ್ಯಗಳು ಸಿನಿಮಾಗಳಲ್ಲಿ ಬರುವುದು ಮಾಮೂಲು. ಇಲ್ಲಿ ಸಾಮಾನ್ಯವಾಗಿ ಇವೆಲ್ಲಾ ನಾಯಕನ ಪ್ರತಾಪ, ಸಾಹಸಗಳನ್ನು ಪ್ರದರ್ಶಿಸಲು ಒಂದೊಂದು ನೆಪಗಳಷ್ಟೆ. ಈ ಬಗ್ಗೆ ಒಂದು ತಮಾಷೆಯ ಮಾತಿದೆ. ಈ ಸಿನಿಮಾಗಳಲ್ಲಿ ನಾಯಕ ನಾಯಕಿಯನ್ನು ಮುಟ್ಟಿದರೆ ಹಾಡು; ವಿಲನ್ ನಾಯಕಿಯನ್ನು ಮುಟ್ಟಿದರೆ ಫೈಟು.

ವಿಲನ್‌ಗಳು ಈ ನಾಯಕಿಯ ಮೈಮೇಲೆ ಬಿದ್ದಾಗ ಈ ನಾಯಕಿಯ ಪ್ರತಿಕ್ರಿಯೆ ಏನು ಎಂಬುದನ್ನು ಗಮನಿಸಬೇಕು. ನಾಯಕನನ್ನು ಕರೆಯುವುದು ಬಿಟ್ಟರೆ ಅಕ್ಕಪಕ್ಕದವರು ನೆರೆ ಹೊರೆಯವರನ್ನು ಸಹಾಯಕ್ಕೆ ಕರೆಯುವುದೇ ಇಲ್ಲ. ಅವರು ಬರುವುದೂ ಇಲ್ಲ. ನಾಯಕಿಯ ಮೊರೆ ಕೇಳಿ ಅಥವಾ ಕೇಳದೇ ಇದ್ದರೂ ಎಲ್ಲಿದ್ದರೂ ನಾಯಕ 'ಸರಿಯಾದ ಸಮಯ'ಕ್ಕೆ ಅಲ್ಲಿಗೆ ಹಾಜರ್. ಆಮೇಲೆ ನಾಯಕ ಏಕಾಂಗಿಯಾಗಿ ಗೂಂಡಾಗಳನ್ನು ಚಚ್ಚಿ ಬಿಸಾಡುವುದು, ಅವರನ್ನು ಹಣ್ಣುಗಾಯಿ ನೀರುಗಾಯಿ ಮಾಡುವುದು... ಇವೆಲ್ಲಾ ನಡೆಯುವಾಗ ನಾಯಕಿಯ ಕೆಲಸ ಏನು? ಬಡಿದಾಟ ನೋಡಿಕೊಂಡು ಚಪ್ಪಾಳೆ ತಟ್ಟುವುದು. ಚಚ್ಚು, ಬಡಿ ಎಂದು ನಾಯಕನನ್ನು ಹುರಿದುಂಬಿಸುವುದು, ನಾಯಕ ಗೂಂಡಾಗಳನ್ನು ಬಡಿಯುತ್ತಿದ್ದರೆ ಅದನ್ನು ನೋಡಿ ಕುಣಿದಾಡುವುದಷ್ಟೇ ಆಕೆಯ ಕೆಲಸ.

ಈ ನಾಯಕಿ ಗೂಂಡಾಗಳು ತನ್ನ ಮೇಮೇಲೆ ಬಿದ್ದಾಗ ಒಂದಾದರೂ ತಿರುಗೇಟು ಕೊಡಲಾರಳು, ಕನಿಷ್ಟ ಪರಚುವುದು, ಕಚ್ಚುವ ಮೂಲಕವಾದರೂ ಪ್ರತಿರೋಧ ತೋರಲಾರಳು, ಗೆಳತಿಯರ ದೊಡ್ಡ ಹಿಂಡೇ ಇದ್ದರೂ ಸಾಮೂಹಿಕವಾಗಿ ಯಾದರೂ ಒಂದು ಸಣ್ಣ ಪ್ರತಿರೋಧ ಒಡ್ಡಲಾರರು. ಶ್ರೀಕೃಷ್ಣ ಪರಮಾತ್ಮನಂತೆ ನಾಯಕನೇ ಬರಬೇಕು. ನಾಯಕನ ದುಸ್ಸಾಹಸಗಳಿಗೆ ಮಾತ್ರ ಮಿತಿಯೇ ಇಲ್ಲ.

ನಾಯಕಿ-ತಂಗಿ ವ್ಯತ್ಯಾಸಗಳು

ಈ ಸಿನಿಮಾಗಳಿಗೆ ನಾಯಕನೇ ಕೇಂದ್ರ. ಆದ್ದರಿಂದ ನಾಯಕನ ಮೂಲಕವೇ ಎಲ್ಲವನ್ನೂ ನೋಡಲಾಗುತ್ತದೆ. ಸಿನಿಮಾದ ನಾಯಕಿ ಸಾಮಾನ್ಯವಾಗಿ ತಳುಕು ಬಳುಕಿನ ಬೆಡಗಿಯಾಗಿರುತ್ತಾಳೆ. ಮಿನಿ, ಮಿಡಿ, ಚೂಡಿ, ಜೀನ್ಸ್ ಎಲ್ಲವನ್ನೂ ತೊಡುವ ವೈಯ್ಯಾರಿ ಈ ನಾಯಕಿ. ಆದರೆ ಪಾಪ ಹೀರೋಗಳ ತಂಗಿಯರ ಪಾಡು ನೋಡಿ. ಹೆಚ್ಚಿನ ಸಾರಿ ನಾಯಕನ ತಂಗಿ ಲಂಗ ದಾವಣಿ ಹಾಕಿಕೊಂಡಿರುತ್ತಾಳೆ. ಇಲ್ಲವೇ ಸೀರೆ ತೊಟ್ಟಿರುತ್ತಾಳೆ. ಕೈಯಲ್ಲಿ ಈಕೆ ಪುಸ್ತಕ ಹಿಡಿದು ಮನೆಯಿಂದ ಹೊರಗೆ ಕಾಲಿಟ್ಟಾಗ ತಲೆ ತಗ್ಗಿಸಿದವಳು ಮತ್ತೆ ಕಾಲೇಜಿನ ಬಳಿ ಬಂದಾಗಲೇ ತಲೆ ಎತ್ತುವುದು. ಇತ್ತೀಚಿನ ಪರಿಸ್ಥಿತಿಯಲ್ಲಿ ಸಿನಿಮಾಗಳಲ್ಲಿನ ಈ ಚಿತ್ರಣ ಸ್ವಲ್ಪ ಬದಲಾಗಿದ್ದರೂ ಪೂರ್ತಿ ಚಿತ್ರವೇನೂ ಬದಲಿಸಿಲ್ಲ.

ಕೆಲವು ಪಡ್ಡೆ ಹುಡುಗರಿರುತ್ತಾರೆ. ತಾವು ಊರಿನ ಹೆಣ್ಣುಮಕ್ಕಳ ಮೇಲೆಲ್ಲಾ ಕಣ್ಣು ಹಾಕಿದರೂ ತಮ್ಮ ಮನೆ ಹೆಣ್ಣುಮಕ್ಕಳನ್ನು ಯಾರೂ ಕಣ್ಣೆತ್ತಿಯೂ ನೋಡಬಾರದು. ಇದೇ ಮನಸ್ಥಿತಿ ಈ 'ನಾಯಕಿ' ಮತ್ತು 'ತಂಗಿ' ಕಲ್ಪನೆ ಗಳಲ್ಲೂ ವ್ಯಕ್ತವಾಗುತ್ತದೆ.

'ಆಮದು ಬೊಂಬೆ'ಯೇ ಚೆನ್ನ



ಸಾಕ್ಷಿ ಶಿವಾನಂದ

ಆದೇಕೋ ಏನೋ ನಮ್ಮ ಪರಿಸರದ, ಸ್ಥಳೀಯರಾದ ನಾಯಕಿಯರಲ್ಲಿ ಅಷ್ಟೇನೂ 'ಗ್ಲಾಮರ್' ಇಲ್ಲ ಎಂದು ಬಹುತೇಕ ಜನ ನಿರ್ದೇಶಕರೂ, ನಿರ್ಮಾಪಕರೂ ಭಾವಿಸುತ್ತಾರೆ. ಬಹಳ ಸಾರಿ ಹೀರೋಗಳಾಗಿ ಸ್ಥಳೀಯರು ಅಥವಾ ತಮ್ಮ ಭಾಷೆಯನ್ನರನ್ನೇ ಬಯಸುವ ಜನರು ನಾಯಕಿಯರು ಮಾತ್ರ ಪರಭಾಷೆಯ, ದೂರದ ರಾಜ್ಯಗಳ ಯುವತಿಯರನ್ನು ಒಪ್ಪಿಕೊಳ್ಳುವ ಸಂಗತಿಯೂ ಕುತೂಹಲಕರ.

ತಮಿಳು, ತೆಲುಗು, ಹಿಂದಿ ಸಿನಿಮಾಗಳ ನಾಯಕಿಯರಿಗೆ ನಾವೇನೂ ಕಡಿಮೆ ಇಲ್ಲ ಎಂದು ಹಲವು ನಮ್ಮ ನಾಡಿನ ನಾಯಕಿರು 'ಸಾಧಿಸಿ ತೋರಿಸಿದರೂ' ಯಾಕೋ ನಮ್ಮ ನಿರ್ಮಾಪಕ, ನಿರ್ದೇಶಕರಿಗೆ ಕೆಲವು ಪ್ರೇಕ್ಷಕ ವಿಭಾಗಗಳಿಗೂ ಪಾಪ ತೃಪ್ತಿಯೇ ಇಲ್ಲ.

ನಿಜ ಜೀವನಕ್ಕೂ ವಿಸ್ತರಿಸಿಕೊಳ್ಳುವ 'ಸಿನಿಮಾ'

ಲಕ್ಷಾಂತರ, ಕೋಟ್ಯಾಂತರ ಜನರ 'ಆರಾಧ್ಯ ಧೈವ'ಗಳಾಗಿ ಮೆರೆಯುವ, ಹಲವಾರು ದಶಕಗಳ ಕಾಲ ಚಿತ್ರರಂಗದ ನಕ್ಷತ್ರಗಳಾಗುವ ಅವಕಾಶಗಳೆಲ್ಲಾ ಸಾಮಾನ್ಯವಾಗಿ ನಾಯಕರಿಗೆ ಮಾತ್ರ. ಸಾಮಾನ್ಯವಾಗಿ 2ರಿಂದ 3 ವರ್ಷ ಚಾಲ್ತಿಯಲ್ಲಿದ್ದರೆ ಹೆಚ್ಚು. ಕೆಲವರು ತಮ್ಮ ಇತ್ಯಾದಿಗಳಿಂದ ಮೋಡಿ ಮಾಡಿ ಉ ಅದೂ ಕೆಲವೇ ವರ್ಷಗಳೇ. ದಶ ನಾಯಕಿಯಾಗಿ ಮೆರೆಯುವುದು ತೀರಾ ಅ ಯಂತಹ ಸಂಖ್ಯೆ ಎಷ್ಟಿದೆ ನಾಯಕಿಯರ

ನಾಯಕನ ತಲೆಕೂದಲು ಉದುರಿ, ಬಿಳಿಯಾಗಿ ಕುಣಿಯುವುದು ಕಷ್ಟವಾದರೂ(ಅವರನ್ನು ರಕ್ಷಿಸುತ್ತದೆ) ಆತನಿಗೆ ಜೋಡಿ ನಾಯಕಿ ಮಾತ್ರ 18ರಿಂದ 20ರ ಯುವ ಇದಕ್ಕೆ ಅಪವಾದಗಳು ಸಿಗುವುದು ಕೆಲವೇ

ನಾಯಕರು ನಿಜ ಜೀ ಯಾವಾಗ ಬೇಕಾ ಮದುವೆಯಾಗಲು ಯ ಅಡ್ಡಿಯಿಲ್ಲ. ಆಗಿರುವ ಮುರಿದು ಮತ್ತೆ ಮದುವೆಯಾದರೂ ಅದು ಜನರಿಗೆ ಅದು ಅಷ್ಟು ವಿಷಯವಾಗುವುದೇ ಇಲ್ಲ ಸಿನಿಮಾಗಳಲ್ಲಿ ಎ ಮದುವೆಗಳನ್ನು ಆಗುವ, ದೃಶ್ಯಗಳಲ್ಲಿ ಲೀಲಾಜಾ ಅಭಿನಯಿಸುವ ನಾಯಕಿಯರು ನಿಜ ಜೀ ಮದುವೆ ಎಂದರೆ ಬೆಚ್ಚಿಬೀಳುತ್ತಾರೆ.

ಮದುವೆಯಾದರೆ ಮುಗಿಯಿತು. ಜೀವನವೂ ಮುಗಿದುಹೋಗುತ್ತದೆ ಪಾಲಿಗೆ. ತಾಯಿಯಾಗ ಮದುವೆಯಾಗಿಬಿಟ್ಟರೆ 'ಗ್ಲಾಮರ್' ಪುರುಷನಿಗಿಲ್ಲದ ಈ ಆತಂಕ ಮಹಿಳೆಯ ಯಾಕೋ? ಇಂತಹದ್ದೇ ಕಾರಣಕ್ಕೆ ನಾಯ ವಯಸ್ಸನ್ನೇ ಹೇಳುವುದಿಲ್ಲ. ತಮ್ಮ ಬಿನ್ನಾಣಗಳಿಂದ ಲಕ್ಷ ಲಕ್ಷ ಯುವಕರ ನಿ ಸಿನಿಮಾ ನಾಯಕಿ ತಾನು ಮದುವೆಯಾಗಿ ದಾಂಪತ್ಯವನ್ನು ಹೊಂದಲು ಎಷ್ಟೆಷ್ಟೋ ಕಾಲ ಮದುವೆ ಮುಂದೂಡುತ್ತಾ ಹೋ ಸ್ಥಿತಿ ಬಹಳ ವಿಚಿತ್ರವಾಗಿದೆ.

ಕ್ರೀಡಾರಂಗದ ಕೆಲವು ಮಿಂಚುಗಳು

ಭಾರತೀಯ ಆಟಗಾರರು ಕ್ರಿಕೆಟ್ ಮತ್ತು ಟೆನ್ನಿಸ್ ಆಟಗಳನ್ನು ಹೊರತುಪಡಿಸಿ ಇತರೇ ಆಟಗಳಲ್ಲೂ ವಿಶ್ವಮಟ್ಟದ ಸಾಧನೆ ಮಾಡುತ್ತಿರುವುದು ಒಂದು ಗಮನಾರ್ಹ ಅಂಶ. ಮೊನ್ನೆ ಸಿಂಗಪೂರದಲ್ಲಿ ನಡೆದ ವಿಶ್ವ ಬಿಲಿಯರ್ಡ್ಸ್ ಸ್ನೂಕರ್ ಪ್ರಶಸ್ತಿ'ಯನ್ನು ಭಾರತೀಯ ಆಟಗಾರ ಕರ್ನಾಟಕದ ಪಂಕಜ್ ಅಡ್ವಾಣಿ 2ನೇ ಬಾರಿಗೆ ತನ್ನದಾಗಿಸಿಕೊಂಡಿದ್ದಾರೆ.

ಪುರುಷರ ವಿಶ್ವಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಬೆಂಗಳೂರಿನ ಯುವ ಆಟಗಾರ ಪಂಕಜ್ ನಮ್ಮದೇ ದೇಶದ ಧ್ರುವಾಸಿತ್ವಾಲ್ ವಿರುದ್ಧ 1963-1489 ಪಾಯಿಂಟ್‌ಗಳ ಅಂತರದಲ್ಲಿ ಗೆಲುವು ಸಾಧಿಸಿ ಸಂಭ್ರಮಿಸಿದರು. ಪಂಕಜ್ 4ನೇ ಬಾರಿಗೆ ವಿಶ್ವಮಟ್ಟದ ಪ್ರಶಸ್ತಿ ಪಡೆದಿರುವುದು ವಿಶೇಷ. ಆರು ಗಂಟೆಗಳ ಕಾಲ ನಡೆದ ಆಟದಲ್ಲಿ ಪಂಕಜ್ ಅಡ್ವಾಣಿ 177, 240, 210 ಮತ್ತು 214 ಪಾಯಿಂಟ್ ಗಳಿಸುವ ಮೂಲಕ ಧ್ರುವಾಸಿತ್ವಾಲ್ ವಿರುದ್ಧ ಗೆಲುವು ಸಾಧಿಸಿದರು.

ಇನ್ನೂ 22ರ ಹರೆಯದ ಪಂಕಜ್ ಇಷ್ಟು ಚಿಕ್ಕ ವಯಸ್ಸಿನಲ್ಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಕ್ರೀಡಾಕ್ಷೇತ್ರಕ್ಕೆ ತನ್ನದೇ ಆದ ಕಾಣಿಕೆ ಕೊಡುತ್ತಿರುವುದು ಒಂದು ವಿಶೇಷ.



ಪಂಕಜ್ ಅಡ್ವಾಣಿ



ತಾನಿಯಾ



ಜೂಲನ್ ಗೋಸ್ವಾಮಿ

ಭಾರತದ ಕ್ರೀಡೆಗೆ ಮತ್ತೊಂದು ಅಂತರರಾಷ್ಟ್ರೀಯ ಪ್ರಶಸ್ತಿ ಬಂದಿದೆ. ಅದು ಕ್ರಿಕೆಟ್‌ನಲ್ಲಿ. ಇದೇನಪ್ಪ ನಾವೆಲ್ಲ ನಮ್ಮ ದೇಶದ ಯಾವುದೇ ಕ್ರಿಕೆಟ್ ಮ್ಯಾಚ್‌ಗಳನ್ನು ಬಿಡದೆ ನೋಡುತ್ತೇವೆ. ಪ್ರಸ್ತುತ ನಮ್ಮ ಕ್ರಿಕೆಟ್ ತಂಡಕ್ಕೆ ಯಾವುದೇ ಅಂತರ್‌ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳು ಬಂದಿಲ್ಲ ಎಂಬ ಅನಿಸಿಕೆ ಕೆಲವರಿಗೆ ಬರುವುದು ಸಾಧ್ಯ.

ಕ್ರಿಕೆಟ್ ಅಂದರೆ ಬರೀ ಪುರುಷರ ಕ್ರಿಕೆಟ್ ಆಟಗಾರರ ಹೆಸರುಗಳೇ ಎಲ್ಲರ ಬಾಯಲ್ಲೂ ಬರುತ್ತದೆ. ಆದರೆ ಈ ಬಾರಿಯ ಐಸಿಸಿ ಪ್ರಶಸ್ತಿಯ ವರ್ಷದ ಕ್ರಿಕೆಟ್ ಆಟಗಾರ್ತಿಯಾಗಿ ನಮ್ಮದೇಶದ ವೇಗದ ಬೌಲರ್ ಜೂಲನ್ ಗೋಸ್ವಾಮಿ ಅವರಿಗೆ ಸಂದಿದೆ.

ಇದೊಂದು ಹೆಮ್ಮೆಯ ವಿಷಯವಾಗಿದೆ. ನಮ್ಮ ದೇಶದಲ್ಲಿ ಪುರುಷರ ಕ್ರಿಕೆಟ್‌ಗೆ ಇರುವ 'ಹುಚ್ಚು' ಮತ್ತು ಪ್ರೋತ್ಸಾಹ ಮಹಿಳಾ ಕ್ರಿಕೆಟಿಗರಿಗೆ ಇರುವುದು ಕಡಿಮೆಯೆ. ಆದರೆ ಈ ಪ್ರಶಸ್ತಿ ಭಾರತೀಯ ಮಹಿಳಾ ಕ್ರಿಕೆಟ್‌ಗೆ ಬಂದಿರುವುದು ಎಲ್ಲರ ಗಮನ ಸೆಳೆದಿರುವುದು ಸಂತೋಷದ ವಿಷಯ.

23 ವರ್ಷದ ಯುವತಿ ಮೊದಲ ಬಾರಿಗೆ ಐಸಿಸಿ ವರ್ಷದ ಪ್ರಶಸ್ತಿ ಗಳಿಸಿರುವುದು. ಭಾರತೀಯ ಮಹಿಳಾ ಕ್ರಿಕೆಟ್‌ಗೆ ಒಂದು ಗರಿ ಬಂದಂತಾಗಿದೆ. ಮಹಿಳಾ ಕ್ರಿಕೆಟ್ ವಿಭಾಗದಲ್ಲಿ ಭಾರತೀಯ ಆಲ್‌ರೌಂಡರ್ ಆಟಗಾರ್ತಿ ಜ ಗೋಸ್ವಾಮಿಗೆ ಈ ಪದಕಕ್ಕಾಗಿ ಅಂ ಪ್ರಬಲ ಪೈಪೋಟಿ ನೀಡಿದ ಇತರೇ ಸ್ಪರ್ಧಿಗಳೆಂದರೆ ಆಸ್ಟ್ರೇಲಿಯಾದ ಲಿಸಾ ಮತ್ತು ಇಂಗ್ಲೆಂಡಿನ ಕ್ಲೈರ್ ಟೇಲರ್ ಹಿಂದಿಕ್ಕಿದ ವಿಶ್ವ ವೇಗದ ಮಹಿಳಾ (ಗಂಟೆಗೆ 120 ಕಿ.ಮೀ) ಜೂಲನ್ ಬೌಲ್ ಮಾಡಿ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದಾರೆ.

ಭಾರತದ ಒಂದು ಚಿಕ್ಕ ಊರಲ್ಲಿ ಹು ಈ ಯುವತಿ ವಿಶ್ವ ಕ್ರಿಕೆಟ್‌ನಲ್ಲಿ 'ವರ್ಷದ ಆಟಗಾರ್ತಿ' ಪ್ರಶಸ್ತಿ ಪಡೆದಿದ್ದಾರೆ. ಬಂಗಾಳದ 'ಚಕ್ದಾ' ಎಂಬ ಊರಿನ ಹುಡ

ಅದೇ ರೀತಿ ಮತ್ತೊಬ್ಬ ಯುವ ದೇಶದ ತಾನಿಯಾ ಸಚ್‌ದೇವ್ ಏಷ್ಯಾ ಚೆಸ್ ಚಾಂಪಿಯನ್‌ಷಿಪ್‌ನ್ನು ತ ಕೊಂಡಿದ್ದಾರೆ. ಮೊನ್ನೆ ಇರಾನ್ ದ ಟೆಹರಾನ್‌ನಲ್ಲಿ ನಡೆದ ಅಂತಿಮ ಸು ಪಂದ್ಯದಲ್ಲಿ ಚೀನಾದ ಜುವೆಂಜುನ್ ವಿ ಸಾಧಿಸಿ ಜಯ ಸಾಧಿಸಿದ್ದಾರೆ. ಇಬ್ಬರು ಪಾಯಿಂಟ್‌ಗಳಿದ್ದರು. ಆದರೆ ತಾನಿಯಾ ಟೈಬ್ರೇಕರ್ ಪಾಯಿಂಟ್ ಹೊಂದಿದ್ದರಿಂ ಪದಕವನ್ನು ತನ್ನದಾಗಿಸಿಕೊಂಡರು. ಈ ಗೆ ಮುಂದಿನ ವಿಶ್ವ ಚೆಸ್ ಚಾಂಪಿಯನ್ ಆಡಲು ಅರ್ಹತೆ ಪಡೆದಿದ್ದಾರೆ.

- ಶ್ರೀರಂಗನಾಯಕ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH